ಪಂಚಮ

ಅಂಬೇಡ್ಕರ್ ನೆನಪಿನ ಸಂಚಿಕೆ

ಏಪ್ರಿಲ್-ಮೇ 1981

ಬೆಲೆ 1-50ರೂ.

ಬಾಬಾ ಸಾಹೇಬ

ಚೆನ್ನಣ್ಣ ವಾಲೀಕಾರ

ನೀ ಹೋದ ಮರುದೀನ ಮೊದಲಂಗ ನಮ್ಮ ಬದುಕು
ಆಗ್ಯಾದೊ ಬಾಬಾ ಸಾಹೇಬ
ನಿನ್ಹಂಗ ದುಡಿವವರು ಕಳಕಳಿಯ ಪಡುವವರು
ಇನ್ನೂತನ ಬರಲಿಲ್ಲ ಒಬ್ಬ

ಪ್ರತಿನಿತ್ಯ ಎದ್ದಾಗ ನಮಸುದ್ದಿ ಸಂಭ್ರಮಾವು
ತೇಕುವ್ರದು ತಪ್ಪಿಲ್ಲ ನಮಗ
ಹ್ವಾದ ಹ್ವಾದಲ್ಲೆಲ್ಲ ಮೇಲವರ ಆಟಗಳು
ಉರಿಹಚ್ಚಿ ಬಿಡತಾರ ಒಳಗ


ಎಲ್ಲಿ ಕೇಳಿದರಲ್ಲಿ ಬೂಟು ಗಾಲಿನ ಸದ್ದು
ತರತರದ ನೋವ್ರಗಳು ನಮಗ
ತಮ್ಮಂಗ ಇರದಿದ್ರ ತಲೆಕಡೆದು ಹಾಕುವರು
ಹೆಸರೀಗ ಸ್ವಾತಂತ್ರ್ಯ ನಮಗ

ಹೋಗ್‌ಬರೊ ದಾರೀಲಿ ಅಡಗಾಲುಗಳು ಕೇರಿ
ಮುಳ್ಕಲ್ಲು ಹಾಸ್ಯಾವ ಪೂರ
ಹೆಚ್ಚೀಗಿ ಬೆಳೆದವರ ಉಳದವರ ಜೀವಗಳು
ಹಗಲ್ಹಾಡೆ ಹೊಡದಾರ ಠಾರ

ಮಾತು ಗಿಳಿಹಂಗವರು ಆಚಾರ್ಬದನಿಕಾಯಿ
ನುಡಿದಂಗೆ ನಡೆವದಕ ವೈರ
ಜಗತಿನೆಲ್ಲಾ ಧರ್ಮ ಒಂದೆ ಹೇಳಿರುವಾಗ
ನಮ್ಮಲ್ಯಾಕುಳದಾರ ಖಾರ

ಕೈಕಾಲು ಕಿವಿಮೂಗು ಮೈಮನಸು ತಲೆಕಣ್ಣು
ಕಳಕೊಂಡ ಬರಡಗಿಡ ನಾವು
ಮೈತುಂಬ ಮನತುಂಬ ಸಿಕ್ಕವರ ಮುಖಮುದ್ರೆ
ಚೀರಾಟ ಹಾರಾಟ ಸಾವು

ದುಡಿದುಂಡು ಉಟ್ಟಿರಲು ಕತ್ತಲಿರುವತನಕ
ಕೊಳ್ಳಿಗಳು ಹೊತ್ತ್ಯಾವ ಜೋರ
ಲೋಡಿಗಿದ್ದವರೆಲ್ಲ ಗ್ವಾಡೀಗಿ ಕುಂತಾರ
ಇಷ್ಟೆಲ್ಲ ನಮದಾರಿ ದೂರ



ಎಲ್ಲಿತನ ಕತ್ತಲವು ಬೆಳಗು ಆಗಲೇಬೇಕು
ಚಿಕ್ಕಿಗಳು ಹೊಳೆದಾವ ಮ್ಯಾಗ
ಜಗತಿನೆಲ್ಲಾ ಕಡೆಗೆ ಮೊದಲ್ಹಂಗೆ ಅತ್ತವರೆ
ಗಟ್ಟ್ಯಾಗಿ ಕುಳಿತಾರ ಈಗ

ಎಷ್ಟಂತ ಉರಿತಾರ ಎಷ್ಟಂತ ಅರಿತಾರ
ತಾಳದಕು ಮಿತಿಯುಂಟು ಇಲ್ಲಿ
ತಾಳಿತಾಳಿರಿ ಒಮ್ಮೆ ಗೂಳ್ಯಾಗಿ ಗುದ್ದುವನು
ಸಾವಾಸಕ್ಕೆ ಸಲ್ಲೋ ಬಡಜೀವಿ

ಬಾಬಾ ಸಾಹೇಬರೇನು ಹುಚ್ಚರಲ್ಲವೆ ಅಲ್ಲ
ಗಾಂಧಿ ಜೊತೆ ಇರಲಿಲ್ಲ ಸುಮ್ಮ
ಅಷ್ಟು ಒದ್ದಾಡಿದರೆ ಹಿಂಗ್ಯಾತೆ ನಮ ಬದುಕು
ತಿಳಿಯಿತೇ ಈಗಾದರೂ ತಮ್ಮ

ಪಂಚಮ

ಅಂಬೇಡ್ಕರ್ ನೆನಪಿನ ಸಂಚಿಕೆ

ಸಂಪುಟ : 5 ಸಂಚಿಕೆ : 4-5-6-7

ಏಪ್ರಿಲ್, ಮೇ 1981

ಪಂಚಮ ಪಂಚಮ ಪಂಚಮ

ಸಂಪಾದಕ :
ರಾಮದೇವ ರಾಕೆ

ಪ್ರಕಾಶಕ :
ಎಚ್. ಗೋವಿಂದಯ್ಯ

ವ್ಯವಸ್ಥಾಪಕ :
ದೇವಯ್ಯ ಹರವೆ

ಸಂಪಾದಕ ಮಂಡಲಿ :
ದೇವನೂರ ಮಹಾದೇವ, ಸಿದ್ದಲಿಂಗಯ್ಯ
ಇಂದೂಧರ ಹೊನ್ನಾಪುರ, ಬೋಳುವಾರು
ಮಹಮದ್ ಕುಂಞ, ಶ್ರೀಧರಕಲಿವೀರ
ಶಿವಾಜಿ ಗಣೇಶನ್, ಜಂಬಣ್ಣ ಅಮರಚಿಂತ,
ಕೆ. ಬಿ. ಸಿದ್ದಯ್ಯ, ಕೆ. ರಾಮಯ್ಯ,
ರಂಜಾನ್‌ದರ್ಗಾ, ಗುರುರಾಜ ಬೀಡೀಕರ್.

ಚಂದಾವಿವರ :

ವಾರ್ಷಿಕ ಚಂದಾ : 10 ರೂ.

ಆಜೀವ ಚಂದಾ : 150 ರೂ.

ಜಾಹೀರಾತು ವಿವರ :

ಹೊರ ರಕ್ಷಾಪುಟ : 1500

ಒಳ ರಕ್ಷಾಪುಟ : 1000

ಪೂರ್ತಿ ಪುಟ : 400 ರೂ.

ಅರ್ಧ ಪುಟ : 200 ರೂ.

ಕಾಲು ಪುಟ : 100 ರೂ.

ವಿಳಾಸ :
ಮಾಸ್ತಿ ಗುಡಿ, 2ನೇ ಕ್ರಾಸ್,
ಅಶೋಕಪುರಂ, ಮೈಸೂರು-8

ಪ್ರಿಯ ಓದುಗರೇ,

ದಲಿತರ ಬದುಕನ್ನು ಸುಂದರಗೊಳಿಸಲು ತನ್ನ ಜೀವ ತೇದ ಅಂಬೇಡ್ಕರ್ ನೆನಪು ನಮ್ಮೊಳಗೆ ಸದಾ ಹಸಿರಾಗಿದೆ. ಅಂಬೇಡ್ಕರ್ ಮೊಟ್ಟ ಮೊದಲ ಬಾರಿಗೆ ದಲಿತರ ಆಳದ ನೋವಿಗೆ, ದುಃಖಕ್ಕೆ ಸ್ಪಂದಿಸಿ-ಸಾವಿರಾರು ವರ್ಷಗಳಿಂದ ಮೇಲ್ವರ ತುಳಿತಕ್ಕೆ ಸಿಕ್ಕಿ ಕುಗ್ಗಿ ಹೋಗಿದ್ದ ಜನಕ್ಕೆ ಸ್ವಾಭಿಮಾನ ತಂದು ಕೊಟ್ಟವರು. ತುಳಿಕಚ್ಚಿದ ಮನುಷ್ಯರನ್ನು ಮೇಲೆತ್ತಲು ಅವರನ್ನು ಚಿಂತಿಸುವಂತೆ ಮಾಡುತ್ತಾ ಹೋರಾಟದ ದಿಕ್ಕಿನತ್ತ ಕೊಂಡೊಯ್ದು ಮನುಷ್ಯರಾಗಲು ಕಲಿಸಿದವರು. ಅವರ ನೆನಪು ಅಂದರೆ ಹೋರಾಟದ ನೆನಪು. ಇಂದು ನಾವು ಅವರ ವಿಚಾರಗಳನ್ನು ನಮ್ಮ ಜನರಲ್ಲಿ ಬಿತ್ತುವ ಮೂಲಕ ಅವರನ್ನು ನೆನಪು ಮಾಡಿಕೊಳ್ಳಬೇಕಾಗಿದೆ.

ಜನರು ಮತ ಮೌಢ್ಯ ಅಸಮಾನತೆಯ ತೆಕ್ಕೆಗೆ ಸಿಕ್ಕಿಕೊಂಡು ಮನುಷ್ಯ-ಮನುಷ್ಯರಲ್ಲಿ ಭೇದವೆಣಿಸುತ್ತ ಪರಸ್ಪರ ಪ್ರೀತಿಸಲಾಗದ ವಾತಾವರಣಗಳಲ್ಲಿ ಬದುಕುತ್ತಿದ್ದಾರೆ. ಮನಸ್ಸುಗಳು-ಕಣ್ಣುಗಳು ಕುರೂಪಗೊಂಡಿವೆ. ನಮ್ಮ ನಡುವಿನ ಬದಕು ರಕ್ತದಿಂದ-ದ್ವೇಷದಿಂದ ಕಲುಷಿತಗೊಂಡಿದೆ. ಎಲ್ಲ ಮನುಷ್ಯರೂ ಸಮಾನವಾಗಿ ಬದುಕುವ, ಉಣ್ಣುವ, ಉಡುವ ಸಮಾಜವನ್ನು ಕಟ್ಟುವ ದಿಕ್ಕಿನತ್ತ ನಾವು ಚಲಿಸಬೇಕಾಗಿದೆ. ಅಂಥ ಚಲನೆಗೆ ಬೇಕಾದ ವಿಚಾರಗಳನ್ನು ಕೊಡುವ ಮೂಲಕ ಅಂಬೇಡ್ಕರ್‌ರನ್ನು ನೆನಪಿಸುತ್ತಿದ್ದೇವೆ.

ಈಗ ನಿಮ್ಮ ಪಂಚಮವು ಮೈಸೂರಿನಿಂದ ಪ್ರಕಟವಾಗುತ್ತಿದೆ. ಪುಟವನ್ನು ಹೆಚ್ಚಿಸಿಕೊಂಡು ಇನ್ನೂ ಆಕರ್ಷಕವಾಗಿ ಆಳವಾಗಿ ತರುವ ಪ್ರಯತ್ನ ನಡೆದಿದೆ. ಅದಕ್ಕಾಗಿ ಚಂದಾ ಹಣವು ವಿಶೇಷ ಸಂಚಿಕೆ ಸೇರಿ ಹತ್ತು ರೂಪಾಯಿಗಳಾಗಿವೆ. ಚಂದಾದಾರರಾಗುವ ಮೂಲಕ ಇದನ್ನು ಕೈಹಿಡಿದು ನಡೆಸಬೇಕಾದವರು ನೀವು.

—ಸಂಪಾದಕ

ಒಳಪುಟಗಳಲ್ಲಿ

ಕಪ್ಪು ಪ್ರಜ್ಞೆ

ಡಾ॥ ಹೆಚ್. ಒಡೇರ*

ಅನುವಾದ :
ಗು. ಪರಮೇಶ್ವರ

1. ಕಪ್ಪು ಜನ ವಿರೋಧಿ ಸಾಮಾಜಿಕ ವಸ್ತುಸ್ಥಿತಿ.

ಆಫ್ರಿಕ, ಅಮೇರಿಕ ಮತ್ತು ಯೂರೋಪಿನಲ್ಲಿ ತಮ್ಮ ಬಗ್ಗೆ ಕಾಳಜಿ ವಹಿಸದಿರುವ ವಸ್ತುಸ್ಥಿತಿ–ಕಪ್ಪುಜನರ ಹಿತಾಶಕ್ತಿಗಳನ್ನು ಮತ್ತು ಮೌಲ್ಯಗಳನ್ನು ಕಡೆಗಣಿಸಿರುವ ವಸ್ತುಸ್ಥಿತಿ–ಯನ್ನು ಮುಖಾಮುಖಿಯಾಗಿರುವ ಕಪ್ಪುಜನರಿದ್ದಾರೆ. ಅವರು ಕಾಣುವ ಈ ವಸ್ತುಸ್ಥಿತಿ ಕಪ್ಪುಜನರ ಒಪ್ಪಿಗೆಯಿಂದ ಹುಟ್ಟಿಕೊಂಡದ್ದಲ್ಲ, ಅವರ ಪ್ರಜ್ಞಾಪೂರ್ವಕ ಒಪ್ಪಿಗೆಯಿಂದಂತೂ ಅಲ್ಲ. ಈ ವಸ್ತುಸ್ಥಿತಿಯಲ್ಲಿ ಕಪ್ಪು ಮನುಷ್ಯ ತನ್ನನ್ನು ತಾನು ಗುರುತಿಸಿಕೊಂಡಿಲ್ಲವಾದರೂ ಆಶ್ಚರ್ಯವೆಂದರೆ ತಾನು ಗುರುತಿಸಲ್ಪಟ್ಟಿರುವುದನ್ನು ಅವನು ಕಾಣುತ್ತಾನೆ. ಅವನು "ನೀಗ್ರೋ ಮಿಥ್" (negro myth)ನ ಆಧಾರದ ಮೇಲೆ ಗುರುತಿಸಲ್ಪಟ್ಟಿದ್ದಾನೆ. ಅದರಂತೆ ನೀಗ್ರೋ ಎಂದರೆ ಕಪ್ಪು ಮನುಷ್ಯನು ದುಷ್ಟ, ಕುರೂಪಿ, ಅನಾಗರಿಕ ಮತ್ತು ಬುದ್ಧಿವಿಹೀನ. ಅವನು ಕಾಣುವ ಈ ವಸ್ತುಸ್ಥಿತಿಯು ಬಿಳಿಯರನ್ನು ಎತ್ತರಿಸಿಕೊಳ್ಳಲು, ಬಿಳಿಯರ ಹಿತಾಸಕ್ತಿಗಳನ್ನೂ ಮೌಲ್ಯಗಳನ್ನೂ ಕಾಯ್ದುಕೊಂಡು ವೈಭವೀಕರಿಸಲು ಮತ್ತು ಕಪ್ಪುಜನರ ಹಿತಾಸಕ್ತಿಗಳನ್ನು ಹಾಗು ಮೌಲ್ಯಗಳನ್ನು ಕಡೆಗಣಿಸಿ ಇಲ್ಲವಾಗಿಸಿ ಮರೆತು ಬಿಡುವುದಕ್ಕಾಗಿ ಸೃಷ್ಟಿಯಾದದ್ದಾಗಿದೆ.

ಈ ವಸ್ತುಸ್ಥಿತಿಯು ಭೌತಿಕ ಅಥವಾ ವೈಜ್ಞಾನಿಕ ವಸ್ತುಸ್ಥಿತಿ ಅಲ್ಲ ; ಅದೊಂದು ಸಾಮಾಜಿಕ ವಸ್ತುಸ್ಥಿತಿ. ಕಪ್ಪುಜನ ಎಂದರೆ ದುಷ್ಟರು, ಕುರೂಪಿಗಳು, ಅನಾಗರಿಕರು ಮತ್ತು ಬುದ್ಧಿವಿಹೀನರು ಎಂದು ಸಾಧಿಸುವ ವಿಜ್ಞಾನ, ನಿಜವಾದ ವಿಜ್ಞಾನ ಯಾವುದೂ ಇಲ್ಲ. ಈ ರೀತಿಯ ಕಪ್ಪುಜನ ವಿರೋಧಿಯಾದ ವಸ್ತುಸ್ಥಿತಿಯನ್ನು ಸೃಷ್ಟಿಸಿ ಸಾಧಿಸುತ್ತಿರುವುದಕ್ಕೆ ಸಾಮಾಜಿಕ ಸಂಸ್ಥೆಗಳೇ ಹೊಣೆಯಾಗಿವೆ. ಇಂಥ ಕೆಲವು ಸಂಸ್ಥೆಗಳು ವಿಜ್ಞಾನವನ್ನು ವಿರೂಪಗೊಳಿಸಿ ತಮ್ಮ ವಾದಗಳನ್ನು ಸಾಬೀತು ಪಡಿಸುವುದಕ್ಕಾಗಿ ದುರುಪಯೋಗ ಮಾಡುತ್ತಿವೆ. ಹಾರ್ವರ್ಡ್ ವಿಶ್ವವಿದ್ಯಾನಿಲಯದಲ್ಲಿ ಮನಃಶಾಸ್ತ್ರದ ಪ್ರೊಫೆಸರನಾದ ಜೆನ್‌ಕಿನ್ ಎಂಬಾತ ನಮ್ಮ ಕಾಲದಲ್ಲಿ ಮನಃಶಾಸ್ತ್ರವನ್ನು ವಿರೂಪಗೊಳಿಸಿ ಅಮೆರಿಕದಲ್ಲಿ ಬಿಳಿಯರಿಗಿಂತ ಕಪ್ಪು ಜನರು ಶೇಕಡ 15ರಷ್ಟು ಕಡಿಮೆ ಬುದ್ಧಿಮಟ್ಟ(I, Q,)ವನ್ನು ಹೊಂದಿದ್ದಾರೆ ಎಂದು ಸಾಬೀತು ಪಡಿಸುವುದಕ್ಕಾಗಿ ದುರುಪಯೋಗ ಪಡಿಸಿಕೊಂಡಿದ್ದಾನೆ.

ಬಹಳ ಕಾಲದವರೆಗೆ ಈ ಸಾಮಾಜಿಕ ವಸ್ತುಸ್ಥಿತಿಯು–ತನ್ನ ರಾಜಕೀಯ, ಆರ್ಥಿಕ, ಧಾರ್ಮಿಕ ಮತ್ತು ಕಾನೂನು ಸಂಸ್ಥೆಗಳ ಮೂಲಕ–ಕಪ್ಪುಜನರ ಪ್ರಜ್ಞೆಯನ್ನು ಮರಗಟ್ಟಿಸಿ ತನ್ನ ಅಗತ್ಯಗಳಿಗೆ ಅವರು ಹೊಂದಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾಗಿತ್ತು. ಆದರೆ ಈಗ ಅದು ಅಂಥ ತನ್ನ ಪಾತ್ರವನ್ನು ವಹಿಸುವುದು ಕಷ್ಟಸಾಧ್ಯವಾಗಿದೆ. ಕಪ್ಪು ಪ್ರಜ್ಞೆ ಈಗಾಗಲೇ ಅಥವಾ ಈಗ ಬೆಳೆಯಲಾರಂಭಿಸಿದೆ.

ಕಪ್ಪು ಪ್ರಜ್ಞೆ ಎಂದರೆ ನಿಖರವಾಗಿ ಏನು ? ಅದು ಬಹು ಸರಳ : ಅದು (i) ಒಬ್ಬ ಕಪ್ಪು ಮನುಷ್ಯನು ಕಪ್ಪು ಜನ ವಿರೋಧೀ ವಸ್ತುಸ್ಥಿತಿಯು ಅಸ್ತಿತ್ವದಲ್ಲಿರುವುದನ್ನು ಮನಗಾಣುವುದು ಅಥವಾ ಅದರ ಬಗೆಗೆ ಅವನಲ್ಲಿರುವ ಅರಿವು, (ii) ಒಬ್ಬ ಕಪ್ಪು ಮನುಷ್ಯ ತನ್ನನ್ನು ತಾನೇ ಒಬ್ಬ ನೀಗ್ರೋ, ಒಬ್ಬ ಕಪ್ಪು ಮನುಷ್ಯ ಎಂದು ಒಪ್ಪಿಕೊಳ್ಳುವುದು, (iii) ಒಬ್ಬ ಕಪ್ಪು ಮನುಷ್ಯನು ಈ ಸಾಮಾಜಿಕ ವಸ್ತುಸ್ಥಿತಿಯನ್ನು ಅರ್ಥೈಸಿ ಅದನ್ನು ದೂರವಾಗಿಸಲು ಅಥವಾ ನಾಶಪಡಿಸಲು ಹೊಂದಿರುವ ಉದ್ದೇಶ ಮತ್ತು (iv) ವಿಶ್ವ ಮಾನವತಾ ನಿಬಂಧನೆಯಾಗಿ ಒಂದು ಹೊಸ ವಸ್ತುಸ್ಥಿತಿ, ಕಪ್ಪು ಜನಪರವಾದ ಸಾಮಾಜಿಕ ವಸ್ತುಸ್ಥಿತಿ ಸೃಜಿಸಲ್ಪಡಲೇಬೇಕು.

ಪ್ರಜ್ಞಾಪೂರ್ವಕವಾಗುವುದೆಂದರೆ ವಿನಾಶಪಡಿಸುವುದು–ಇದೊಂದು ಅಸ್ತಿತ್ವವಾದಿಗಳ ತತ್ವ–ಆದರೆ ಇದು ಬಹಳ ಸರಳೀಕೃತವಾದ ತತ್ವವೆಂಬುದನ್ನು ನಾವು ಬಹು ಬೇಗನೆ ಅರಿತುಕೊಳ್ಳಬಹುದು. ಪ್ರಜ್ಞಾಪೂರ್ವಕವಾಗುವುದೆಂದರೆ ಬರೇ ವಿನಾಶಮಾಡುವುದಾದರೆ ಎಲ್ಲವೂ ವಿನಾಶವಾದ ಮೇಲೆ ಪ್ರಜ್ಞೆಯು ಅಸ್ತಿತ್ವದಲ್ಲಿರುವುದನ್ನು ನಿಲ್ಲಿಸಬೇಕಾಗುತ್ತದೆ, ಇಲ್ಲದಿದ್ದರೆ ವಿನಾಶಮಾಡುವುದಕ್ಕೆ ಏನೂ ಉಳಿಯದಿರುವವರೆಗೂ ಅದು ವಿನಾಶಮಾಡುತ್ತಿರುವುದನ್ನು ಮುಂದುವರಿಸಲೇಬೇಕಾಗುತ್ತದೆ. ಪ್ರಜ್ಞಾಪೂರ್ವಕವಾಗುವುದಕ್ಕೆ ಏನೂ ಉಳಿಯದ ಹಾಗೆ-ಆದ್ದರಿಂದ ಪ್ರಜ್ಞೆಯು ತನ್ನನ್ನು ತಾನೇ ವಿನಾಶಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ಪ್ರಜ್ಞಾಪೂರ್ವಕವಾಗುವುದೆಂದರೆ ಯಾವುದರ ಬಗ್ಗೆಯಾದರೂ ಪ್ರಜ್ಞಾಪೂರ್ವಕವಾಗುವುದು.

*ಡಾ॥ ಹೆಚ್. ಒಡೇರಾರವರು ಕೆನ್ಯಾದಲ್ಲಿನ ನಯರೋಬಿ ವಿ. ವಿ ದಲ್ಲಿ ತತ್ವಶಾಸ್ತ್ರದ ಅಧ್ಯಾಪಕರು.

ಕಪ್ಪು ಪ್ರಜ್ಞೆ

ಒಂದು ಪರಿಪೂರ್ಣವಾದ ಸೃಷ್ಟೀಕರಣವನ್ನು ಕೆಳಕಂಡಂತೆ ಮಾಡಬಹುದು:

ಪ್ರಜ್ಞಾಪೂರ್ವಕವಾಗುವುದೆಂದರೆ ಅಸ್ತಿತ್ವದಲ್ಲಿರುವ ವಸ್ತುಸ್ಥಿತಿ ಅಥವಾ ಉಳಿದುಕೊಂಡುಬಿಡಬಹುದು ಎಂಬ ಹೆದರಿಕೆಯನ್ನುಂಟುಮಾಡುವ ವಸ್ತುಸ್ಥಿತಿಗಿಂತ ಬಿನ್ನವಾದ (ಉತ್ತಮವಾದ) ವಸ್ತುಸ್ಥಿತಿಯ ಬಗ್ಗೆ ಪ್ರಜ್ಞಾಪೂರ್ವಕವಾಗುವುದು ಮತ್ತು ಅಂಥ ವಸ್ತುಸ್ಥಿತಿಯನ್ನು ಸಾಧಿಸಲು ಪ್ರಯತ್ನಿಸುವುದು; ಒಮ್ಮೆ ಅದನ್ನು ಸಾಧಿಸಿದ ಮೇಲೆ ಪ್ರಜ್ಞೆಯು ಆ ವಸ್ತುಸ್ಥಿತಿಯನ್ನು ಕಾಯ್ದುಕೊಳ್ಳುವ ಪ್ರಜ್ಞೆಯಾಗುತ್ತದೆ. ಹಾಗಾದಾಗ ವಿನಾಶಪಡಿಸುವಿಕೆಯು ಒಂದು ಉತ್ತಮ ವಸ್ತುಸ್ಥಿತಿಯನ್ನು ತಲುಪುವ ಒಂದು ಸಾಧನಮಾತ್ರವಾಗುತ್ತದೆ, ಮತ್ತು ಒಮ್ಮೆ ಉತ್ತಮವಾದ ವಸ್ತುಸ್ಥಿತಿಯನ್ನು ಸಾಧಿಸಿದ ನಂತರ ಸ್ಥಗಿತಗೊಳ್ಳುತ್ತದೆ, ಎಲ್ಲಿಯವರೆಗೆಂದರೆ ಹೊಸ ವಸ್ತುಸ್ಥಿತಿಯು ತನಗೆ ತಾನೆ ವಿಪುಲವಾಗಿ ಬದಲಾವಣೆಯನ್ನು ಬಯಸುವವರೆಗೆ.

2. ಫೆನಾನ್‌ರವರ ಅಸ್ತಿತ್ವವಾದ.

ಫ್ರಾನ್ಜ್ ಫೆನಾನ್‌ರವರು ಮನೋವೈದ್ಯರಾಗಿ ಕೆಲಸ ಮಾಡುತ್ತಿದ್ದಾಗ ಕಪ್ಪುಮನುಷ್ಯನ ಬಗ್ಗೆ ಒಂದು ಮುಖ್ಯವಾದ ಸತ್ಯಸಂಗತಿಯನ್ನು ಕಂಡುಹಿಡಿದರು: ಕಪ್ಪು ಮನುಷ್ಯನು ಸಂಪೂರ್ಣವಾಗಿ ಕಪ್ಪು ಮನುಷ್ಯನಲ್ಲ. ಬಿಳಿಮುಖವಾಡವನ್ನು ಹೊಂದಿದ್ದಾನೆ. ತನಗಾಗಿ ಬಿಳಿಯನು ರೂಪಿಸಿದ ವಸ್ತುನಿಷ್ಠತೆಯನ್ನು ನಂಬುತ್ತಾನೆ. ವಸ್ತುನಿಷ್ಠತೆಯೆಂದು ಕರೆಯಲ್ಪಟ್ಟಿರುವ ಇದು ವಸ್ತುನಿಷ್ಠತೆಯಲ್ಲ–ಇದು ಬಿಳಿಯನ ಆತ್ಮನಿಷ್ಠತೆ. ಅವನ ವೈಚಾರಿಕತೆಯು– ಬಿಳಿಯನ ಆತ್ಮನಿಷ್ಠತೆಯನ್ನು ಅನುಕರಿಸುವಲ್ಲಿ-ವೈಚಾರಿಕತೆಯಲ್ಲ, ಅವೈಚಾರಿಕತೆ.

ಕಪ್ಪು ಮನುಷ್ಯನಿಗೆ ತನ್ನತನವಿಲ್ಲ-ವೈಚಾರಿಕತೆ ಇಲ್ಲ. ಅವನ ಸ್ವಂತತನವೆಂದರೆ ಬಿಳಿಯನ ಸ್ವಂತಿಕೆಯ ನೆರಳು. ಅವನು ತನ್ನನ್ನು ತಾನು ಗುರುತಿಸಿಕೊಳ್ಳಬೇಕಾಗಿದೆ. ಸ್ವವಿವರಣೆ ಅವನಿಗೆ ಬೇಕಾಗಿದೆ. ಕಪ್ಪು ವಾಸ್ತವತೆಯ ಬಗ್ಗೆ ಅವನು ಪ್ರಜ್ಞಾಪೂರ್ವಕನಾಗಬೇಕಾಗಿದೆ–ತನ್ನನ್ನು ತಾನು ಕಪ್ಪು ಎಂದು ಒಪ್ಪಿಕೊಂಡು ತಾನು "ಆರಂಭದ ಪರಮ ತೀವ್ರತೆ" ಎಂದು ಗುರುತಿಸಿಕೊಳ್ಳಬೇಕಾಗಿದೆ.' ಅವನು ನಿಜವಾಗಿ ಏನಾಗಬಯಸುತ್ತಾನೋ ಅದಾಗಬೇಕಾಗಿದೆ.

ಕಪ್ಪು ಮನುಷ್ಯನಿಗೆ ಇತಿಹಾಸ ಇಲ್ಲದಿರಬಹುದು–ಕೆಲವು ಜನ ಪ್ರತಿಪಾದಿಸಿರುವ ಹಾಗೆ. ಆದರೆ ಇದು ಮುಖ್ಯವಲ್ಲ : ಇತಿಹಾಸವು ಈವತ್ತಲ್ಲ ಈಗಾಗಲೇ ಬದುಕಿದವರ ಮತ್ತು ಬದುಕಿರುವ ಕಪ್ಪು ಮನುಷ್ಯರ ಪರವಾಗಿ ಅಧಿಕಾರ ಹೊಂದಿಲ್ಲದವರ ಜವಾಬ್ದಾರಿಯಾಗಿದೆ. ಬದುಕಿರುವ ಕಪ್ಪುಮನುಷ್ಯನಿಗೆ ಭವಿಷ್ಯ ತೆರೆದುಕೊಂಡಿದೆ. ಅವನು ತನ್ನ ಭವಿಷ್ಯವನ್ನು ತಾನೇ ಸೃಜಿಸಬೇಕು, ತನ್ನ ಅಡಿಪಾಯ ತಾನೇ ಆಗಬೇಕಾಗಿದೆ, ಹೊಸ ಇತಿಹಾಸವನ್ನು ಸೃಜಿಸಬೇಕಾಗಿದೆ.

ಸತ್ಯ : "ಭೂಮಿಯ ಮೇಲಿನ ನಿಕೃಷ್ಟರು" ತಾವು ಸತ್ಯಕ್ಕಾಗಿ ಹೋರಾಡುತ್ತಿದ್ದೇವೆಂದು ಹೇಳುವುದಿಲ್ಲ. ತಮ್ಮನ್ನು ತಾವೇ ಸತ್ಯವೆಂದು ಕಂಡು ಕೊಳ್ಳುತ್ತಾರೆ. ಭೂಮಿಯ ಮೇಲಿನ ನಿಕೃಷ್ಟರಿಗೆ ನಿಶ್ಚಿತವಾದದ್ದು ಮತ್ತು ನಿರ್ವಿವಾದವಾದದ್ದೆಂದರೆ ತಮ್ಮ ಸಾಮಾಜಿಕ ಅಧೋಗತಿಯ ವಸ್ತುಸ್ಥಿತಿ. ಈ ವಸ್ತುಸ್ಥಿತಿಯು ಅವರಿಗೊಂದು ಅಗತ್ಯವಾಗಿ ಉಳಿದುಕೊಳ್ಳುವುದರ ಸಮರ್ಥನೆ ಮಾತ್ರ ಅನಿಶ್ಚಿತ ಮತ್ತು ಪ್ರಶ್ನಾರ್ಹವಾಗಿದೆ.

ಫೇನಾನ್‌ರವರ ಅಸ್ತಿತ್ವವಾದವನ್ನು ಕಪ್ಪು ಮನುಷ್ಯನಿಗೆ ಅನ್ವಯಿಸಿದಾಗ ಅದು ಈ ಚಾಲಕ ಪದಗಳ ಸುತ್ತಿನಲ್ಲಿ ಹರಡಿಕೊಳ್ಳುತ್ತದೆ : ಆತ್ಮನಿಷ್ಠತೆ, ಅವೈಚಾರಿಕತೆ, ತನ್ನತನ ಮತ್ತು ಸ್ವವಿವರಣೆ, ಒಂದು ಹೊಸ ಇತಿಹಾಸ ಮತ್ತು ಭವಿಷ್ಯ, ಸತ್ಯ ಮತ್ತು ಕಪ್ಪು ಮನುಷ್ಯನ ಮೌಲ್ಯಗಳು :

"ಬಿಳಿಯರ ದೃಷ್ಟಿಯಲ್ಲಿ ಕಪ್ಪು ಮನುಷ್ಯನು ವೈಚಾರಿಕ ಪ್ರತಿರೋಧವಿಲ್ಲದವನು ಅವನ ಆಧ್ಯಾತ್ಮ....ಅವನ ಆಚಾರ ವಿಚಾರಗಳು ಅಳಿಸಿಹೋಗಿವೆ. ಏಕೆಂದರೆ ಅವನಿಗೆ ಗೊತ್ತಿಲ್ಲದ ಮತ್ತು ಅವನ ಮೇಲೆ ಹೇರಲ್ಪಟ್ಟ ನಾಗರೀಕತೆಯೊಂದಿಗೆ ಅವು ಸೆಣಸುತ್ತಿದ್ದವು.

(Black Skin white Masks. ಪು೧೧೦)

ಕಪ್ಪು ಮನುಷ್ಯನು ತನ್ನ ಸ್ವಂತ ನಾಗರೀಕತೆ ಮತ್ತು ಮೌಲ್ಯಗಳನ್ನು ಸೃಷ್ಟಿಸಿಕೊಳ್ಳಬೇಕು. ಆದರೆ ಹಾಗೆ ಮಾಡುವಾಗ ತನಗಾಗಿ ಬೇರೆಯವರು (ಬಿಳಿಯರು) ರೂಪಿಸಿದ ವಸ್ತುನಿಷ್ಠತೆ ಮತ್ತು ವೈಚಾರಿಕತೆಯ ಆಧಾರದ ಮೇಲೆ ಮಾಡಬಾರದು.

"ನಾನು ಪ್ರಪಂಚವನ್ನು ವೈಚಾರಿಕವಾಗಿ ಅರಿತುಕೊಂಡೆ. ಪ್ರಪಂಚವು ವರ್ಣಭೇದದ ಪೂರ್ವಾಗ್ರಹದಿಂದ ನನ್ನನ್ನು ತಿರಸ್ಕರಿಸಿತು. ವಿವೇಚನೆಯ ಮಟ್ಟದಲ್ಲಿ ಯಾವ ಒಪ್ಪಂದವೂ ಸಾಧ್ಯವಾಗದ್ದರಿಂದ ನನ್ನನ್ನೇ ಹಿಂದಕ್ಕೆ ವಿವೇಚನಾರಾಹಿತ್ಯಕ್ಕೆ ಎಸೆದುಕೊಂಡೆ."

(ಅದೇ, ಪು. ೧೨೩).

ಕಪ್ಪು ಮನುಷ್ಯನು ಪ್ರಪಂಚವನ್ನು ವೈಚಾರಿಕವಾಗಿ ಅರಿತುಕೊಂಡ. ಪ್ರಪಂಚವು ಅವನನ್ನು ವರ್ಣಭೇದದ ಪೂರ್ವಾಗ್ರಹದಿಂದ ತಿರಸ್ಕರಿಸಿತು. ಆದ್ದರಿಂದ ಅವನು ಬದಲಾಗಬೇಕಾಗಿದೆ, ಮತ್ತು ತನ್ನತನದೆಡೆಗೆ ಮುನ್ನಡೆಯಬೇಕಾದರೆ ಅವೈಚಾರಿಕನಾಗಬೇಕಾಗಿದೆ. ಇನ್ನು ಮುಂದೆ ವಿವೇಚನೆ ಬೇಕಾಗಿಲ್ಲ- ವಿವೇಚನಾರಾಹಿತ್ಯ ಬೇಕಾಗಿದೆ. "ಅವೈಚಾರಿಕತೆ" ಅಥವಾ "ವಿವೇಚನಾರಾಹಿತ್ಯ" ಎಂಬ ಪದಬಳಕೆ ಇಲ್ಲಿ ವ್ಯಂಗ್ಯ. ಕಪ್ಪು ಮನುಷ್ಯನನ್ನು ವರ್ಣಭೇದದ ಪೂರ್ವಾಗ್ರಹದಿಂದ ತಿರಸ್ಕರಿಸುವವರು ಹೇಳುವಂಥ ವಸ್ತುನಿಷ್ಠತೆ ಮತ್ತು ವೈಚಾರಿಕತೆಯನ್ನು ತಿರಸ್ಕರಿಸಬೇಕೆಂದು ಆದರ ಅರ್ಥ. "ವೈಚಾರಿಕ"ನಾಗಿರುವುದು ಎಂಬುದನ್ನು ಬಿಳಿಯನ ಕಲಿಸುವಿಕೆಗಳಿಗೆ, ನಂಬಿಕೆಗಳಿಗೆ ಮತ್ತು ನಡವಳಿಕೆಗಳಿಗೆ- ಒಟ್ಟನಲ್ಲಿ ಕಪ್ಪುಜನ ವಿರೋಧೀ ಸಂಸ್ಥೆಗಳಿಗೆ ಹೊಂದಿಕೊಳ್ಳುವುದು ಎಂದು ಅರ್ಥೈಸಲಾಗಿತ್ತು. ಈಗ ಅವೈಚಾರಿಕನಾಗಿರುವುದು ಎಂದರೆ ಅಂಥ ಸಂಸ್ಥೆಗಳನ್ನು ತಿರಸ್ಕರಿಸುವುದು--ಎಂದು ಅರ್ಥ.

ಈ ಸಂಸ್ಥೆಗಳ ತಿರಸ್ಕರಿಸುವಿಕೆಯು ಪ್ರಪಂಚದ ಬದಲಾಯಿಸುವಿಕೆ ಮತ್ತು ಪ್ರಪಂಚಕ್ಕೆ ಬೆಂಕಿಯಿಡುವುದರಲ್ಲಿ ಪರಿಣಮಿಸುತ್ತದೆ. ಏಮ್ ಸಿಸೇರ್‌ರವರ (Aime Cesaire) ಮಾತಿನಲ್ಲಿ ಹೇಳುವುದಾದರೆ ಕಪ್ಪು ಮನುಷ್ಯನು "ಪ್ರಪಂಚದ ಆಧಾರಸ್ಥಂಬಗಳನ್ನು ಅಲ್ಲಾಡಿಸುವಂಥ ಶಕ್ತಿಯುಳ್ಳ ಮಹಾ ನೀಗ್ರೋ ಕೂಗನ್ನು ಹಾಕುತ್ತಾನೆ".

ಕಪ್ಪು ಪ್ರಜ್ಞೆ

ಫೇನಾನ್‌ರವರು "ಕಪ್ಪು ಚರ್ಮ ಬಿಳಿ ಹೊದಿಕೆ" (Black Skin white mask) ಎಂಬ ಪುಸ್ತಕವನ್ನು ೧೯೫೨ರಲ್ಲಿ ಪ್ರಕಟಿಸಿದರು. ಅಲ್ಲಿಂದೀಚೆ ಬಹಳ ಬದಲಾವಣೆಗಳಾಗಿವೆ. ನೀಗ್ರೊಗಳು ಅಮೇರಿಕಾದಲ್ಲಿ ನಗರಗಳಿಗೆ ಬೆಂಕಿಯಿಟ್ಟಿದ್ದಾರೆ ಮತ್ತು "ಕಪ್ಪು ಎಂದರೆ ಕುರೂಪ" ಎಂಬ ಹಳೆಯ ಮಿಥ್‌ಗಳು "ಕಪ್ಪು ಎಂದರೆ ಸುಂದರ" ಎಂಬವಕ್ಕೆ ಎಡೆಕೊಟ್ಟಿವೆ. ಆಫ್ರಿಕಾದ ಬಹಳಷ್ಟು ದೇಶಗಳು ಕೇವಲ ರಾಷ್ಟ್ರೀಯ ಭಾವನೆಯಿಂದಾಗಿ ವಸಾಹತು ಆಡಳಿತಗಳನ್ನು ಕಿತ್ತೆಸೆದಿವೆ. ಇವುಗಳು ಪ್ರಪಂಚಕ್ಕೆ ಬೆಂಕಿಯಿಡುವುದರ ಉದಾಹರಣೆಗಳಲ್ಲದಿದ್ದರೂ ಅಂಥವುಗಳ, ಪ್ರಪಂಚದ ಆಧಾರ ಸ್ಥಂಭಗಳನ್ನು ಅಲುಗಾಡಿಸುವ ಸೂಚನೆಗಳಾಗಿವೆ.

3. ಕಪ್ಪು ಪ್ರಜ್ಞೆಯ ಐದು ಘಟ್ಟಗಳು

ಕಪ್ಪು ಪ್ರಜ್ಞೆಯ ವಿಕಾಸದಲ್ಲಿ ಈ ಪ್ರಜ್ಞೆಯ ಐದು ಘಟ್ಟಗಳು ಇದ್ದವು ಅಥವಾ ಇವೆ. ಗುಲಾಮ ಪ್ರಜ್ಞೆ, ವಸಾಹತುಶಾಹಿ ಪ್ರಜ್ಞೆ, ಪೌರಾಣಿಕ ಅಥವಾ ನಿಗ್ರಿಟ್ಯೂಡ್ ಪ್ರಜ್ಞೆ, ಅಸ್ತಿತ್ವವಾದಿ ಪ್ರಜ್ಞೆ ಮತ್ತು ಮಾರ್ಕ್ಸ್‌ವಾದಿ-ಅಸ್ತಿತ್ವವಾದಿ ಪ್ರಜ್ಞೆ. ಈ ಘಟ್ಟಗಳು ಪರಸ್ಪರ ಸ್ವತಂತ್ರವಾಗಿರುವಂತೆ ಕಂಡುಬಂದರೂ ಸಹ ಇವುಗಳನ್ನು ಪ್ರತಿಯೊಬ್ಬ ಕಪ್ಪು ಮನುಷ್ಯ ಅಥವಾ ಪ್ರತಿಯೊಂದು ಕಪ್ಪು ಜನಸಮುದಾಯವು ಹಾದು ಬಂದಿರುವ ಸಾಧ್ಯತೆ ಇದೆ.

೧. ಗುಲಾಮ ಪ್ರಜ್ಞೆ: ಈ ಪ್ರಜ್ಞೆಯು ಪೂರ್ತಿಯಾಗಿ "ನೀಗ್ರೋಮಿಥ್"ನ ಹಿಡಿತದಲ್ಲಿದೆ. ಈ ಪ್ರಜ್ಞೆಯು ಕಪ್ಪು ಎಂದರೆ ದುಷ್ಟ, ಕುರೂಪ, ಅನಾಗರೀಕತೆ ಮತ್ತು ಬುದ್ಧಿಹೀನತೆ ಎಂಬ ಆಲೋಚನೆಯನ್ನು ಒಪ್ಪಿಕೊಂಡು ಅದರಂತೆ ಬದುಕುತ್ತದೆ. ಈ ಪ್ರಜ್ಞೆಯ ಪ್ರಕಾರ ಕಪ್ಪು ಮನುಷ್ಯನು ತನಗಿಂತ ಉತ್ತಮರ ಅಂದರೆ ಬಿಳಿಯರ ಸೇವೆಮಾಡುವುದಕ್ಕಾಗಿಯಲ್ಲದೆ ಬದುಕಿರುವುದಕ್ಕೆ ಯಾವ ಬೇರೆ ಕಾರಣವೂ ಇಲ್ಲ. ಈ ಪ್ರಜ್ಞೆಯ ತಿಳುವಳಿಕೆ ಪ್ರಕಾರ ಬಿಳಿಯನು ದೇವರಿಗೆ, ಕಪ್ಪುಮನುಷ್ಯನು ಬಿಳಿಯನಿಗಿರುವುದಕ್ಕಿಂತ ಹತ್ತಿರದಲ್ಲಿದ್ದಾನೆ. ಅದು ಹೀಗೆ : ಬಿಳಿಮನುಷ್ಯನ ಸ್ವಭಾವವು ದೇವರ ಸ್ವಭಾವಕ್ಕೆ ಸಮಾನವಾಗಿದ್ದರೆ ಕಪ್ಪುಮನುಷ್ಯನ ಸ್ವಭಾವವು ಮೃಗದ ಸ್ವಭಾವಕ್ಕೆ ಸಮಾನವಾಗಿದೆ ಮತ್ತು ದೇವರ ಹಾಗು ಬಿಳಿಯನ ಸ್ವಭಾವದಿಂದ ಭಿನ್ನವಾಗಿದೆ.

ಗುಲಾಮಪ್ರಜ್ಞೆಯು ಕಪ್ಪುಜನರಲ್ಲಿ ಮಾತ್ರ ಅಗತ್ಯವಾಗಿರಬೇಕೆಂದೇನೂ ಇಲ್ಲ. ತಮ್ಮಲ್ಲಿ ಆಯುಧಗಳಿಲ್ಲದ್ದರಿಂದ ಮತ್ತು ಬಿಳಿಯರು ಆಯುಧಗಳನ್ನು ಹೊಂದಿದ್ದುದರಿಂದ ಮಾತ್ರವೇ ಬಿಳಿಯರನ್ನು ತಮಗಿಂತ ಉತ್ತಮರೆಂದು ಪರಿಗಣಿಸಿದ್ದ ಬಂದಿಷ್ಟು ಜನ ಗುಲಾಮರಲ್ಲಿದ್ದರು. ಈ ರೀತಿಯ ಗುಲಾಮಪ್ರಜ್ಞೆಯು ಮೊದಲು ಕಪ್ಪು ಗುಲಾಮರಲ್ಲಿದ್ದ ಹಾಗೆ ಈಗಲೂ ಕಪ್ಪುಜನರಲ್ಲಿ ಇದೆ:

> ಬೇರೇನನ್ನು ತಾನೆ ನೀನು ಕರಿಯನಿಂದ ಅಪೇಕ್ಷಿಸಬಲ್ಲೆ;
> ಬಿಳಿಯನೆಂದಿಗೂ ಪ್ರಾಮಾಣಿಕ.
> ಮರ್‍ಯಾಂಗೂ (ಬಿಳಿಯ) ರೀತಿಯಲಿ ಸತ್ಯವನು ನುಡಿ
> ಕರಿಯನೆಂದಿಗೂ ನಾಗರೀಕನಾಗಲಾರ
> ಇತ್ಯಾದಿ, ಇತ್ಯಾದಿ.

ಇವುಗಳು ಕಪ್ಪುಮನುಷ್ಯರಿಂದಲೇ ಹೇಳಲ್ಪಟ್ಟಿರುವ ಹೇಳಿಕೆಗಳು. ಇವು ಕಪ್ಪುಜನರಲ್ಲಿನ ಗುಲಾಮ ಪ್ರಜ್ಞೆಯ ಪ್ರತಿಬಿಂಬಗಳು.

೨. ವಸಾಹತುಶಾಹೀ ಪ್ರಜ್ಞೆ: ಗುಲಾಮಪ್ರಜ್ಞೆಯಲ್ಲಿ ಕಪ್ಪು ಎಂದರೆ ಕೆಟ್ಟದ್ದು ಮತ್ತು ಎಂದಿಗೂ ಒಳ್ಳೆಯದಾಗಲಾರದ್ದು ಎಂದಾದರೆ ವಸಾಹತುಶಾಹೀಯಲ್ಲಿ ಬಂದಿಷ್ಟು ಜ್ಞಾನೋದಯವಾಗಿ ಆ ನಂಬಿಕೆಯು ಈ ರೀತಿ ಸುಧಾರಿಸಲ್ಪಟ್ಟಿದೆ : ಬಿಳಿಯರು ಸ್ವಾಭಾವಿಕವಾಗಿಯೇ ವಸ್ತುನಿಷ್ಠರು, ವೈಚಾರಿಕರು ಮತ್ತು ಒಳ್ಳೆಯವರು; ಕರಿಯರು ಹಾಗಲ್ಲ. ಆದರೆ ಕರಿಯರನ್ನು ಬಿಳಿಯರಂತೆ ತರಬೇತಿಗೊಳಿಸಬಹುದು. ಆದ್ದರಿಂದ ಬಹಳಷ್ಟು ಕಪ್ಪುಮನುಷ್ಯರು ವಿದ್ಯೆಯನ್ನು ಪಡೆದುಕೊಂಡು 'ಬಿಳಿಮನುಷ್ಯ'ರಾಗಲು ಪ್ರಯತ್ನಿಸುತ್ತಾರೆ. ಆದರೆ ಅವರಿಗೆ ತಾವು "ಕಪ್ಪುಚರ್ಮ ಬಿಳಿಹೊದಿಕೆ' ಎಂಬುದು ತಿಳಿದಿಲ್ಲ. ಈ ಪ್ರಜ್ಞೆಯಲ್ಲಿ ಕಪ್ಪು ಮನುಷ್ಯನಿಗೆ ಬಿಳಿಯನಾಗುವ ಉತ್ಸಾಹ ಮತ್ತು ಅನುಕರಣೆಯನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ. ಕಪ್ಪುಮನುಷ್ಯನು ಬಿಳಿಯನ ಹಾಗೆ ಮಾತನಾಡಬೇಕು, ಉಡಬೇಕು, ಮದುವೆಯಾಗಬೇಕು, ಬಿಳಿಯನ ಹಾಗೆ ಉಣಬೇಕು, ನಗಬೇಕು, ಯೋಚಿಸಬೇಕು ಇತ್ಯಾದಿ.

ಇದು ಬೂಕರ್ ವಾಷಿಂಗ್‌ಟನ್ ಎಂಬ ಸ್ವಾತಂತ್ರ ವಿರೋಧೀ ಮತ್ತು ರಾಷ್ಟ್ರವಿರೋಧೀ ಮಾಜಿ ಆಫ್ರಿಕನ್ ನಾಯಕರುಗಳ ಪ್ರಜ್ಞೆ. ಇದು ಐರೋಪ್ಯ ಅಥವ ಬಿಳಿಯ ಕಲಾವಿದರು ಮತ್ತು ಲೇಖಕರ ಆಲೋಚನಾಕ್ರಮಗಳಿಂದ ಸ್ಫೂರ್ತಿಪಡೆಯುವಂಥ ಹಲವಾರು ಕಪ್ಪು ಕಲಾವಿದರ ಮತ್ತು ಲೇಖಕರ ಪ್ರಜ್ಞೆಯೂ ಆಗಿದೆ–ಅವರು ಯೂರೋಪಿನ ಕಾವ್ಯಗಳನ್ನು ಆರಾಧಿಸುತ್ತಾರೆ ಮತ್ತು ತಮ್ಮ ನೆಲದ ಕಲಾವಿದರು ಹಾಗು ಲೇಖಕರನ್ನು ಕಡೆಗಣಿಸಿ ತಿರಸ್ಕರಿಸುತ್ತಾರೆ. ನಾವು ಆಗಾಗ್ಗೆ ವಸಾಹತುಶಾಹೀ ಆಲೋಚಕರು ಎಂದು ಪಟ್ಟಿಮಾಡುವವರನ್ನೂ ಸಹ ಆಳುವಂತಹ ಪ್ರಜ್ಞೆಯಾಗಿದೆ ಇದು.

ರಾಜಕೀಯದಲ್ಲಿ ಈ ಪ್ರಜ್ಞೆಯು ಎಲ್ಲವನ್ನೂ ಮುಂಚಿನ ವಸಾಹತುಶಾಹೀ ಅಧಿಕಾರಗಳಿಗೆ ಹೊಂದಿಸುತ್ತದೆ. ಪ್ರಜಾಪ್ರಭುತ್ವ, ಅಭಿವೃದ್ಧಿ, ಶಿಕ್ಷಣ ಮತ್ತು ಧರ್ಮ ; ಇವುಗಳೆಲ್ಲ ಮುಂಚಿನ ವಸಾಹತುಶಾಹೀ ಅಧಿಕಾರಗಳ ಅನುಕರಣೆಯಾಗಬೇಕು. ಅಧ್ಯಕ್ಷ ಕೆನ್ನೆತ್ ಕೌಂಡ (Kenneth Kaunda) ಒಂದು ಸಾರಿ ಹೇಳಿದ್ದರು :

> "ನನಗನ್ನಿಸುತ್ತದೆ ಮನುಷ್ಯರನ್ನು ಮನುಷ್ಯರಂತೆ ಪರಿಗಣಿಸುವ ಒಂದೇ ಒಂದು ಸರ್ಕಾರವನ್ನು ಬ್ರಿಟಿಷ್ ಮಾದರಿಯ ಪ್ರಜಾ ಪ್ರಭುತ್ವವಾದೀ ಸರ್ಕಾರವು ಒದಗಿಸುತ್ತದೆ''.

ಇದು ೧೯೬೬ರ ಮಾತು. ಮುಂದೆ ಅಧ್ಯಕ್ಷರ ಪ್ರಜ್ಞೆಯು ಬೆಳೆದು ಆರು ವರ್ಷಗಳ ನಂತರ ಅವರು ಇಂಥ ಮಾತುಗಳನ್ನಾಡುವುದು ಖಂಡಿತಾ ಸಾಧ್ಯವಿರಲಿಲ್ಲ ಎಂಬುದು ನನಗೆ ಗೊತ್ತು. ೧೯೭೨ರ ವೇಳೆಗೆ ಕೌಂಡರವರು ಜಾಂಬಿಯಾದ ವಿರೋಧ ಪಕ್ಷಗಳಲ್ಲಿ ಒಂದನ್ನು ಬಹಿಷ್ಕರಿಸಿ ಜಾಂಬಿಯಾವನ್ನು ಏಕಪಕ್ಷೀಯ ಸಂಸ್ಥಾನವನ್ನಾಗಿ ಮಾಡುವ ಶಾಸನ ಮಾಡುತ್ತಿದ್ದರು.

೩. ಪೌರಾಣಿಕ ಅಥವಾ ನೆಗ್ರಿಟ್ಯೂಡ್ ಪ್ರಜ್ಞೆ : ವಸಾಹತುಶಾಹಿ ಪ್ರಜ್ಞೆಯಲ್ಲಿ ಕಪ್ಪು ಮನುಷ್ಯನು ಶ್ರಮವಹಿಸಿ ಕೆಲಸ ಮಾಡಿದನೆ

ಕಪ್ಪು ಪ್ರಜ್ಞೆ

ಬಿಳಿಯರ ವಸ್ತು ನಿಷ್ಠತೆ ಮತ್ತು ವೈಚಾರಿಕತೆಯಲ್ಲಿ ಗುರುತಿಸಲ್ಪಡುತ್ತಾನೆ ಮತ್ತು ಸ್ವೀಕರಿಸಲ್ಪಡುತ್ತಾನೆ–ಬಿಳಿಯರ ಸಂಸ್ಕೃತಿಯೊಳಕ್ಕೆ ಮತ್ತು ಬಿಳಿಯರಿಗೆ ಸಮಾನ ಅಥವಾ ಅರೆಸಮಾನ ಎಂದು ಪರಿಗಣಿಸಲ್ಪಡುತ್ತಾನೆ. ಇಲ್ಲಿ ಕರಿಯನು ಒಮ್ಮೆ ಸ್ವೀಕರಿಸಲ್ಪಟ್ಟರೆ ತಾನು ಕಪ್ಪು ಮನುಷ್ಯನಲ್ಲ ಎಂಬ ಭ್ರಮೆಯಲ್ಲಿ ಯೋಚಿಸುತ್ತಿರುತ್ತಾನೆ. ಆದರೆ ಹೀಗಾಗದೆಯೂ ಇರಬಹುದು. ಕಪ್ಪು ಮನುಷ್ಯನು ತಾನು ಬಿಳಿಯರ ಸಂಸ್ಕೃತಿಯನ್ನು ಹೀರಿಕೊಂಡ ಮೇಲೂ ಅವನು ಪಾಶ್ಚಿಮಾತ್ಯ ನಾಗರೀಕತೆಯ, ತತ್ವ ಮತ್ತು ಆಚರಣೆಯಲ್ಲಿ ಪಿ ಎಚ್ ಡಿ ಯನ್ನು ಪಡೆದುಕೊಂಡರೂ ಸಹ–ಅವನು ಕಪ್ಪು ಮನುಷ್ಯನೇ ಆಗಿರುತ್ತಾನೆ ಮತ್ತು ತಾನು ಬಿಳಿಯರಿಂದ ಕೀಳು ಎಂದು ಪರಿಗಣಿಸಲ್ಪಡುವುದನ್ನು ಮನಗಾಣಬಹುದು. ಈ ಘಟ್ಟದಲ್ಲಿ ವಸಾಹತುಶಾಹೀ ಕಪ್ಪು ಪ್ರಜ್ಞೆಯು ತಾರ್ಕಿಕವಾಗಿ(dialectical) ಪೌರಾಣಿಕ ಅಥವಾ ನೆಗ್ರಿಟ್ಯೂಡ್ ಪ್ರಜ್ಞೆಯಾಗಿ ಪುನರ್ವರ್ತನವಾಗಬಹುದು.

ಪೌರಾಣಿಕ ಪ್ರಜ್ಞೆಯಲ್ಲಿ ಹಲವಾರು ವಿಧಗಳಿವೆ. ಒಂದು ವಿಧವು "ಕಪ್ಪು ಎಂದರೆ ಸುಂದರ" ಎಂಬುದಕ್ಕೆ ಒತ್ತು ಕೊಡುತ್ತದೆ. ಮತ್ತೊಂದು ಕಪ್ಪು ಮನುಷ್ಯನೂ ಸಹ ತನ್ನದೇ ಆದ ಮಹಾ ನಾಗರೀಕತೆಯನ್ನು ಹೊಂದಿದ್ದಾನೆ ಮತ್ತು ಆ ನಾಗರೀಕತೆಯು ಇಂದಿಗೂ ಸಾಂಪ್ರದಾಯಿಕ ಆಫ್ರಿಕನ್ ಸಮಾಜಗಳಲ್ಲಿ ಪ್ರಕಟಗೊಳ್ಳುತ್ತಿದೆ ಎಂಬುದಕ್ಕೂ ಮತ್ತೊಂದು ವಿಧದ ಪ್ರಜ್ಞೆಯು ಕಪ್ಪು ಮನುಷ್ಯನು, ಗ್ರೀಸ್‌ನಿಂದ ರೋಮ್ ಮೂಲಕ ಇಡೀ ಪಾಶ್ಚಿಮಾತ್ಯ ಯೂರೋಪಿಗೆ ಹರಡಿಕೊಂಡ ನಾಗರೀಕತೆಯನ್ನು ಹುಟ್ಟುಹಾಕಿದವನು ಎಂಬುದಕ್ಕೂ ಒತ್ತು ಕೊಡುತ್ತದೆ. ಈ ನಾಗರೀಕತೆಯು ಆಫ್ರಿಕಾ (ಈಜಿಪ್ಟ್) ದಲ್ಲಿ ಗ್ರೀಸ್‌ಗೆ ಹೋಗುವ ಮೊದಲು ಶುರುವಾಯಿತು.

ಪೌರಾಣಿಕ ಪ್ರಜ್ಞೆಯ ಬೇರೆ ಬೇರೆ ವಿಧಗಳು ಎರಡು ಸಾಮಾನ್ಯ ವಿಷಯಗಳನ್ನು ಹೊಂದಿವೆ :

೧. ಪಾಶ್ಚಿಮಾತ್ಯ ನಾಗರೀಕತೆಯು ವಸ್ತುನಿಷ್ಠತೆಯ, ವೈಚಾರಿಕತೆಯ, ಬೌದ್ಧಿಕವಾದ ಮತ್ತು ಮಹಾಸಂಸ್ಕೃತಿಗಳ ನಾಗರೀಕತೆ ಎಂಬ ಹೇಳಿಕೆಯನ್ನು ಅವು ಯಾವುದೂ ಅಲ್ಲಗಳೆಯುವುದಿಲ್ಲ. ಸೆಂಘರನು ಐರೋಪ್ಯ ಮನಸ್ಸಿಗೆ ಯಾವುದು ವೈಚಾರಿಕತೆ ಮತ್ತು ತರ್ಕವೂ ಅದು ಆಫ್ರಿಕನ್ ಮನಸ್ಸಿಗೆ ಭಾವನೆ ಮತ್ತು ಗ್ರಹಿಕೆ(sencitivity) ಎನ್ನುವವರೆಗೂ ಹೋಗಿದ್ದಾನೆ.

೨. ಅವು ಎಲ್ಲವೂ ಕಪ್ಪು ಮನುಷ್ಯನು 'ಮಹಾ' ಸಂಸ್ಕೃತಿಗಳಲ್ಲಿ ಪಾಲನ್ನೂ ಹೊಂದಿದ್ದಾನೆ ಎಂಬುದನ್ನು ಸಾಬೀತು ಪಡಿಸಲು ಪ್ರಯತ್ನಿಸುತ್ತವೆ. ಅಥವಾ ಐರೋಪ್ಯ ನಾಗರೀಕತೆಗೆ ಸಮಾನವಾಗುವ ಅಥವಾ ಪೂರಕವಾಗುವ ಮಹಾ ಸಂಸ್ಕೃತಿಯೊಂದನ್ನು ಹೊಂದಿದ್ದಾನೆ ಎಂಬುದನ್ನೂ ಸಾಬೀತು ಪಡಿಸಲು ಪ್ರಯತ್ನಿಸುತ್ತವೆ.

ಸೆಂಘರನು ನೆಗ್ರಿಟ್ಯೂಡನ್ನು ಒಂದು ಸಿದ್ಧಾಂತ, ಒಂದು ಸಂಸ್ಕೃತಿ-"ಕಪ್ಪು ಪ್ರಪಂಚದ ಮೌಲ್ಯಗಳ ಸಮೂಹ ಮತ್ತು ಅವುಗಳ ಜೀವನಕ್ರಮ"–, ಮಾರ್ಕ್ಸ್‌ವಾದ, ಲೆನಿನ್‌ವಾದ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ ಸಿದ್ಧಾಂತಗಳಿಗೆ ಸಮಾನವಾದ ಸಿದ್ಧಾಂತ ಮತ್ತು ಸಂಸ್ಕೃತಿಯೆಂದು ಪರಿಗಣಿಸುತ್ತಾನೆ. ಅವನು ಹೇಳುತ್ತಾನೆ: "ನೀಗ್ರೋ ಆಫ್ರಿಕನ್ ತತ್ವಶಾಸ್ತ್ರವು"-, "ಮನುಷ್ಯನನ್ನು ಆಬ್ಜೆಕ್ಟ್ ಮತ್ತು ಸಬ್ಜೆಕ್ಟ್ ಆಗಿ ಗುರಿ ಮತ್ತು ಮಾರ್ಗವಾಗಿ ಸೃಷ್ಟಿಯ ಕೇಂದ್ರ ಸ್ಥಾನದಲ್ಲಿರಿಸುತ್ತದೆ."

ಸೆಂಘರನು ನೆಗ್ರಿಟ್ಯೂಡ್‌ನ್ನು ಆಧುನಿಕ ಮಾನವೀಯತೆ ಎಂದು ನಂಬುತ್ತಾನೆ ಮತ್ತು ಮೂರು ಪ್ರಶ್ನೆಗಳ ಮೇಲೆ ಕೇಂದ್ರೀಕರಿಸುತ್ತಾನೆ.

ಭೂಮಿಯ ಮೂಲ ಏನು ?
ಭೂಮಿಯು ಯಾವುದರಿಂದ ಮಾಡಲ್ಪಟ್ಟಿದೆ?
ಭೂಮಿಯ ಮೇಲೆ ಮಾನವನ ಪಾತ್ರವೇನು?

ಸೆಂಘರನು ಒಬ್ಬ ಮಹಾ ಚಿಂತನಶೀಲ ಮತ್ತು ಒಂದು ಬಡ ಆಫ್ರಿಕಾದೇಶದ ಅಧ್ಯಕ್ಷ. ಅವನೊಬ್ಬ ಬುದ್ಧಿಜೀವಿ ರಾಜಕಾರಣಿ. ಅವನು ಕೇಳಿದ ಮೇಲಿನ ಮೂರು ಪ್ರಶ್ನೆಗಳಿಗೆ ನಾವು ಅವನನ್ನು ಕ್ಷಮಿಸಬಹುದೆ-ಆಧುನಿಕ ಜಗತ್ತಿನಲ್ಲಿ ಕಪ್ಪು ಮನುಷ್ಯನ ನಿಜವಾದ ಅಸ್ತಿತ್ವದಿಂದ ವಿಮುಖವಾದ ಪ್ರಶ್ನೆಗಳಾದಾಗ? ಕ್ಷಮಿಸಲಾರೆವು. ಅವನ ಮೂರು ಪ್ರಶ್ನೆಗಳನ್ನು ಕೆಳಗಿನವುಗಳೊಂದಿಗೆ ಹೋಲಿಸಬೇಕು–ಆ ಮೂರು ಪ್ರಶ್ನೆಗಳು :

೧) ಕಪ್ಪು ಜನ ವಿರೋಧಿ ಸಾಮಾಜಿಕ ವಸ್ತುಸ್ಥಿತಿಯ ಮೂಲ ಯಾವುದು?
೨) ಈ ವಸ್ತುಸ್ಥಿತಿಯ-ಶೋಷಣೆಯ-ಸ್ವಭಾವಗಳೇನು?
೩) ಈ ವಸ್ತುಸ್ಥಿತಿಯನ್ನು ಅಳಿಸಿ ಹಾಕಲು ಕಪ್ಪು ಮನುಷ್ಯನು ಏನನ್ನು ಮಾಡುತ್ತಿದ್ದಾನೆ?

ಕಪ್ಪು ಮನುಷ್ಯನ ಆಧುನಿಕ ಸಮಸ್ಯೆಗಳಿಗೆ ಅತ್ಯಂತ ತುರ್ತಿನ ಮತ್ತು ಆಚರಣೀಯ ಪರಿಹಾರಗಳನ್ನು ಕೋರುವಂತಹ ಪ್ರಶ್ನೆಗಳು ಇವು.

ಡಬ್ಲ್ಯು ಅಬ್ರಹಾಂ ಎಂಬುವವರು ಆಫ್ರಿಕಾದ ಮನಸ್ಸು [(Mind of Africa)1962] ಎಂಬ ಪುಸ್ತಕದಲ್ಲಿ ಆಫ್ರಿಕನ್‌ನು ಅಂದರೆ ಕಪ್ಪು ಮನುಷ್ಯನು ತನ್ನದೇ ಆದ ವಿಶ್ವಕಲ್ಪನೆ, ತನ್ನದೇ ಆದ ತತ್ವಶಾಸ್ತ್ರಗಳನ್ನು ಹೊಂದಿದ್ದಾನೆ. ಮತ್ತು ಅವನ ಜೀವನ ಮತ್ತು ಚಟುವಟಿಕೆಗಳು ಈ ಕಲ್ಪನೆಯನ್ನು ಆಧರಿಸಿವೆ-ಈ ಕಲ್ಪನೆಯು ಜಗತ್ತಿನ ಬಗ್ಗೆ ಆಧ್ಯಾತ್ಮಿಕ ದೃಷ್ಟಿಕೋನ ಹೊಂದಿದೆ. ಮತ್ತು ಸಾಂಪ್ರದಾಯಿಕ ಅಕನ್ (Akan) ಸಮಾಜವು ಈ ದೃಷ್ಟಿಕೋನವನ್ನು ಆಧರಿಸಿದ ಸಂಗತಿಗಳನ್ನು ಬಹಳಷ್ಟು ಪ್ರಕಟಿಸುತ್ತದೆ ಎಂಬುದನ್ನು ಸಾದರ ಪಡಿಸಿದ್ದಾರೆ.

ಜೆ. ಎಂಬಿಟಿಯವರು ಪ್ರಸಕ್ತ ಐರೋಪ್ಯ ಸಂಸ್ಕೃತಿಯಲ್ಲಿ ಆಫ್ರಿಕನ್‌ನಿಗೆ ಒಂದು ಮುಖವನ್ನು ಕೊಡುವಂತಹ ತತ್ವಶಾಸ್ತ್ರವನ್ನಾಗಲಿ ಸಂಸ್ಕೃತಿಯನ್ನಾಗಲಿ ಪ್ರಜ್ಞಾಪೂರ್ವಕವಾಗಿ ಕಂಡುಹಿಡಿಯಬಲ್ಲಂತಹ ಒಬ್ಬ ಬುದ್ಧಿಜೀವಿ ಅಥವಾ ಚಿಂತನಶೀಲರಾಗಿಲ್ಲದೇ ಇರಬಹುದು. ಆದರೆ ಅವರ 'ಆಫ್ರಿಕಾದ ಧರ್ಮ ಮತ್ತು ತತ್ವಶಾಸ್ತ್ರ' ಎಂಬ ಪುಸ್ತಕದಲ್ಲಿ ಇದನ್ನೇ ಮಾಡುತ್ತಿರುವ ಹಾಗೆ ಕಾಣುತ್ತದೆ. ಆದರೆ ಅವರ ಉದ್ದೇಶವು ಯೂರೋಕ್ರಿಶ್ಚಿಯನ್‌ರನ್ನು, ಕಪ್ಪು ಮನುಷ್ಯನು ಹೀದನ್ (Heathen) ಅಥವಾ ನಾಸ್ತಿಕನಾಗಿ ಇರಲಿಲ್ಲ ಮತ್ತು ಇಲ್ಲ ಎಂದು ಒಪ್ಪಿಸುವುದರ ಬಯಕೆಯ ಸುತ್ತಲೇ ಸುತ್ತುತ್ತಿರುವಂತೆ ಕಾಣಿಸುತ್ತದೆ. ಈ ಉದ್ದೇಶವು ಯೂರೋ ಕ್ರಿಶ್ಚಿಯಾನಿಟಿಯು (ಕ್ರೈಸ್ತ ಧರ್ಮವು) ಒಂದು ಮಹಾ ಮತ್ತು ಬಹಳ ಮೌಲಿಕವಾದ ಧರ್ಮ ಎಂಬುದನ್ನು ಅಂದುಕೊಂಡು ಕ್ರೈಸ್ತ ಧರ್ಮವನ್ನು ಬಹಳ ರೀತಿಯಲ್ಲಿ ಹೊಂದುವಂತಹ ಧರ್ಮಗಳು ಆಫ್ರಿಕನ್‌ಲ್ಲಿ

ಕಪ್ಪು ಪ್ರಜ್ಞೆ

ಇನ್ನವು ಎಂಬುದನ್ನು ಸಾದರ ಪಡಿಸಬಹುದಾದರೆ ಅನು ಅವಮಾನಕರ ಎಂದು ತಿಳಿಯುತ್ತದೆ. ನಾನು ಇಲ್ಲಿ ಉದ್ಧರಿಸಿದ ಎಲ್ಲ ಲೇಖಕರೂ ಬಿಳಿ ಮನುಷ್ಯನಂತೆ ಕಪ್ಪು ಮನುಷ್ಯನೂ ಸಹ ತನ್ನದೇ ಆದ ಮಹಾ ಸಂಸ್ಕೃತಿ ಅಥವಾ ನಾಗರೀಕತೆಯನ್ನು ಹೊಂದಿದ್ದ ಅಥವಾ ಹೊಂದಿದ್ದಾನೆ ಎಂದು ಸಾದರ ಪಡಿಸುವ ಪ್ರಯತ್ನದಲ್ಲಿ ಪೌರಾಣಿಕ ಅಥವಾ ನೆಗ್ರಿಟ್ಯೂಡ್ ಪ್ರಜ್ಞೆಯನ್ನು ಸಂಕೇತಿಸುತ್ತದೆ.

ನೆಗ್ರಿಟ್ಯೂಡ್ ವಾದಿಗಳನ್ನು ಹಲವಾರು ತೀವ್ರ ಖಂಡನೆಗಳಿಗೆ ಗುರಿಪಡಿಸಲಾಗಿದೆ. ಈಗ ನಾನು ಯೋಚಿಸುತ್ತಿರುವ ಮತ್ತು ಸೂಚಿಸ ಬಯಸುವ ಒಂದು: ತಬನ್ ಲೋಲಿಯಾಂಗ್ (Taban Lo-Liyang) ಎಂಬ ಒಬ್ಬ ಪೂರ್ವ ಆಫ್ರಿಕಾದ ಲೇಖಕರದು. ಅವರ 'ಕೊನೆಯ ಮಾತು' (Last word) ಎಂಬ ಪುಸ್ತಕದಲ್ಲಿ ತಬನ್‌ರವರು ನೆಗ್ರಿಟ್ಯೂಡ್‌ವಾದಿಗಳ ಮೇಲೆ ಘಾಸಿಗೊಳಿಸುವಂತಹ ದಾಳಿಯನ್ನೆಸಗಿದ್ದಾರೆ. ಮತ್ತು ನೀಗ್ರೊ ಸಂಸ್ಕೃತಿಯ ಬಗ್ಗೆ ಮೆಚ್ಚುಗೆಯನ್ನು ತೋರಿಸಿದ್ದಾರೆ. ಅವರು ಆಫ್ರಿಕನ್ ವಿದ್ಯಾರ್ಥಿಗಳು ಹೋಮರ್, ದಾಸ್ತೊವಸ್ಕಿ, ಬ್ರೆಕ್ಟ್, ಸಾರ್ತ್ರ್ ಇವರುಗಳನ್ನು ಓದಬೇಕು ಮತ್ತು ಬ್ಯಾಕ್, ಬಿಥೋವನ್, ಮತ್ತು ಮೊಜಾರ್ಟ್‌ರವರ ಸಂಗೀತಗಳನ್ನು ಕೇಳಬೇಕೆಂದು ಬಯಸುತ್ತಾರೆ. ಅವರುಗಳು ಚಿನುವಾ ಅಚುಬೆ ಮತ್ತು ಎಕ್ವೆನ್ಸಿಯವರನ್ನು ಓದುವ ಬದಲು, "ಉತ್ತಮ ಬದುಕಿಗೆ" ಹೆಜ್ಜೆ ಹಾಕುವುದರ ಬದಲು ನಿರಿಯಮ್ ಅಕೆಬಾರವರ ಸಂಗೀತವನ್ನು ಕೇಳುವುದರ ಬದಲು ಈ ವಿಷಯಗಳ ಬಗ್ಗೆ ಏಕಾಗ್ರರಾಗಬೇಕು. ಯಾರಿಗಾದರೂ ನಾವು ನೀಟ್ಷೆ ಮತ್ತು ಹೋಮರರ ಬದಲು ತಬನ್‌ರವರನ್ನು ಏಕೆ ಓದಬೇಕು ಎಂದು ಅನ್ನಿಸದಿರಲಾರದು. ತಬನ್‌ರವರು 'ಮಹಾ' ವಿಷಯಗಳ ಮಹಾ ಆರಾಧಕರು : ಅವರ ಪ್ರಕಾರ ಮಹಾ ವಿಷಯಗಳನ್ನು ಪಾಶ್ಚಿಮಾತ್ಯ ಮಹಾಕಾವ್ಯಗಳಲ್ಲಿ ಮಾತ್ರ ಕಾಣಬಹುದು ಮತ್ತು ಆಫ್ರಿಕಾದ ಪೌರಾಣಿಕ ಗತಕಾಲದಲ್ಲಿ ಕಾಣಲು ಸಾಧ್ಯವಿಲ್ಲ. ಅವರು ತಮ್ಮ ಪುಸ್ತಕವನ್ನು ಸಾಂಸ್ಕೃತಿಕ ಹೊಂದಾಣಿಕೆ ಎಂದು ಕರೆಯುತ್ತಾರೆ. ಎಂತಹ ಹೊಂದಾಣಿಕೆ ? ಆಫ್ರಿಕನ್‌ರು ಈ ಹೊಂದಾಣಿಕೆಗೆ ಕೊಡುಗೆ ನೀಡಲು ಸಾಂಸ್ಕೃತಿಕವಾಗಿ ಏನನ್ನು ಹೊಂದಿಲ್ಲವಾದ್ದರಿಂದ ತಬನ್‌ರವರ ಸಾಂಸ್ಕೃತಿಕ ಹೊಂದಾಣಿಕೆಯು ಕೇವಲ ಪಾಶ್ಚಿಮಾತ್ಯ ಪುರಾಣಗಳ-ಹೋಮರ್‌ನ-ಸಾಂಸ್ಕೃತಿಕ ಆರಾಧನೆ ಮಾತ್ರ ಆಗಬಹುದು.

ಅಲು ಉಜುಕೆ (Aloo Ojuke)ರವರು "ಸಾರಸಂಗ್ರಹದ ಕಲ್ಪನೆಯ ಮೂಲಕ ಆಫ್ರಿಕಾದ ಚಿಂತನೆ" ಎಂಬ ಲೇಖನದಲ್ಲಿ (೧೯೭೨) ತಬನ್‌ರವರ ಹೊಂದಾಣಿಕೆಯು ಆಧರಿಸಲ್ಪಟ್ಟಿರುವ material ಆಧಾರವು ಸುಳ್ಳು ಎಂದು ಹೇಳುತ್ತಾರೆ. ಬಹುಶಃ ಇದು ಪರಸ್ಪರ ಹೋರಾಟದಲ್ಲಿರುವ ವರ್ಗಗಳ ನಡುವೆ ಸಾಂಸ್ಕೃತಿಕ ಸಹಕಾರ ಸಾಧ್ಯವಿಲ್ಲದ್ದರಿಂದ ಇರಬಹುದು. ಪರಸ್ಪರ ಹೋರಾಟದಲ್ಲಿರುವ ಈ ವರ್ಗಗಳು ಹೋರಾಟದಲ್ಲಿರುವ ಜನಾಂಗಗಳೂ ಆದಾಗ ಇನ್ನೂ ಹದಗೆಡುತ್ತದೆ.

ಗಯಥೆ ಇನ್ಸ್‌ಟ್ಯೂಟ್‌ನಲ್ಲಿ ಓದಿದ ತಮ್ಮ ಲೇಖನದಲ್ಲಿ ಸಿ. ಎಲ್. ವಂಜಾಲರವರು ಹೇಳುತ್ತಾರೆ-ತಬನ್ ಮತ್ತು ಅವರ ಜೊತೆಗಾರರು ತಮ್ಮ ಸಮಾಜದ ಕೀಲುಗೊಂಬೆಗಳಾಗಲು ನಿರಾಕರಿಸುತ್ತಾರೆ ; ಅವರು ತಮ್ಮದೇ ಆದ "ಕಲೆಗಾಗಿ ಕಲೆಯಲ್ಲಿನ ಖಾಸಗೀ ವಸ್ತುಸ್ಥಿತಿ ಮತ್ತು ವೈಯಕ್ತಿಕ ಈಡೇರಿಕೆ"ಯನ್ನು ಅನ್ವೇಷಿಸುತ್ತಾರೆ.

ಇಲ್ಲ,ಅದು ಕಲೆಗಾಗಿ ಕಲೆಯಲ್ಲ ! ಅದು ಪಾಶ್ಚಿಮಾತ್ಯ ಮಹಾ ಕಾವ್ಯಗಳಿಗಾಗಿ ಕಲೆ. ತಬನ್‌ರವರು ಇಬ್ಬಂದಿ ಕಪ್ಪು ಪ್ರಜ್ಞೆಯನ್ನು ಸಂಕೇತಿಸುತ್ತಾರೆ : ಅದು ವಸಾಹತುಶಾಹಿ ಹಾಗೂ ಪೌರಾಣಿಕವಾದದ್ದು 'ವಸಾಹತುಶಾಹಿ' ಏಕೆಂದರೆ ತಬನ್‌ರವರಿಗೆ ಐರೋಪ್ಯ ಮಹಾಕಾವ್ಯಗಳು ವಸ್ತುನಿಷ್ಠತೆಯನ್ನು ಪ್ರತಿನಿಧಿಸುತ್ತವೆ. ವೈಚಾರಿಕವಾದದ್ದು ಮತ್ತು ಒಳ್ಳೆಯದು-ನಾವು ಅನುಕರಿಸ ಬೇಕಾದದ್ದು ; ಕಪ್ಪು ಇದಾವುದನ್ನೂ ಪ್ರತಿನಿಧಿಸುವುದಿಲ್ಲ. ಆದರೆ ಶ್ರಮದ ಮೂಲಕ (ಮಕೇಬಾನ ಬದಲಿಗೆ ಬಿಥೋವನ್) ಅವುಗಳನ್ನು ಹೊಂದಬಹುದು. 'ಅದು ಪೌರಾಣಿಕ' ಏಕೆಂದರೆ ತಬನ್‌ರವರು ಹೇಳುವುದು ಈ ನಂಬಿಕೆಯನ್ನು ಒಳಗೊಳ್ಳುತ್ತದೆ-ಒಂದು ಪೌರಾಣಿಕ ನಂಬಿಕೆ- ಏನೆಂದರೆ ವಸ್ತುನಿಷ್ಠರೂ, ವೈಚಾರಿಕರೂ ಮತ್ತು ಒಳ್ಳೆಯವರೂ ಎಂದರೆ ಬಿಳಿಯರು. ಇದಕ್ಕೆ ವಿರುದ್ಧವಾದ ಗುಣಗಳನ್ನುಳ್ಳವರೆಂದರೆ ಕರಿಯರು. ಸೆಂಘರ್‌ರಂತಹ ಜನಗಳ ಪೌರಾಣಿಕ ಪ್ರಜ್ಞೆಯನ್ನು ವಿರೋಧಿಸುವ ಮಟ್ಟದವರೆಗೆ ತಬನ್‌ರಂತಹವರ ಪ್ರಜ್ಞೆಯು ಏಕಾಂಗೀ ಪೌರಾಣಿಕ ಪ್ರಜ್ಞೆಯಾಗಿರುತ್ತದೆ. ಇದು ಕೆಟ್ಟದ್ದಲ್ಲದಿರಬಹುದು-ಆದರೆ ಈ ಪ್ರಜ್ಞೆಯು ವಸಾಹತುಶಾಹೀ ಪ್ರಜ್ಞೆಯೂ ಆಗಿದ್ದಾಗ ಕೆಟ್ಟದಾಗಿರುತ್ತದೆ.

೪. ಅಸ್ತಿತ್ವವಾದೀ ಪ್ರಜ್ಞೆ : ಪೌರಾಣಿಕ ಪ್ರಜ್ಞೆಯಲ್ಲಿ ಕಪ್ಪು ಪ್ರಜ್ಞೆಯು ಬಿಳಿಯರ ಮೌಲ್ಯಗಳ ವ್ಯವಸ್ಥೆಯು ಅಥವಾ ಬಿಳಿಯರ ನಾಗರೀಕತೆಯು ವಸ್ತುನಿಷ್ಠರಹಿತ, ಅವೈಚಾರಿಕ ಮತ್ತು ಕೆಟ್ಟದಾಗಿರಬಹುದು ಎಂಬುದನ್ನು ಕಂಡುಕೊಂಡಿರುವುದಿಲ್ಲ. ಅಸ್ತಿತ್ವವಾದೀ ಪ್ರಜ್ಞೆಯೊಂದಿಗೆ ಈ ಕಂಡುಕೊಳ್ಳುವಿಕೆ ಬರುತ್ತದೆ. ಈ ಪ್ರಜ್ಞೆಯ ಮುಖ್ಯ ಆವರಣವು ಏನೆಂದರೆ ಮುಖ್ಯವಾಗಿ ಕಪ್ಪು ಮನುಷ್ಯನು ಬದುಕಿರುತ್ತಾನೆ. ಆದರೆ ಅವನು ಉತ್ತಮವಾಗಿ ಬದುಕಬೇಕು ಎಂಬುದು ; ಈ ಸತ್ಯವನ್ನು ಅಲ್ಲಗಳೆಯುವ, ತಿರಸ್ಕರಿಸುವ ಅಥವಾ ಗೌಣಿಸುವ ಏನೇ ಆಗಲಿ, ಅದು ಅವೈಚಾರಿಕವಾದದ್ದಾಗಿರಲೇಬೇಕು.

ಬಿಳಿಯರ ಸಂಸ್ಕೃತಿ ಅಥವಾ ನಾಗರೀಕತೆಯು ಈ ಸತ್ಯವನ್ನು ಒಪ್ಪಿಕೊಳ್ಳುವುದಿಲ್ಲ ಅಥವಾ ಗೌಣಿಸುತ್ತದೆ. ಆದ್ದರಿಂದ ಬಿಳಿಯರ ನಾಗರೀಕತೆಯು ಅವೈಚಾರಿಕವಾದದ್ದು.

ಈ ಪ್ರಜ್ಞೆಯಲ್ಲಿನ ಹೇಳಿಕೆಯು ಪೌರಾಣಿಕ ಪ್ರಜ್ಞೆಯಲ್ಲಿಯಂತೆ ಕಪ್ಪು ಎಂದರೆ ಸುಂದರ, ತನಗೆ ತಾನೇ ಒಳ್ಳೆಯದು ಮತ್ತು ವೈಚಾರಿಕವಾದದ್ದು ಎಂಬಂತೆ ಅಲ್ಲ, ಇಲ್ಲಿನ ಹೇಳಿಕೆಯು ಕಪ್ಪೇ ವೈಚಾರಿಕವಾದದ್ದು ಎಂದು ಬದಲಾಗುತ್ತದೆ-ಒಟ್ಟನಲ್ಲಿ ಹೇಳುವುದಾದರೆ ಕಪ್ಪು ಮನುಷ್ಯನು ಮತ್ತು ಅವನಂತಹವರು ಸತ್ಯವನ್ನು ನ್ಯಾಯವನ್ನು, ಸೌಂದರ್ಯವನ್ನು ಮತ್ತು ಒಳ್ಳೆಯ ನೈತಿಕ ಪ್ರಜ್ಞೆಯನ್ನೂ ತಮ್ಮಕಡೆ ಹೊಂದಿದ್ದಾರೆ. ಅವರಿಗೆ ಅನ್ಯಾಯವಾಗಿದೆ ಮತ್ತು ಅದನ್ನು ಪರಿಹರಿಸಬೇಕಾಗಿದೆ. ಈ ಹಂತದ ಪ್ರಜ್ಞೆಯಲ್ಲಿ 'ಪಾಶ್ಚಿಮಾತ್ಯ ನಾಗರೀಕತೆ' ಎಂದು ಕರೆಯಲ್ಪಡುವುದರ ಬಗ್ಗೆ ಆರಾಧನೆಗಿಂತ ತಿರಸ್ಕಾರವಿದೆ.

ಒಮ್ಮೆ ಇದು ಬಿಳಿಯರ ಪ್ರಪಂಚಕ್ಕೆ ತಮ್ಮ ಬಾಗಿಲುಗಳನ್ನು ಮುಚ್ಚಿ ತಮ್ಮನ್ನು ತಾವೇ ಉಳಿದ ಮೂರನೇ ಜಗತ್ತಿನೊಂದಿಗೆ ಸಂಪರ್ಕಿಸಿಕೊಂಡು ಕಪ್ಪು ರಾಷ್ಟ್ರೀಯಬಿಡುಗಡೆ ಮತ್ತು

ಕಪ್ಪು ಪ್ರಜ್ಞೆ

ರಾಷ್ಟ್ರೀಯ ಸಂಸ್ಕೃತಿಯನ್ನು ಮುಂದಿಡುತ್ತಿದ್ದ ಕಪ್ಪು ಅಧಿಕಾರಸ್ಥ ನಾಯಕರುಗಳ ಪ್ರಜ್ಞೆಯಾಗಿತ್ತು. ಸ್ಟೋಕ್ಲೀ ಕಾರ್ಮಿಕೇಲ್‌ರವರು (stokely Carmichael) ಒಮ್ಮೆ ಬ್ಲಾಕ್ ಪ್ಯಾಂಥರ್ ಪಾರ್ಟಿಯ ಪ್ರಧಾನ ಮಂತ್ರಿಯಾಗಿದ್ದವರು. ಆ ಪಾರ್ಟಿಯು ಕ್ರಾಂತಿಕಾರೀ ಬಿಳಿ ಜನರ ತತ್ವಗಳೊಂದಿಗಿನ ಸಹಕಾರವನ್ನು ಮುಂದಿಡಲು ಶುರು ಮಾಡಿದ್ದರಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆಯಿತ್ತರು. ಅವರಿಗೆ ಬಿಳೀಮನುಷ್ಯನು ಪ್ರಾಮಾಣಿಕನಾಗಿರಲಾರ, ಒಳ್ಳೆಯವನಾಗಿರಲಾರ ಅಥವಾ ನಂಬಿಕಸ್ಥನಲ್ಲ.

ಫೆನಾನ್ ಮತ್ತು ಎನ್‌ಕ್ರುಮಾಹ್

ಹೆಚ್ಚಿನ ವಿವೇಚನಾಶೀಲವಾದ ಅಸ್ತಿತ್ವವಾದೀ ಪ್ರಜ್ಞೆಯು ಫೆನಾನ್ ಮತ್ತು ಎನ್‌ಕ್ರುಮಾಹ್ ಅಂಥ ಮನುಷ್ಯರಲ್ಲಿ ಕಂಡು ಬರುತ್ತದೆ. ಈ ಇಬ್ಬರು ಮನುಷ್ಯರು ಕಪ್ಪು ಮನುಷ್ಯನು ತಾನು ವೈಚಾರಿಕತೆಯುಳ್ಳವನು ಮತ್ತು ಸುಂದರನು ಎಂದು ನಂಬುವಂತೆ ಪ್ರಯತ್ನಿಸುವಲ್ಲಿ ಅಷ್ಟು ಕಾಳಜಿ ಇದ್ದವರಲ್ಲ. ಅವರು ಕಪ್ಪು ಮನುಷ್ಯನು ತನ್ನಲ್ಲಿನ ಬಿಳಿಯ ಮನುಷ್ಯನು ಅವೈಚಾರಿಕ ಮತ್ತು ವಸ್ತುನಿಷ್ಠರಹಿತ ಎಂಬುದನ್ನು ಅರಿತುಕೊಂಡು ನಂಬುವಂತೆ ಮಾಡುವ ಪ್ರಯತ್ನದಲ್ಲಿ ಕಾಳಜಿಯುಳ್ಳವರಾಗಿದ್ದರು-ಎಂದರೆ ಕಪ್ಪು ಮನುಷ್ಯನ ಆತ್ಮಗೌರವ, ಅಗತ್ಯಗಳು ಮತ್ತು ಸಂಸ್ಕೃತಿಗಳಿಗೆ ಬಿಳೀಮನುಷ್ಯನ ಮೌಲ್ಯಗಳು ಮತ್ತು ಸಂಸ್ಕೃತಿಗಳು ಹಳಸಲಾಗಿವೆ. ಮತ್ತು ಅವರು ಬಿಳಿಯರ ಸಂಸ್ಕೃತಿಯನ್ನು ಈ ಆಧಾರದ ಮೇಲೆ ಟೀಕಿಸುತ್ತಾರೆ. ಆದ್ದರಿಂದ ಅವರ ಸಂದೇಶವೇನೆಂದರೆ ಕಪ್ಪು ಮನುಷ್ಯನ ಆತ್ಮಗೌರವ ಮತ್ತು ನಿಜ ಅಗತ್ಯಗಳಿಗೆ ಸಂಬಂಧಿಸಿದ ಹಾಗೆ ವೈಚಾರಿಕತೆ, ವಸ್ತುನಿಷ್ಠತೆ ಒಳ್ಳೆಯತನ ಮತ್ತು ಸೌಂದರ್ಯವು ಕಪ್ಪೇ ಆಗಿದೆ.

ಅಂತಃಸಾಕ್ಷಿವಾದದಲ್ಲಿ (೧೯೬೪) ಎನ್‌ಕ್ರುಮಾಹ್‌ರವರು ಇಡೀ ಒಂದು ಅಧ್ಯಾಯವನ್ನು ಪ್ರಪಂಚದ ಬಗೆಗಿನ ಕಲ್ಪನೆಯಲ್ಲಿ ಆಫ್ರಿಕನರ (the Monistic) ವೈಚಾರಿಕತೆ ಮತ್ತು ಯೂರೋಕ್ರಿಶ್ಚಿಯನರ ಅವೈಚಾರಿಕತೆಯನ್ನು ಸಾಬೀತು ಪಡಿಸುವುದಕ್ಕಾಗಿ ಅರ್ಪಿಸಿದ್ದಾರೆ. ಅಗತ್ಯ ವೈಚಾರಿಕ ತತ್ವವು ಯೂರೋಕ್ರಿಶ್ಚಿಯನರ ಕಲ್ಪನೆಯಲ್ಲಿ ಈಡೇರಿಲ್ಲ. ಈ ತತ್ವವು ಆಫ್ರಿಕನರ ಕಲ್ಪನೆಯನ್ನು ಬಹಳಷ್ಟು ಹೊಂದಿಕೊಳ್ಳುತ್ತದೆ.

ಕಪ್ಪು ವೈಚಾರಿಕತೆ ಮತ್ತು ಒಳ್ಳೆಯತನಗಳಲ್ಲಿನ ಎನ್ ಕ್ರುಮಾಹ್‌ರವರ ನಂಬಿಕೆಯು ಆಫ್ರಿಕಾದ ಒಗ್ಗಟ್ಟಿನ ಹೋರಾಟದ ಸಮಯದಲ್ಲಿ ಅವರು ತಮ್ಮ ಜೊತೆಗಾರರಲ್ಲಿ ಸೈದ್ಧಾಂತಿಕ ಭೇದವನ್ನು ಮಾಡಲಿಲ್ಲ ಏಕೆ ಎಂಬ ಪ್ರಶ್ನೆಗೆ ಉತ್ತರ ನೀಡೀತೆ ? ನನಗೆ ಗೊತ್ತಿಲ್ಲ. ಆದರೆ ಎನ್‌ಕ್ರುಮಾಹ್‌ರವರು ಆಫ್ರಿಕನ್ ದೇಶಗಳು ಸೈದ್ಧಾಂತಿಕ ನೆಲೆಯಲ್ಲಿ ಒಂದಾಗಿದ್ದವೇ ಇಲ್ಲವೇ ಎನ್ನುವುದಕ್ಕಿಂತ ಮುಖ್ಯವಾಗಿ ಆಫ್ರಿಕಾದ ಒಗ್ಗಟ್ಟನ್ನು ಬಯಸಿದ್ದರು ಎಂಬುದು ನನಗೆ ಗೊತ್ತು.

ಫೆನಾನ್‌ರವರು ತಮ್ಮ ಕಪ್ಪು ಚರ್ಮ ಮತ್ತು ಬಿಳಿ ಹೊದಿಕೆ' ಪುಸ್ತಕವನ್ನು ಕಪ್ಪು ಮನುಷ್ಯನು ಅನಾಥಪ್ರಜ್ಞೆಯಿಂದ ಸನಾಥ ಪ್ರಜ್ಞೆಗೆ ಚಲಿಸುತ್ತಿರುವುದನ್ನು ಕಾಣಬಹುದಾದಂತಹ ಒಂದು ಕನ್ನಡಿ ಎಂದು ಪರಿಗಣಿಸಿದ್ದರು-ಅವೈಚಾರಿಕತೆಯಿಂದ, ಬಿಳೀ ಮನುಷ್ಯನ ಆತ್ಮನಿಷ್ಠತೆಯಿಂದ ವೈಚಾರಿಕತೆಗೆ ಕಪ್ಪುಮನುಷ್ಯನ ಸತ್ಯವಾದ ಆತ್ಮನಿಷ್ಠತೆ ಮತ್ತು ವಸ್ತುನಿಷ್ಠತೆಗೆ. ಫೆನಾನ್‌ರವರನ್ನು ಅಳೆಯುವುದು ಕಷ್ಟ. ಅವರು ಮುಂದಿನ ಘಟ್ಟದಲ್ಲಿ-ಚಾರಿತ್ರಿಕ ಘಟ್ಟದಲ್ಲಿ—ಅಸ್ತಿತ್ವವಾದೀ ಅಥವಾ ಮಾರ್ಕ್ಸ್‌ವಾದೀ ಅಸ್ತಿತ್ವವಾದೀ ಪ್ರಜ್ಞೆಯಲ್ಲಿಯೂ ಕಂಡುಬರುತ್ತಾರೆ.

೫. ಮಾರ್ಕ್ಸ್‌ವಾದೀ ಅಸ್ತಿತ್ವವಾದೀ ಪ್ರಜ್ಞೆ: ಗುಲಾಮ ಪ್ರಜ್ಞೆಯಲ್ಲಿ ಕಪ್ಪುಜನವಿರೋಧೀ ಸಾಮಾಜಿಕ ವಸ್ತುಸ್ಥಿತಿಯ ಬಗೆಗಿನ ಅರಿವು ಎದ್ದು ಕಾಣುವುದಿಲ್ಲ. ಇಲ್ಲಿ ಪ್ರಜ್ಞೆಯು ದುಷ್ಟವಿರೋಧೀ ಸಾಮಾಜಿಕ ವಸ್ತುಸ್ಥಿತಿಯ ಬಗೆಗಿನ ಅರಿವು ಮಾತ್ರ. ಅಲ್ಲೇನಾದರೂ ಕಪ್ಪು ಜನವಿರೋಧೀ ಸಾಮಾಜಿಕ ವಸ್ತುಸ್ಥಿತಿ ಇದ್ದರೆ ಪ್ರಜ್ಞೆಯು ಅದನ್ನು ದುಷ್ಟ ವಿರೋಧಿ ಸಾಮಾಜಿಕ ವಸ್ತುಸ್ಥಿತಿಯ ಒಂದು ಭಾಗವಾಗಿ ಅರಿತುಕೊಳ್ಳುತ್ತದೆ. ಕಪ್ಪಿಗೆ ದುಷ್ಟತೆ ಸಮಾನ ಅಥವಾ ಕಪ್ಪು ದುಷ್ಟತೆಯ ಒಂದು ಭಾಗ.

ವಸಾಹತುಶಾಹೀ ಪ್ರಜ್ಞೆಯಲ್ಲಿ ಕಪ್ಪು ಮನುಷ್ಯನು ಕಪ್ಪುಮನುಷ್ಯನಾಗಿ ಮುಂದುವರಿಯುವುದನ್ನು ನಿಲ್ಲಿಸಬಹುದೆಂಬ ಭ್ರಮೆಯಿದೆ. ಅಂದರೆ ಬಿಳಿಯ ಮನುಷ್ಯನಾಗಿ ಸ್ವಾಭಾವಿಕಗೊಳಿಸುವುದು. ಇಲ್ಲಿ ಪ್ರಜ್ಞೆಯು ಸಾಮಾಜಿಕ ವಸ್ತುಸ್ಥಿತಿಯನ್ನು ಬದಲಾಯಿಸುವ ಉದ್ದೇಶ ಹೊಂದಿಲ್ಲ. ಪೌರಾಣಿಕ ಪ್ರಜ್ಞೆಯಲ್ಲಿ ಸಹ ಸಾಮಾಜಿಕ ವಸ್ತುಸ್ಥಿತಿಯನ್ನು ವಿನಾಶಪಡಿಸುವ ಪ್ರಯತ್ನವಿಲ್ಲ.

ಅಸ್ತಿತ್ವವಾದೀ ಪ್ರಜ್ಞೆಯಲ್ಲಿ ಕಪ್ಪುಜನವಿರೋಧಿ ಸಾಮಾಜಿಕ ವಸ್ತುಸ್ಥಿತಿಯನ್ನು ನಾಶಪಡಿಸುವ ಪ್ರಯತ್ನವಿದೆ. ಆದರೆ ಇಲ್ಲಿ ಪ್ರಜ್ಞೆಯು ಒಂದು ಮೂರ್ತ ಸಿದ್ಧಾಂತವನ್ನು ತನ್ನ ಕೆಲಸದಲ್ಲಿ ಬಳಸಿಕೊಳ್ಳುವುದಕ್ಕಾಗಿ ಹೊಂದಿರುವುದಿಲ್ಲ. ಅದು ಬಿಳಿಯರ ಬಗೆಗಿನ ತನ್ನಬಲವಾದ ಅಪನಂಬಿಕೆ ಮತ್ತು ದ್ವೇಷದಿಂದ ಎಲ್ಲಾ ಕಪ್ಪುಮನುಷ್ಯರು ತನ್ನ ಪರವಾಗಿದ್ದಾರೆ ಎಂಬ ತಪ್ಪು ಮಾಡುತ್ತದೆ. ಅಂದರೆ ಕಪ್ಪುಮನುಷ್ಯರೊಳಗಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಲೆಕ್ಕಕ್ಕಿಲ್ಲ ಎಂದು ಭಾವಿಸುತ್ತದೆ.

ಮಾರ್ಕ್ಸ್‌ವಾದೀ ಅಸ್ತಿತ್ವವಾದೀ ಪ್ರಜ್ಞೆಯು ಅಸ್ತಿತ್ವವಾದಿ ಪ್ರಜ್ಞೆಯ ಮುಂದಿನ ಬೆಳವಣಿಗೆ. ಅದು ಕಪ್ಪುಜನವಿರೋಧೀ ಸಾಮಾಜಿಕ ವಸ್ತುಸ್ಥಿತಿಯು ಕೇವಲ ಮಾರ್ಕ್ಸ್‌ವಾದೀ ವಸ್ತುಸ್ಥಿತಿಗಿಂತ ಒಂದು ಹಂತ ಕೆಟ್ಟದ್ದು ಅಥವಾ ಅವೆರಡೂ ಏಕರೀತಿಯವು ಎಂದು ಒಪ್ಪಿಕೊಳ್ಳುತ್ತದೆ. ಮಾರ್ಕ್ಸ್‌ವಾದೀ ವಸ್ತುಸ್ಥಿತಿ (ಶೋಷಣೆ, ದಬ್ಬಾಳಿಕೆ, ಅನಾಥಪ್ರಜ್ಞೆ, ವರ್ಗಭೇದ) + ವರ್ಣನೀತಿ = ಕಪ್ಪು ಜನವಿರೋಧಿ ಸಾಮಾಜಿಕ ವಸ್ತುಸ್ಥಿತಿ.

ಈ ಹಂತದ ಪ್ರಜ್ಞೆಯಲ್ಲಿ ಮಾರ್ಕ್ಸ್‌ವಾದೀ ವಸ್ತುಸ್ಥಿತಿ ಮತ್ತು ಕಪ್ಪುಜನವಿರೋಧೀ ಸಾಮಾಜಿಕ ವಸ್ತುಸ್ಥಿತಿಯನ್ನು ವಿರೋಧಿಸುವುದನ್ನು ವೈಚಾರಿಕತೆ ಮತ್ತು ಒಳ್ಳೆಯದೆಂದು ಒಪ್ಪಿಕೊಳ್ಳಲಾಗುತ್ತದೆ. ಅಂದ ಮೇಲೆ ವೈಚಾರಿಕತೆಯೆಂದರೆ ಕಪ್ಪು ಜನರ ಬಿಡುಗಡೆ, ಕಪ್ಪು ಜನರ ಸನಾಥಪ್ರಜ್ಞೆ ಮತ್ತು ಕಾರ್ಮಿಕರು ಮತ್ತು ರೈತರ ಕ್ರಾಂತಿಗಳು. ಅವೈಚಾರಿಕತೆಯೆಂದರೆ ಮಾರ್ಕ್ಸ್‌ವಾದಿ ವಸ್ತುಸ್ಥಿತಿ ಮತ್ತು ಕಪ್ಪುಜನವಿರೋಧೀ ಸಾಮಾಜಿಕ ವಸ್ತುಸ್ಥಿತಿ.

ಬಿಳಿಮನುಷ್ಯನು ಈ ಘಟ್ಟದ ಪ್ರಜ್ಞೆಯ ಪ್ರಕಾರ ಮಾರ್ಕ್ಸ್‌ವಾದೀ ಮತ್ತು ಕಪ್ಪುಜನವಿರೋ

ಕಪ್ಪು ಪ್ರಜ್ಞೆ

ಧೀ ವಸ್ತುಸ್ಥಿತಿಯನ್ನು ಹುಟ್ಟುಹಾಕಿ ಉಳಿಸಿಕೊಳ್ಳುತ್ತಾನೆ ಎಂಬುವಷ್ಟರ ಮಟ್ಟಿಗೆ ಅನೈಚಾರಿಕ ಮತ್ತು ಕೆಟ್ಟವನು; ಇಲ್ಲದಿದ್ದರೆ ಬಿಳಿಮನುಷ್ಯನು ಅನೈಚಾರಿಕ ಮತ್ತು ಕೆಟ್ಟವನಲ್ಲ. ಅವನೊಂದಿಗೆ ಸಹಕಾರವನ್ನೂ ಇಟ್ಟುಕೊಳ್ಳಬಹುದು. ಈ ಘಟ್ಟದಲ್ಲಿ ಕಪ್ಪುಮನುಷ್ಯನೂ ಸಹ ಅನೈಚಾರಿಕ ಮತ್ತು ಕೆಟ್ಟವನಾಗಿರಬಲ್ಲ ಎಂಬುದನ್ನು ಒಪ್ಪಿಕೊಳ್ಳಲಾಗುವುದು—ಕಪ್ಪುಜನವಿರೋಧೀ-ಸಾಮಾಜಿಕ ವಸ್ತುಸ್ಥಿತಿಯನ್ನು ಉಳಿಸಿಕೊಂಡು ಬರುವ ಅಥವಾ ಸಮರ್ಥಿಸುವ ಕಪ್ಪು ಮನುಷ್ಯನು ಅನೈಚಾರಿಕ ಮತ್ತು ಕೆಟ್ಟವನು. ಇದು ಕಪ್ಪು ಪ್ರಜ್ಞೆಯ ಇತ್ತೀಚಿನ ಘಟ್ಟ; ಅದು ಪ್ರಜ್ಞೆಯು ತನ್ನ ಮತ್ತು ತನ್ನ ವಿಕಾಸದ ಬಗ್ಗೆ ಅರಿವನ್ನು ಹೊಂದಿರುವ ಘಟ್ಟ. ಅದು ಮೊದಲ ನಾಲ್ಕು ಘಟ್ಟಗಳನ್ನೂ ಗುರುತಿಸುತ್ತದೆ ಮತ್ತು ಆ ನಾಲ್ಕು ಘಟ್ಟಗಳಲ್ಲಿನ ಪ್ರಜ್ಞೆ ಮತ್ತು ಚಾರಿತ್ರಿಕ ಅಗತ್ಯದ ಸೈದ್ಧಾಂತಿಕ ಹಾಗೂ ತಿಳುವಳಿಕೆಯ ಕೊರತೆಯನ್ನು ಅನುಕಂಪದಿಂದ ಕಾಣುತ್ತದೆ.

ಈ ಘಟ್ಟವನ್ನು ಮಾರ್ಕ್ಸ್‌ವಾದೀ ಅಸ್ತಿತ್ವವಾದಿ ಪ್ರಜ್ಞೆ ಎಂದುಕರೆಯಲಾಗಿದೆ. ಕಪ್ಪುಜನವಿರೋಧಿ ಸಾಮಾಜಿಕ ವಸ್ತುಸ್ಥಿತಿಯನ್ನು ಮುಟ್ಟುವವರೆಗೆ ಅದು ಮಾರ್ಕ್ಸ್‌ವಾದಿ ವಸ್ತುಸ್ಥಿತಿಯೊಂದಿಗೆ ಸಮಾನವಾಗುವ ಮಟ್ಟಿಗೆ ಅದು ಮಾರ್ಕ್ಸ್‌ವಾದೀ. ಅದು ಅಸ್ತಿತ್ವವಾದಿ ಏಕೆಂದರೆ ಮಾರ್ಕ್ಸ್‌ವಾದೀ ಚಾರಿತ್ರಿಕ ನಿಶ್ಚಿತವಾದವು ಕಪ್ಪು ಚಾರಿತ್ರಿಕಪ್ರಜ್ಞೆಯಿಲ್ಲದೆ ಕಪ್ಪು ಮನುಷ್ಯನಿಗಾಗಿ ಕೆಲಸ ಮಾಡಲಾರದು ಎಂಬುದನ್ನು ಒಪ್ಪಿಕೊಳ್ಳುತ್ತದೆ. ಚಾರಿತ್ರಿಕ ಅಗತ್ಯ ಎಂದರೆ ಅಸ್ತಿತ್ವದಲ್ಲಿರುವ ಕಪ್ಪು ಮನುಷ್ಯನ ಬದುಕನ್ನು ಬದಲಾಯಿಸುವುದರಲ್ಲಿ ವೇಗವರ್ಧಕಗಳು ಮತ್ತು ವಿಮೋಚಿಸುವವರಾಗಿ (redeemer) ವರ್ತಿಸುವ ಕಪ್ಪು ಚಾರಿತ್ರಿಕ ವ್ಯಕ್ತಿಗಳ ಮನೋ ನಿರ್ಧಾರಗಳು ಮತ್ತು ಬಯಕೆಗಳು.

ಈ ಘಟ್ಟವನ್ನು 'ಆಫ್ರಿಕಾದ ಕ್ರಾಂತಿಯೆಡೆಗೆ' ಎಂಬ ಪುಸ್ತಕದಲ್ಲಿ ಫೆನಾನ್‌ರವರು ಸಾಂಕೇತಿಸುತ್ತಾರೆ.

"ಮೆಟೀರಿಯಲ್ ಶಕ್ತಿಗಳ ಯಾಂತ್ರಿಕ ಅಭಿವೃದ್ಧಿಯ ಮೂಲಕ ಆಫ್ರಿಕಾ ಸ್ವತಂತ್ರನಾಗುವುದಿಲ್ಲ. ಆ ಖಂಡದ ಬಿಡುಗಡೆಯ ತರ್ಕಗಳನ್ನು ಚಲಿಸುವಂತೆ ಮತ್ತು ಆಚರಣೆಯನ್ನು ಆಫ್ರಿಕನ್‌ನ ಮನಸ್ಸು ಮತ್ತು ಕ್ರಿಯೆಗಳು ಮಾತ್ರ ಮಾಡಬಲ್ಲವು........

"ಹೆಚ್ಚೂ ಕಡಿಮೆ" ಯಾಂತ್ರಿಕವಾಗಿ ಅಗತ್ಯವಾದ ವಸ್ತುನಿಷ್ಠ ಆಶಾವಾದವು ಇಲ್ಲ ಆದರೆ ಆ ಆಶಾವಾದವು ಕ್ರಾಂತಿಕಾರೀಬದ್ಧತೆ ಮತ್ತು ಹೋರಾಟದ ಜೊತೆಗೂಡುವ ಭಾವನೆಗಳಾಗಿರಬೇಕು ಎಂಬುದನ್ನು ಆಫ್ರಿಕನ್ನರು ನೆನಪಿಡಲೇಬೇಕು". (ಪು೬೧.

ಎನ್‌ಕ್ರುಮಾಹ್‌ರವರು ತಾವು ಅಧಿಕಾರವನ್ನು ಕಳೆದುಕೊಂಡು ಜಿನೀವಾದಲ್ಲಿ ರಾಜಕೀಯ ಬಹಿಷ್ಕೃತನಂತೆ ಬದುಕುತ್ತಿದ್ದಾಗ ಈ ಘಟ್ಟವನ್ನು ತಲುಪುತ್ತಿದ್ದರು. ಅಲ್ಲಿ ಅವರು "ಆಫ್ರಿಕಾದಲ್ಲಿ ವರ್ಗ ಸಂಘರ್ಷ" (1968) ಮತ್ತು "ಕ್ರಾಂತಿಕಾರಿ ಹೋರಾಟದ ಕೈಪಿಡಿ" (1968) ಎಂಬ ಪುಸ್ತಕಗಳನ್ನು ಬರೆದರು.

ದಿವಂಗತ ಅಮಿಲ್‌ಕರ್ ಕಾಬ್ರೆಲ್(Amilcar Cabral) ಪೋರ್ಚುಗೀಸ್ ವಸಾಹತುಶಾಹಿಗಳ ವಿರುದ್ಧದ ತಮ್ಮಹೋರಾಟದಲ್ಲಿ ಕಪ್ಪುಪ್ರಜ್ಞೆಯ ಈ ಘಟ್ಟವನ್ನು ತಲುಪುತ್ತಿದ್ದರು. ಅವರು ರಾಷ್ಟ್ರೀಯ ಬಿಡುಗಡೆಯಲ್ಲಿ ಸಿದ್ಧಾಂತದ ಮುಖ್ಯ ಪಾತ್ರವನ್ನು ನಿಖರವಾಗಿ ಅರಿತುಕೊಂಡಿದ್ದರು ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧದ ಕಪ್ಪು ಮನುಷ್ಯನ ಹೋರಾಟದಲ್ಲಿ ಸೈದ್ಧಾಂತಿಕ ಕೊರತೆಯು ಅತ್ಯಂತ ದೊಡ್ಡ ದೌರ್ಬಲ್ಯ ಎಂದು ಪರಿಗಣಿಸಿದ್ದರು. ಶತ್ರುವಿನ ವಿರುದ್ಧದ ಹೋರಾಟಕ್ಕಿಂತ ಕಪ್ಪುಜನರ ನಡುವೆಯೇ ಸೈದ್ಧಾಂತಿಕವಾಗಿ ಸ್ಪಷ್ಟಗೊಳ್ಳಲು ನಡೆಯಬೇಕಾದ ಅಂತರ್ಜಗಳವು ಹೆಚ್ಚು ಕಷ್ಟವಾದದ್ದು ಮತ್ತು ಹೆಚ್ಚು ಮುಖ್ಯವಾದದ್ದು ಎಂಬುದನ್ನೂ ಸಹ ಅರಿತುಕೊಂಡಿದ್ದರು.

ಆಲ್ಡ್ರಿಜ್ ಕ್ಲೀವರ್(Aldridge Cleaver) ರವರು ತಮ್ಮ "ಹಿಮದ ಮೇಲೆ ಆತ್ಮ' (Soul on Ice 1968) ಪುಸ್ತಕದಲ್ಲಿ ಮತ್ತು "ಸ್ಟೋಕ್ಲೀ ಕಾರ್ಮಿಕೇಲ್‌ರವರಿಗೆ (Stokley Carmichael) ಒಂದು ಬಹಿರಂಗ ಪತ್ರ" ವನ್ನು ಬರೆಯುವ ಸಮಯದಲ್ಲಿ, ಮತ್ತು ಸ್ಟೋಕ್ಲೀ ಕಾರ್ಮಿಕೇಲ್‌ರವರು ಬ್ಲಾಕ್ ಪ್ಯಾಂಥರ್ ಪಾರ್ಟಿಗೆ ರಾಜಿನಾಮೆಯಿತ್ತನಂತರ ಕಪ್ಪು ಪ್ರಜ್ಞೆಯ ಈ ಐದನೇ ಘಟ್ಟವನ್ನು ತಲುಪುತ್ತಿದ್ದರು. ಏಂಜೆಲಾ ಡೇವೀಸ್ (Angela Davies)ಳು ಅಮೇರಿಕಾದ ಕ್ರಾಂತಿಯ ಸಂದರ್ಭದಲ್ಲಿ ಕಪ್ಪು ಶಕ್ತಿಯೆಂದರೆ ಕಪ್ಪು ಜನರ ಬಿಡುಗಡೆಯಾಗಲೇ ಬೇಕು ಎಂಬ ತಮ್ಮ ನಂಬಿಕೆಯಲ್ಲಿ ಮತ್ತು ಒಬ್ಬ ಘೋಷಿತ ಮಾರ್ಕ್ಸ್‌ವಾದಿಯಾಗಿ ಕಪ್ಪು ಪ್ರಜ್ಞೆಯ ಈ ಘಟ್ಟವನ್ನೂ ತಲುಪುತ್ತಿದ್ದಾಳೆ. ಪ್ರಜ್ಞೆಯ ಈ ಐದನೇ ಘಟ್ಟವು ಕಪ್ಪು ಜನ ವಿರೋಧೀ ಸಾಮಾಜಿಕ ವಸ್ತುಸ್ಥಿತಿಯನ್ನು ಬದಲಾಯಿಸುವಲ್ಲಿ ತಾತ್ವಿಕತೆ ಮತ್ತು ಕ್ರಿಯಾಶೀಲತೆಯ ಅತ್ಯಗತ್ಯತೆಗೆ ಒತ್ತುಕೊಡುತ್ತದೆ. ●

[ಈ ಲೇಖನದ ಭಾಷಾಂತರದಲ್ಲಿ ಅನುವಾದಕನು ಡಾ॥ ಡಿ. ಎ. ಶಂಕರ್‌ರವರ ಸಂಗ್ರಹಾನುವಾದಕ್ಕೆ ಋಣಿಯಾಗಿದ್ದಾನೆ. —ಗು. ಪ.]

ಹುತಾತ್ಮ

ಬೆಳ್ಳಗಿದ್ದವನೊಬ್ಬ
'ಎದೆ ಎತ್ತಿ ನಡೆವ
ನನ್ನ ತಂದೆಯ ಕೊಂದನು.

ಕಡು ಚೆಲುವೆ ನನ್ನವ್ವಳನ್ನು
ಮುಗಿಸಿದನು
ಮತ್ತದೇ ಪಾಪಿ.

ಮತ್ತದೇ ಪಾಪಿ
ನೆತ್ತಿ ಸುಡುವ ರಣ ರಣ ಉರಿಬಿಸಿಲ ಕೆಳಗೆ
ಸುಟ್ಟನು ನನ್ನಣ್ಣನನು
ಅವನ ಕೈ ತುಂಬ ಮೆತ್ತಿತ್ತು
ನನ್ನಣ್ಣನ ಬಲಿಷ್ಠ ಕರಿ ರಕ್ತ.

ಆ ಬಿಳಿಯ
ನನ್ನತ್ತ ಸರ್ರನೆ ತಿರುಗಿದವನು
ಗೆದ್ದ ದನಿಯಲ್ಲಿ ಅಂದ :
"ಹೇ ಹುಡುಗ,
ಕುರ್ಚಿ, ಕೈ ಚೌಕ, ಸುರೆ ತಾ".

ಆಫ್ರಿಕಾ ಮೂಲ : ಡೇವಿಡ್ ಡೈಪ್

ಅನುವಾದ : ರಾಮದೇವ ರಾಕೆ

ಅನುಭವದ ಗಣಿಯಿಂದ

ಇದು ಅನುಭವ. ಜಾತಿ ಮತ ಬಗ್ಗೆ ಅಸ್ಪೃಶ್ಯತೆ ಬಗ್ಗೆ ನಿಮ್ಮನ್ನು ಅಲ್ಲಾಡಿಸಿಥ ಚಿಂತೆಗೀಡುಮಾಡಿದ ಅನುಭವಗಳು ಅನೇಕ ನಿಮ್ಮ ಬದುಕಲ್ಲಿ ಆಗಿರಬಹುದು. ಅಂಥ ಅನುಭವಗಳ ಹಿಡಿದು ಪಂಚಮವು ತನ್ನ ಓದುಗರಿಗೆ ನೀಡಲು ಬಯಸುತ್ತದೆ. ನಿಮ್ಮ ಬದುಕಲ್ಲಿ ಆಗಿರಬಹುದಾದ ಇಂಥ ತುಣುಕನ್ನು ಒಂದು ಪುಟದಷ್ಟು ಬರೆದು ಕಳಿಸಿರಿ. ಪ್ರಕಟವಾದ ಅನುಭವದಾರರಿಗೆ ಒಂದು ವರ್ಷದ ಪಂಚಮವನ್ನು ಉಚಿತವಾಗಿ ಕೊಡಲಾಗುವುದು—ಸಂ.

"ಅಲ್ಲಿ ಕಟ್ಟಿಸಿರೋದು ನಿಮಗೆ"

ಅಬ್ಬೂರು ರಾಜಶೇಖರ

೧೯೭೪ ನೇ ಇಸವಿಯಲ್ಲಿ ನಾನು ಮಹಾರಾಜ ಕಾಲೇಜು ಹಾಸ್ಟೆಲಿನಲ್ಲಿದ್ದೆ. ಆಗ ಒಬ್ಬ ಬಡ ಒಕ್ಕಲಿಗ ವಿದ್ಯಾರ್ಥಿಯು ನನ್ನ ಬಳಿ ಬಂದು 'ಸಾರ್, ನಾನು ನನ್ನ ವಿದ್ಯಾಭ್ಯಾಸವನ್ನು ನಿಲ್ಲಿಸಬೇಕಾಗಿ ಬಂದಿದೆ. ಕಳೆದೆರಡು ವರ್ಷಗಳು ಶಾರದಾ ಹಾಸ್ಟೆಲ್‌ನಲ್ಲಿ ಉಚಿತವಾಗಿ ಊಟ ಮಾಡಿಕೊಂಡಿದ್ದೆ. ಆದರೆ ಅಲ್ಲಿ ಓದುವುದಕ್ಕೆ ಆಗುವುದಿಲ್ಲ. ಆದ ಕಾರಣ ನನ್ನ ವಿದ್ಯಾಬ್ಯಾಸವನ್ನು ನಿಲ್ಲಿಸುತ್ತಿದ್ದೇನೆ" ಎಂದು ಹೇಳಿದಾಗ ನನ್ನಲ್ಲಡಗಿದ್ದ ಒಕ್ಕಲಿಗ ಬಾಂಧವ್ಯದಿಂದಲೊ ಅಥವಾ ಒಬ್ಬ ಬಡ ವಿದ್ಯಾರ್ಥಿಯ ವಿದ್ಯಾಭ್ಯಾಸ ನಿಂತು ಹೋಗುವುದೆಂಬ ಕಾರಣದಿಂದಲೊ ನಿಲಯ ಪಾಲಕರಾಗಿದ್ದ ಶಿವಲಿಂಗಯ್ಯನವರ ಬಳಿಗೆ ಹೋಗಿ ಪಟ್ಟು ಹಿಡಿದು ಆ ವಿದ್ಯಾರ್ಥಿಗೆ ಹಾಸ್ಟೆಲ್‌ನಲ್ಲಿ ಉಚಿತವಾಗಿ ಊಟ ಮಾಡಲು ಅವಕಾಶ ಪಡೆದುಕೊಂಡು, ನಿಲಯ ಪಾಲಕರು ಎಷ್ಟೇ ಬೇಡವೆಂದರೂ ನನ್ನ ರೂಮಿನಲ್ಲೇ ಅವನನ್ನು ಉಳಿಸಿಕೊಳ್ಳಲು ನಿರ್ಧರಿಸಿದೆ.

ನನ್ನ ಸಹಪಾಠಿಗಳಲ್ಲನೇಕರು ಹರಿಜನ ವಿದ್ಯಾರ್ಥಿಗಳು ಹಾಸ್ಟೆಲಿನಲ್ಲಿ ವಾಸಿಸುತ್ತಿದ್ದರು. ಅವರಲ್ಲಿ ಅನೇಕರು ನನಗೆ ಪರಿಚಯವಿದ್ದರೂ ಹೆಚ್ಚಾಗಿ ಅವರೂ ನಾನೂ ಬೆರೆಯುತ್ತಿರಲಿಲ್ಲ. ಹರಿಜನ ವಿದ್ಯಾರ್ಥಿಗಳಲ್ಲಿ ಒಬ್ಬರಾದ ಬಸವಯ್ಯನವರು ನನ್ನ ಸಹಪಾಠಿ. ಅವರು ಎಷ್ಟೆಂದರಷ್ಟೇ ಮಾತನಾಡಿಸುತ್ತಿದ್ದರು. ಇವರು ಕ್ರಿಶ್ಚಿಯನ್ನರಾಗಲು ಇತ್ತೀಚೆಗೆ ಪ್ರಯತ್ನಿಸುತ್ತಿದ್ದಾರೆಂಬ ವದಂತಿಯಿದೆ. ಆಗ ಅವರು ರಾಮ ಕೃಷ್ಣ ಪರಮಹಂಸ, ವಿವೇಕಾನಂದರ ಭಕ್ತರು. ಅವರು ಒಂದು ದಿನ ನನ್ನನ್ನು ಕುರಿತು "ನಿಮ್ಮ ಹತ್ತಿರ ಸ್ವಲ್ಪ ಮಾತನಾಡುವುದಿದೆ ಸ್ವಲ್ಪ ನನ್ನರೂಮಿಗೆ ಬನ್ನಿ" ಎಂದು ಅವರ ರೂಮಿಗೆ ಕರೆದೊಯ್ದರು. ನಾನು ಅವರ ರೂಮಿಗೆ ಎಂದೂ ಹೋಗಿರಲಿಲ್ಲ. ಒಬ್ಬ ತಪಸ್ವಿಯ ಕೋಣೆಯನ್ನು ಹೊಕ್ಕ ಅನುಭವವಾಯಿತು. ಸುತ್ತಲೂ ಪುಸ್ತಕಗಳು, ಒಂದು ಕುರ್ಚಿಯ ಮೇಲೆ ಹುಲಿಯ ಚರ್ಮವನ್ನಾಸಿದೆ, ಮೇಜಿನ ಮೇಲೆ ರಾಮಕೃಷ್ಣ ಪರಮಹಂಸರ ಫೋಟೊ, ಇವೆಲ್ಲವೂ ನನ್ನನ್ನು ಗೇಲಿ ಮಾಡುತ್ತಿದ್ದವು. ಬಸವಯ್ಯನವರು ಮಾತಿಗೆ ಪ್ರಾರಂಭಿಸಿದರು. ಅವರ ಸುತ್ತ ಇನ್ನೂ ಕೆಲವು ಹರಿಜನ ವಿದ್ಯಾರ್ಥಿಗಳಿದ್ದರು. ಏನು ಸ್ವಾಮಿ ನಿಮ್ಮ ರೂಮಿನಲ್ಲಿದ್ದಾರಲ್ಲ ಶ್ರಿನಿವಾಸ ಅವರಿಗೆ ಸ್ವಲ್ಪ ಬುದ್ಧಿ ಹೇಳಬಾರದಾ? ನಾವು ಹರಿಜನರಾಗಿ ಹುಟ್ಟಿದ್ದೇ ತಪ್ಪಾ? ಈ ಹಾಸ್ಟೆಲ್‌ನಲ್ಲಿ ಒಬ್ಬ ಫ್ರೀ ಬೋರ್ಡರ್ ಕೈನಲ್ಲೂ ಕೂಡ ಹೀನಾಯವಾದ ಮಾತು ಕೇಳಬೇಕಾ?'' ಎಂದರು. ನನಗೆ ವಿಷಯ ಅರ್ಥವಾಗಲಿಲ್ಲ. ಏನು ನಡೆಯಿತು ಹೇಳಿ ಎಂದು ಕೇಳಿದಾಗ "ನಿಮ್ಮ ರೂಂಮೇಟ್ ಶ್ರೀನಿವಾಸ ಕಾರಿಡಾರಿನಲ್ಲಿ ನಿಂತುಕೊಂಡು ನನ್ನ ರೂಮಿನ ಮುಂದೆ ಉಚ್ಚೆ ಹುಯ್ಯುತಾಯಿದ್ದ, ಏನ್ರಿ ಶ್ರೀನಿವಾಸ್ ಅಲ್ಲಿ ಲಾಟ್ರೀನ್ ಇಲ್ವಾ? ಇಲ್ಲಿ ಬಂದು ಉಚ್ಚೆ ಉಯ್ಯುತಾಯಿದ್ದೀರಲ್ಲ? ನಾವೆಂಗ್ರಿ ಈ ರೂಮಲ್ಲಿರೋದು? ಎಂದು ಕೇಳಿದರೆ"—"ಅಲ್ಲಿ ಕಟ್ಟಿಸಿರೋದು ನಿಮಗೆ'' ಅಂತಾನಲ್ಲ ಎಂದು ಬಹಳ ವಿಷಾದ, ನೋವು ಜೊತೆಗೆ ಭಯದಿಂದ ಹೇಳಿದರು. ಅಲ್ಲಿ ಸುತ್ತಲೂ ನಿಂತಿದ್ದ ಇತರರ ಮುಖಗಳನ್ನು ನೋಡುವ ಧೈರ್ಯ ನನ್ನಲಿರಲಿಲ್ಲ. ಆಗ ನನ್ನ ಮಿದುಳೊಳಗೆ ಯಾರೋ ಕೈಯಿಟ್ಟು ಒಂದೊಂದೆ ಮಿಕಗಳನ್ನು ಹಿಡಿದಿಡಿದು ಕೊಲ್ಲುತ್ತಿದ್ದಂತೆ ನನಗೆ ಬಾಸವಾಯಿತು. ಮೇಜಿನ ಮೇಲಿದ್ದ ರಾಮಕೃಷ್ಣ ಪರಮಹಂಸರ ಫೋಟೋವನ್ನು ನೋಡಬೇಕೆನಿಸಿದರೂ, ನೋಡಲಾಗದೆ ಸರಸರನೆ ನನ್ನ ರೂಮಿನ ಕಡೆಗೆ ಹೆಜ್ಜೆ ಹಾಕಿದೆ.

"ಕಮಲಕ್ಕೆ ರವಿಯೊಸರೆ, ಕುಮುದಕ್ಕೆ ಚಂದ್ರ ಮನಾಸರೆ, ನಿನ್ನ ಪ್ರೀತಿಯೇ ಎನ್ನ ಬಾಳಿಗಾಸರೆ."

ಹೀಗೇ ಸಾಗಿತ್ತು ಕೆಲ ದಿನಗಳ ನಮ್ಮ "ವಿರಹ ರಹಿತ" ಪ್ರೇಮ ಜೀವನ ! ಈ ಮಾತನ್ನ ಅವಳು ನನ್ನ ಎದುರು ನಿಂತು ಹೇಳಿರಲಿಲ್ಲ. ಒಂದು ಪುಟ್ಟ ಹಾಳೆಯಲ್ಲಿ ಬರೆದು ಕೊಟ್ಟಿದ್ದಳು. ಆದರೆ ಆ ಚೀಟಿ ಕೂಡ ಎಷ್ಟು ಭಯ ಭೀತಿ ಇಂದ ಇತ್ತು ಅಂದ್ರೆ ಅವಳು ಆ ಚೀಟಿ ಮೇಲೆ ಲೇಖಣಿ ಇಟ್ಟು ಎಷ್ಟು ಸೆಣಸಾಡಿದ್ದಳು ಎಂಬುದನ್ನು ಸ್ಪಷ್ಟ ಅಲ್ಲದಿದ್ದರೂ ಅಸ್ಪಷ್ಟವಾಗಿಯಾದರೂ ತೋರುತ್ತಿತ್ತು. ಜೊತೆಗೆ ಇದು ನಿಜವೇ ಎಂದು ಹೇಳುವುದಕ್ಕೂ ಹಿಂಜರಿಯುತ್ತಿತ್ತು. ಪಾಪ ಅದು ಅದರ ತಪ್ಪು ಅಲ್ಲ ಅವಳದೂ ಅಲ್ಲ. ನಮ್ಮಿಬ್ಬರ ನಡುವೆ "ಗೌರಿ ಶಂಕರ ಶಿಖರ" ನಿಂತಿತಲ್ಲ ಆ ಮೌನ ಅದು ಇಬ್ಬರ ಬಾಯಿಯನ್ನು ತುಟ್ಟತುದಿಗೆ ಕೊಂಡೊಯ್ದಿತ್ತು. ಆದ್ದರಿಂದ ಅದೂ ಬರೋವರ್ಗೂ ಕಾಯಬೇಕಾಯಿತು. ಅಂತೂ ದಿನ ಕಳೆದಂತೆ ಬಂತು. ಮೊದಲ ಮಾತು ನೀನು ಚೆನ್ನಾಗಿದ್ದೀಯಾ ನೀನು ಚೆನ್ನಾಗಿದ್ದೀಯಾ ಅಷ್ಟೆ.

ಪ್ರಥಮ ಭೇಟಿ ಕ್ಷೇಮ Exchange ಅಷ್ಟೆ.

ನಂತರ ನಾವು ಚಿಕ್ಕವರಾಗಿದ್ದಾಗ ನಮ್ಮ ಓದು, ಜಗಳ, ಸಂಗ ಟೂ ಬಿಡೋದು ಬಾಲ್ಯಾವಸ್ಥೆಯ ಜೀವನದ ಒಂದು ಇಣುಕು ನೋಟ. ಪುನಃ ಯಥಾಸ್ಥಿತಿ ಕಾಲೇಜ್ ಹೇಗಿದೆ ಮುಂತಾದವುಗಳ ವಿಚಾರ ವಿನಿಮಯ.

ಇಷ್ಟಾದ ಮೇಲೆ ಈ ರೀತಿಯ ನಮ್ಮ ಬಾಲ್ಯ ಸ್ನೇಹ ಯೌವನದ ಮೆಟ್ಟಿಲು ಹತ್ತಿ ಹೋದ ಮೇಲೆ ಬಿಟ್ಟು ಹೋಗಿತ್ತು. ಆದರೆ ಯಾಕೋ ಏನೋ ಪುನಃ ಈ ರೀತಿ ಅನಿವಾರ್ಯ ಭೇಟಿ ಬೇಡ ಎನಿಸಿದ್ದರೂ. ಇನ್ನೊಂದು ಕಡೆ ಬಾಲ್ಯ ಸ್ನೇಹ ಅನ್ನೋ ಪ್ರೀತಿ ವ್ಯಾಮೋಹ ಬೇಕು ಎನ್ನುವಂತಿತ್ತು. ದಿನ ಕಳೆದ ಹಾಗೆ ಸ್ನೇಹ ಪ್ರೇಮವಾಗಿ ಪರಿಣಮಿಸಿತು.

ಅವಳ ಭಾವನೆಗಳು, ನಡೆ ನುಡಿಗಳು ನನ್ನನ್ನೇ ಬೇಟೆಯಾಡುವಂತ್ತಿತ್ತು.

ನನಗೆ ಬೇಡ ಎನಿಸಿದ್ದರೂ ಎಲ್ಲೋ ಅನತಿ ದೂರದಲ್ಲಿ ಬೇಕು ಅನ್ನೋ ತುಮುಲ, ಉದ್ವೇಗ ಇವುಗಳೆಲ್ಲದರ ಮಧ್ಯೆ ಸಿಲುಕಿ ಸೋತು ಹೋದೆ. ದಿನ ಕಳೆದಂತೆ ಅವಳ ಕಂಡಾಗಲೆಲ್ಲಾ ಎನೋ ಕಾತುರ ಆಸೆ ಈ ಭಾವನೆಗಳೆಲ್ಲಾ ಒಂದರ ಮೇಲೊಂದು ಮಿಂಚಂತೆ ಬಂದು ಮಾಯವಾಗುತ್ತಿತ್ತು.

ಅವಳು ಆಗಾಗ ಹೇಳುತ್ತಿದ್ದಳು.

ಗೋಪಿ ನೀನು ದಿನಾಗ್ಲೂ ಒಂದು ಸಾರಿ ನಿನ್ನ ಮುಖ ತೋರ್ಸು. ಇಲ್ಲದಿದ್ರೆ ಮನಸ್ಸಿಗೆ ನೆಮ್ಮದಿನೇ ಇರೋದಿಲ್ಲಾ ಅಂತ. ನಾನ್ಯಾಕೆ ತೋರಿಸಬೇಕು ಅಂದ್ಕೊಂಡಿದ್ರೂ ಆ ಮಾತು ಯಾವತ್ತೋ ನನ್ನ ಹೃದಯದಲ್ಲಿ ಮನೆ ಮಾಡಿತ್ತು. ಅವಳು ನಾನು ಒಟ್ಟಿಗೆ ಸೇರುತ್ತಿದ್ದ ಜಾಗ ಎಷ್ಟು ಸುಂದರವಾಗಿತ್ತೆಂದರೆ "ಸುತ್ತ ಮುತ್ತಲಿನ ಹಸಿರು ಹತ್ತಿದ ಗಿಡ, ಮರ. ನನಗೆ ಬದುಕಲು ಇಷ್ಟವಿಲ್ಲ ಆದರೂ ಅನಿವಾರ್ಯವಾಗಿ, ನಿಮಗಾಗಿ ನಿಂತಿದ್ದೇವೆ ಅನ್ನೋ ಒಣಕಲು ಮರಗಳು ಒಟ್ಟಿಗೆ ಸೇರಿ ನಮ್ಮನ್ನು ಪ್ರತಿ ದಿನ ಮುಚ್ಚಿಟ್ಟುಕೊಳ್ಳುತ್ತಿದ್ದವು.''

ಇದೂ ಒಂದು ಪ್ರೇಮದ ಕಥೆ

ಸಣ್ಣ ಕಥೆ

ಎಸ್. ತುಕಾರಾಂ

ನಾವು ಮಾತಾಡುವಾಗ ಸಿನಿಮಾದಿಂದ ರಾಜಕೀಯದವರೆಗೂ ಮಾತನಾಡುತ್ತಿದ್ದೊ. ರಾಜಕೀಯ ಅಂದಾಗ ಒಂದು ವಿಷಯ ಜ್ಞಾಪಕಕ್ಕೆ ಬಂತು. ಈ ಸಮಾಜದ ಸಿರಿತನ, ಬಡತನ, ಸ್ವತಂತ್ರ ದೇಶವಾದ ಈ ನಮ್ಮ ಭಾರತದಲ್ಲಿ ಮನುಷ್ಯ ಮನುಷ್ಯನ ಮೇಲಿನ ಶೋಷಣೆ.

ಈ ರೀತಿ ಉಚ್ಚ ಬಟ್ಟಿ ಮಾತಾಡಿ ನಾನೊಬ್ಬ ಈ ಸಮಾಜದ ಮತ್ತು ಅದರ ಉನ್ನತಿ ಬಗ್ಗೆ ಕಾಳಜಿ ಇಟ್ಟು ಕೊಂಡಿರುವವನು (ನಾನೊಬ್ಬ ಕ್ರಾಂತಿಕಾರಿ ಅನ್ನೋದನ್ನ indirect) ಆಗಿ ಎಂದೋ ಉಸುರಿದ್ದುದು, ಅವಳು ಇಷ್ಟೆಲ್ಲಾ ಕೇಳಿ–

"ಏನೇ ಆಗಲಿ ಗೋಪಿ ನೀನು ಯಾವಾಗ್ಲೂ ನನ್ನ ಬಿಡೋದಿಲ್ಲಾ ಅಲ್ವಾ. ನೀನು ನನ್ನ ಪ್ರೀತಿಸ್ತೀಯಾ ಅಲ್ವಾ" ಎಂದು ನನ್ನ ರಾಜಕೀಯಕ್ಕೆ ಕ್ಷಣಾರ್ಧದಲ್ಲಿ ಗೆರೆಯಳೆಯುತ್ತಿದ್ದಳು. ಮರದ ಮೇಲಿಂದ ಬಿದ್ದ ಹೊಂಗೆ ಕಾಯನ್ನು ತೆಗೆದುಕೊಂಡು ಒಬ್ಬರ ಮೇಲೊಬ್ಬರು ಎಸೆದಾಡುತ್ತಿದ್ದೊ. ಆಗ ಅವಳೇ ಗೆಲ್ಲುತ್ತಿದ್ದಳು.

ನಾನೊಮ್ಮೆ ಕೇಳಿದ್ದೆ–

"ಸುಮ ನಾನು ಬಡವ ನನ್ನನ್ನೇ ನಂಬಿ ಬದುಕುತ್ತಿರುವ ತಂದೆ, ತಾಯಿ. ನನ್ನಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ತಯಾರಾಗುತ್ತಿರುವ ತಮ್ಮ ತಂಗಿಯಂದಿರು. ಇವರ ಬದುಕಿಗಾಗಿ ದಿನಾಲೂ ಸೆಣಸಾಡುತ್ತಿರುವ ನಾನು ಇತ್ತ ಸುಖದಲ್ಲಿ ಯಾವ ಬಂಧನದಲ್ಲಿಯೂ ಇಲ್ಲದೆ ತಂದೆ ತಾಯಿಗಳ ರಕ್ಷಾ ಕವಚದಲ್ಲಿ ಕಷ್ಟದ ಹೆಸರೆ ಗೊತ್ತಿಲ್ಲದ ನೀನು ನನ್ನ ಪ್ರೀತಿಸ್ತೀಯಾ ಅಂದಾಗ" "ನಾನು ನಿನ್ನ ಸಿರಿತನವಾಗಲಿ, ಬಡತನವಾಗಲಿ ಪ್ರೀತಿಸ್ತಿಲ್ಲ ಗೋಪಿ ನಿನ್ನ– ನಿನ್ನ ವ್ಯಕ್ತಿತ್ವ ನನಗೆ ಬೇಕು" ಎಂದಾಗ–

ನಿಮಿಷದಲ್ಲಿ ವ್ಯಕ್ತಿತ್ವದ ಹೆಸರು ಕೇಳಿದಾಕ್ಷಣ ಆಗತಾನೆ ತಂದೆ, ತಾಯಿ, ತಮ್ಮ, ತಂಗಿಯರು ಎಲ್ಲಾ ತೆರೆಯ ಹಿಂದುಗಡೆ ಸರಿದೇ ಬಿಟ್ಟಿದ್ದರು.

ಪುನಃ ಸಿನಿಮಾ ಹಾಡು ಮೆಲಕು ಹಾಕಿ ದಿನಕಳೆದೊ. ಇತ್ತ ನನ್ನ ಬದುಕನ್ನು ರೂಪಿಸಿಕೊಳ್ಳಲು ಮಾರ್ಗದರ್ಶನ ಹಾಕಿಕೊಟ್ಟು ಕಾಲೇಜಿಗೆ ಕಳುಹಿಸಿ, ಮಗನ ಏಳ್ಗೆಯ ಬಗ್ಗೆ ಕನಸು ಕಾಣುತ್ತಿದ್ದ ಮುಗ್ಧ ತಂದೆ ತಾಯಿಗಳ ಆದಿನದ ದಿನಚರಿ ಏನಾಗಿತ್ತು ಎಂಬುದನ್ನು

ನಾನಾಗಲೇ ಮರೆತಿದ್ದೆ. ಯಥಾಸ್ಥಿತಿ ಸಾಯಂಕಾಲವಾದ ಮೇಲೆ ಅವಳನ್ನು ಒಂದು ದಾರಿಯಲ್ಲಿ ಬಿಟ್ಟು ನಾನೊಂದು ದಾರಿಯಲ್ಲಿ ಮನೆ ಸೇರಿದೆ.

ತಮ್ಮ ತಂಗಿಯರಿಗೆ ಸ್ವಲ್ಪ ಕೊಟ್ಟು ಒಂದು ತುತ್ತು ಹೆಚ್ಚಿಗೆ ಇಟ್ಟು ನನ್ನ ಉದರದ ಬಗ್ಗೆ ಚಿಂತಾಮಗ್ನಳಾಗಿದ್ದ ತಾಯಿ ಕಂಡೊಡನೆ ಒಂದು ಸಲ ನನ್ನ ಅಂತರಂಗದಲ್ಲಿ ನಾನೇ ಕುಸಿದೆ. ನಂತರ ಅವಳು ಕೊಟ್ಟ ಊಟವನ್ನು ಗಬ ಗಬನೇ ತಿಂದು, ನಂತರ ಒಂದು ಚಿತ್ರದ ಪತ್ರಿಕೆಯನ್ನು ತಿರುವಿ ಹಾಕಿ ಪರೀಕ್ಷೆ, ವಿದ್ಯಾಭ್ಯಾಸದ ಪುಸ್ತಕದ ಯೋಚನೆ ಬಿಟ್ಟು ಮನೆಯ ಕಷ್ಟ, ಸುಮಳ ಮಾತು, ನೆನಪು ಇವೆಲ್ಲವನ್ನು ನಿದ್ರೆಯ ಜೊತೆ ಸೇರಿಸಿ ಹೊದಿಕೆಯ ಮಿಲನದೊಡನೆ ಆ ರಾತ್ರಿ ಕಳೆದೆ.

ಈ ಮಧ್ಯೆ ನೀವು ತಾವು ಅನ್ನೋದು ಬೇಡ ಯಾಕೇಂದ್ರೆ ನಾವು ಸಂಬಂಧದಿಂದ ದೂರ ವಿರುತ್ತೇವೆ. ಅದಕ್ಕೆ ನೀನು- ತಾನು ಅಂತ ಮಾತಾಡೋದು ತುಂಬ ಹತ್ತಿರವೆನಿಸುತ್ತೇ ಗೋಪಿ. ಆದ್ದರಿಂದ ನಾವು ಹಾಗೇ ಮಾತಾಡೋಣ ಅಂತ ಅದು ಬೇರೆ ಒಪ್ಪಂದ ಮಾಡಿಕೊಂಡೋ.

ನಿಜವಾಗ್ಲೂ ಹಾಗೇ ಮಾತಾಡೋದು ನನಗೂ ಹಿತವೆನಿಸಿತ್ತು.

ಕೆಲ ದಿನ ಹಾಗೇ ನಡೆದೋ. ನಮ್ಮ ಈ ಪ್ರೇಮ ಜೀವನ ನಮ್ಮಿಬ್ಬರಿಗೆ ಬಹಿರಂಗವಾಗಿತ್ತೇ ವಿನಃ ಈ ಪ್ರಪಂಚಕ್ಕೆ ಅದು ಗೋಪ್ಯವಾಗಿತ್ತು. ಈ ನಡುವೆ ಹೋಟೆಲ್ ಸಿನಿಮಾಗಳ ಭೇಟಿ ಆಗಾಗ ನಡೆದೇ ಇತ್ತು.

ಮೂರನೆ ದಿನ ನಮಗಾಗಿ ಒಂದು ಸು(ರು) ದಿನ ಕಾದಿತ್ತು. ನಾವು ಈ ಊರು ಬಿಟ್ಟು ಎಲ್ಲಾದ್ರೂ ದೂರ ಹೊರಟೋಗೋಣ ಅಂದ್ಲು. ನನಗಾಗ ಮಾತೇ ಹೊರಡಲಿಲ್ಲ. ಕಾರಣ ಕೇಳಿದಾಗ ನನಗೆ ಮನೆಯವರು ಮದುವೆ ಮಾಡುವ ಸಿದ್ಧತೆಯಲ್ಲಿದ್ದಾರೆ ಅದಕ್ಕೆ ಅಂದಾಗ ನನ್ನ ರಕ್ತದ ಚಲನೆಯಾಗಲಿಲ್ಲ.

ಹಿಂದಿನ ನಮ್ಮ ದಿನಚರಿಯೆಲ್ಲಾ ಮಸುಕು ಮಸುಕಾಗಿ ಕಣ್ಮುಂದೆ ನುಸುಳಿ ಹೋದವು. ಯಾವ ಪರಿವೆಯೂ ಇಲ್ಲದೆ ಒಂದು ಕ್ಷಣ ದಿಗ್ಭ್ರಾಂತನಾದೆ. ಅವಳ ಮದುವೆ ನನ್ನ ಭವಿಷ್ಯ ಇವೆರಡು ಪದಗಳು ನಾಮೇಲು ತಾಮೇಲು ಎನ್ನುವಂತೆ ಸೆಟೆದು ನಿಂತಿದ್ದವು. ಆ ಭಯಂಕರ ಸೆಣಸಾಟವನ್ನು ನಿಲ್ಲಿಸಲು ನಾನು ಅಸಹಾಯಕನಾದೆ. ಮುಂದೇನು ಎನ್ನುವ ನನ್ನ ನೋಟ ಬಹುಷಃ ಅವಳ ಕಣ್ಣಲ್ಲಿ ನೀರು ತಂದಿತೇನೋ. ಛೆ, ಇನೆಂಥ ಪ್ರೇಮ, ಇದೆಂಥ ಜೀವನ, ಇದು ಎಲ್ಲಿಯ ಬದುಕು. ಈ ಉತ್ತರಕ್ಕಾಗಿ ಬಹು ದೂರ ಮನಸ್ಸಿನಲ್ಲೇ ಅಲೆದಾಡಿದೆ.

ಕ್ಷಣ ಕ್ಷಣಕ್ಕೂ ಏನೋ ಬಂದು ಝಾಡಿಸಿದಂತಾಗುತ್ತಿತ್ತು. ತಡೆಯಲಾರದ ಈ ನೋವಿನ ಮುಂದೆ ನಿಮಿಷವೊಂದು ಘಂಟೆಯಾಗಿ ದಿನವೊಂದು ಯುಗವಾಗಿ ತೋರಿತು. ಮುಂದೇನು ಅನ್ನೋ "ಸುಳಿ'' ಯಿಂದ ನಾವಿಬ್ಬರು ತಪ್ಪಿಸಿಕೊಳ್ಳಲು ಸ್ವಲ್ಪ ಸಮಯ ಹಿಡಿಯಿತು.

ನಂತರ "ಸುಮ ಸ್ವಲ್ಪ ಸಮಾಧಾನ ಮಾಡ್ಕೊ ಎಲ್ಲಾ ಸರಿ ಹೋಗುತ್ತೇ'' ಎಂದು ಕಣ್ಣೀರಿನ ಜೊತೆ ಸರಸವಾಡುತ್ತಿದ್ದೆ. ನಮ್ಮ ಮೌನದ ಬಾಗಿಲನ್ನು ನಾನೇ ತೆರೆದೆ. ಇಲ್ಲ ಗೋಪಿ ನಾವು ಯೋಚನೆ ಮಾಡ್ದೆ ನಿಧಾನಿಸಿದಷ್ಟು ಕಷ್ಟವಾಗುತ್ತೆ" ಎಂದು ಬಿಕ್ಕಿ ಬಿಕ್ಕಿ ಹೇಳಿ ಆ ಬಾಗಿಲನ್ನು ಮುಚ್ಚಿದಳು.

ನನ್ನ ಜೀವನದ ಮತ್ತೊಂದು ಚಿತ್ರ ಪುನಃ ನೆನಪಿಗೆ ಬಂತು. ನಾನು ಬಿ.ಎ. ಸೇರಿ ಮಿಸ್ಟರ್ ಗೋಪಿನಾಥ್ ಬಿ.ಎ. ಎಂಬ ಬೋರ್ಡನ್ನು ಮನೆ ಮುಂದೆ ತಗುಲಿಹಾಕಿ ಎಲ್ಲರ ಸಮಾನ ಬದುಕು ಸಾಗಿಸಬೇಕು. ಮಹಡಿ ಮನೆ ಕಟ್ಟಬೇಕು ಎಂದು ಕಟ್ಟುತ್ತಿದ್ದ ನನ್ನ ದಂತ ಗೋಪುರ ಇವಳ ಪರಿಚಯದಿಂದ ದಿಕ್ಕಿಲ್ಲದೆ ಅನಾಥವಾಗಿ ಹೋಗಿತ್ತು. ಇವಳೇ ಸರ್ವಸ್ವ ಗೋಪಿನಾಥ್ ಬಿ. ಎ. ಅನ್ನೋದಕ್ಕಿಂತ. ಗೋಪಿನಾಥ್ ಸುಮ ಅನ್ನೋದು ಎಷ್ಟು ಚೆನ್ನಾಗಿರುತ್ತೇ ಅನ್ನೋ ಹುಚ್ಚೇ ಪಟ್ಟಾಗಿ ತನ್ನ ಹಿಡಿತದಲ್ಲಿಟ್ಟುಕೊಂಡಿತ್ತು. ಇಷ್ಟು ಯೋಚಿಸುವ ವೇಳೆಗೆ ಮನೆಗೆ ಹೋಗುವ ವೇಳೆಯಾಗಿ ಆದಿನ ಬೇಸರದಿಂದಲೇ ಇಬ್ಬರೂ ಬೇರ್ಪಟ್ಟೆವು.

ಸಾವಿರಾರು ಕನಸುಗಳನ್ನು ಕಟ್ಟಿದ್ದ ನಮ್ಮ ಜೀವನ. ಅವಳ ಸಿರಿತನ, ನನ್ನ ಬಡತನ. ಈ ಸಮಾಜದಲ್ಲಿ ಈ ಬದುಕು ಈ ಮಾನವ ಜೀವನ ಎಷ್ಟು ದುರ್ಬರ ಎಂಬ ಚಿತ್ರಗಳು ತಾನಾಗೇ ಕಣ್ಮುಂದೆ ಈ ದಿನ ಸ್ಪಷ್ಟವಾಗಿಯೇ ಸಾರಿ ಸಾರಿ ಹೇಳಿ ಕಣ್ಣನ್ನು ಸವರಿ ಹೋದವು. ಬೆಳಿಗ್ಗೆ ಎದ್ದು ಮಾಮೂಲಿ ಜಾಗಕ್ಕೆ ಹೋದಾಗ ಆ ಜಾಗ ತಬ್ಬಲಿಯಾಗಿ ನಮ್ಮಿರ್ವರ ಭೇಟಿ ನೆನ್ನೆಯೇ ಕೊನೆ ಎಂದು ಹೇಳುವಂತಿತ್ತು. ಆದರೂ ಅದನ್ನು ನಾನು ಗಮನಕ್ಕೆ ತಂದು ಕೊಳ್ಳದೆ ಕೂತೆ. ಘಂಟೆಗಳುಕಳೆದಂತೆ ಹೃದಯ ಬಡಿತ ಜಾಸ್ತಿಯಾಯಿತು. ತಡೆಯಲಾರದ ಆವೇಗ, ತಲೆ ತಿರುಗಿದಂತಾಯ್ತು. ಕೈ ಯಿಂದ ಎರಡು ಸಲ ನೆಲಕ್ಕೆ ಗುದ್ದಿದೆ. ಆದರೆ ಅದು ನನ್ನ ತಪ್ಪೇನು ಇಲ್ಲವೆಂಬಂತೆ ಉಸುರಿತು.

ಒಂದು ದಿನ ಇದ್ದಕ್ಕಿದ್ದಂತೆ 'ಶುಭ ವಿವಾಹ' ಚಿನ್ಹೆ ಹೊತ್ತು ಲಕೋಟೆಯೊಂದು ನನ್ನ ಹೆಸರಿಗೆ ಬಂದಾಗ-ನನ್ನ ಮುರಿದು ಹೋದ ವಿದ್ಯಾರ್ಥಿ ಜೀವನ, ಫೇಲಾಗಿ ಕೆಲಸವಿಲ್ಲದೆ ಅಲೆದಾಡಿದ ದಿನಗಳು, ನನ್ನ ಸುಖದಿನಗಳನ್ನು ಕಾದಿದ್ದ ತಂದೆ ತಾಯಿಗಳ ವಜ್ರ ದರ್ಪಣದ ಗತಿ !, ಬಿರುಕು ಬಿಟ್ಟಿದ್ದ ನನ್ನ ವ್ಯಕ್ತಿತ್ವ, ಕಂಡ ಪರಿಚಯಸ್ಥರೆಲ್ಲಾ ವ್ಯಂಗ್ಯವಾಗಿ ಥೂ ಎನ್ನುವ ನೋಟ, ಎಲ್ಲವನ್ನು ಮಾಮೂಲಿ ಜಾಗದಲ್ಲಿ ಕುಳಿತು ನೆನೆಸಿಕೊಂಡು ಅವಳು ಕೂರುತ್ತಿದ್ದ ಜಾಗದ ಕಡೆ ಮುಖ ತಿರುಗಿಸಿ ಗಳ ಗಳ ಅತ್ತು ಬಿಟ್ಟೆ. ●

ಶ್ರೀ ಆದಿ ಶಂಕರಾಚಾರ್ಯರ ಜಾತೀಯತೆ ಮತ್ತು ಭಾರತೀಯತೆ

ಭಗವಾನ್

"ಶೂದ್ರನೆಂದರೆ ಸಂಚರಿಸುವ ಸ್ಮಶಾನ. ಆದ್ದರಿಂದ ಅವನ ಬಳಿಯಲ್ಲಿ ಅಧ್ಯಯನ ಮಾಡಬಾರದು. (ಆತ) ವೇದೋಚ್ಚಾರಣೆಯನ್ನು ಮಾಡಿದರೆ ನಾಲಿಗೆಯನ್ನು ಕತ್ತರಿಸಬೇಕು. ಕಂಠ ಪಾಠಮಾಡಿ ಹೃದಯ ಸೇರಿಬಿಟ್ಟರೆ ಆ ಶರೀರವನ್ನೇ ಕತ್ತರಿಸಬೇಕು."

ಎಂದ ಹಿಂದೂ ಧರ್ಮ ಅವನತಿಯ ಹಾದಿಯಲ್ಲಿದ್ದಾಗ ಇದೇ ಮಾತುಗಳನ್ನೇ ಹೇಳಿ ಶ್ರೀ ಶಂಕರಾಚಾರ್ಯರು ಹಿಂದೂ ಧರ್ಮದ ಪುನರುದ್ಧಾರಕರು ಮತ್ತು ಹಿಂದೂಗಳ ಮಹಾ ತತ್ವಜ್ಞಾನಿಗಳೂ ಆಗಿದ್ದಾರೆ!!

ಜ್ಞಾನವನ್ನು ಅಬ್ರಾಹ್ಮಣರಿಗೆ ನಿರಾಕರಿಸುವಂಥ ನಿಲುವು ಮೊದಲಿನಿಂದಲೂ ಈ ದೇಶದಲ್ಲಿ ಅನೂಚಾನವಾಗಿ ನಡೆದುಕೊಂಡು ಬಂದಿದೆ. ಇದರಿಂದ ರಾಷ್ಟ್ರ ಬಹು ದೊಡ್ಡ ನಷ್ಟ ಮತ್ತು ದುರಂತಗಳಿಗೆ ತುತ್ತಾಗಿದೆ. ಅದರ ಮೂಲವನ್ನು ತಿಳಿಯುವುದರಿಂದ ನಮ್ಮ ನಾಡಿನ ಗತಿಯ ಬಗ್ಗೆ ಸ್ಪಷ್ಟ ತಿಳಿವು ಬರುತ್ತದೆ. ಭೂತ ಮತ್ತು ವರ್ತಮಾನಗಳ ಸರಿಯಾದ ಅರಿವಿನಿಂದ ಉತ್ತಮ ಭವಿಷ್ಯವನ್ನು ರೂಪಿಸಲು ಸಾಧ್ಯ. ಆದ್ದರಿಂದ ಈ ರಾಕ್ಷಸ ಪರಂಪರೆಯ ಪರಿಚಯ ಅಗತ್ಯ :

ಅದ್ವೈತ ಸಿದ್ಧಾಂತವನ್ನು ಶಂಕರಾಚಾರ್ಯರು ಬೋಧಿಸಿದರು. ಬ್ರಹ್ಮ ಸತ್ಯ, ಜಗತ್ತು ಮಿಥ್ಯ ; ಜೀವಾತ್ಮ ಮತ್ತು ಪರಮಾತ್ಮರ ನಡುವೆ ಭೇದವಿಲ್ಲ ಎಂದು ಘೋಷಿಸಿದರು. ಆದರೆ ತಮ್ಮೆದುರಿಗೆ ಚಂಡಾಲನೊಬ್ಬ ಬಂದಾಗ ತಮಗೆ ಮೈಲಿಗೆಯಾಗುತ್ತದೆಂದು 'ದೂರ ಹೋಗು! ಓಡಿ ಹೋಗು!' ಎಂದು ಅಬ್ಬರಿಸಿದರು. ಈ ಕಳಂಕವನ್ನು ಹೋಗಲಾಡಿಸಲು ಅವರ ಭಕ್ತಾದಿಗಳು ಕಥೆ ಕಟ್ಟಿದರು. ಅವರಿಗೆ ಅದ್ವೈತ ಸಾಕ್ಷಾತ್ಕಾರವಾಗಿದೆಯೇ ? ಎಂದು ಪರೀಕ್ಷಿಸಲು ಪರಶಿವನೇ ಪಂಚಮನ ವೇಷದಲ್ಲಿ ಬಂದನೆಂದು ಅಪೈಚಾರಿಕವೂ ಅಪೈಜ್ಞಾನಿಕವೂ ಆದ 'ಶಂಕರ ವಿಜಯ' ರಚಿಸಿದರು ! ಇದನ್ನು ಬರೆದವರು "ಯತಿಶ್ರೇಷ್ಠರೂ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯರೂ ಆದ ಶ್ರೀ ವಿದ್ಯಾರಣ್ಯ ಸ್ವಾಮಿಗಳವರು"* ಎಂದು ತಿಳಿದಾಗ ಆಶ್ಚರ್ಯವಾಗುತ್ತದೆ. ಆದರೆ ಶಂಕರಾಚಾರ್ಯರಿಗೆ ಅದ್ವೈತ ಅನುಭವವಾಗಿರಲಿಲ್ಲ. ಸಹಮಾನವರ ಮೇಲೆ ಪ್ರೀತಿ ಅನುಕಂಪವಿರಲಿಲ್ಲ ಎನ್ನುವುದಕ್ಕೆ ಮೇಲೆ ಹೇಳಿದ ಚಂಡಾಲ ಪ್ರಸಂಗ ನಡೆದ ಕೆಲ ಕಾಲದ ನಂತರ, ಅವರು 'ಬ್ರಹ್ಮ ಸೂತ್ರಗಳ' ಮೇಲೆ ಬರೆದ ಭಾಷ್ಯದಲ್ಲಿ ನಿಚ್ಚಳವಾಗಿ ಕಾಣುತ್ತದೆ. ಅದು ಅವರ ಮಾನವದ್ವೇಷಕ್ಕೆ ಶಾಶ್ವತ ಶಾಸನವಾಗಿದೆ. ವಿಚಾರಕ್ಕೆ ಬದಲು ನಂಬಿಕೆ ಇರಬೇಕೆಂದು ಶಂಕರಾಚಾರ್ಯರು 'ಬ್ರಹ್ಮ ಸೂತ್ರ ಭಾಷ್ಯ'ದಲ್ಲಿ (೨. ೧. ೩. ೧೧ಪು. ೭೧೭–೭೨೨) ವಾದಿಸುತ್ತಾರೆ. ಆದ್ದರಿಂದ ಅವರು ಸ್ವತಂತ್ರ ಬುದ್ಧಿಯನ್ನು ಪ್ರೋತ್ಸಾಹಿಸದೆ ಮೂಢ ನಂಬಿಕೆಗೆ ಪ್ರಾಧಾನ್ಯ ನೀಡುವುದು ವೈಜ್ಞಾನಿಕತೆಗೆ ವಿರುದ್ಧವಾಗಿದೆ.

ಶಂಕರಾಚಾರ್ಯರು ತಮ್ಮ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಲು ಪ್ರಸ್ಥಾನತ್ರಯ-ಅಂದರೆ ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಮತ್ತು ಭಗವದಗೀತೆ-ಮೇಲೆ ಭಾಷ್ಯ ಬರೆದರು. 'ಬ್ರಹ್ಮಾಸೂತ್ರ ಭಾಷ್ಯ' ಅವರ ಮೇರುಕೃತಿ ಎಂದು ಪರಿಗಣಿತವಾಗಿದೆ. ಅದ್ವೈತವೆಂದರೆ, ಸರಳವಾಗಿ ಹೇಳುವುದಾದರೆ, ಎಲ್ಲರೂ ಸಮಾನರು ಎಂದು ಅರ್ಥ. ಆದರೆ ಶಂಕರಾಚಾರ್ಯರ ವಾದ, ಅಮಾನುಷ ವಾದವನ್ನ ನೋಡಿ ; ಇದು ಅದ್ವೈತವೇ ? ಓದುಗರೇ ನಿರ್ಣಯಿಸಬೇಕು :

"...ನ ಶೂದ್ರಸ್ಯ ಅಧಿಕಾರ ; | ಯದಸ್ಯಸ್ಮೃತೇಃ ಶ್ರವಣಾಧ್ಯಾಯನಾರ್ಥ ಪ್ರತಿಷೇದೋ ಭವತಿ | ವೇದಶ್ರವಣ ಪ್ರತಿಷೇಧಃ, ವೇದಾಧ್ಯಯನ ಪ್ರತಿಷೇಧ : ತದರ್ಥ ಜ್ಞಾನಾನುಷ್ಠಾನ ಯೋಶ್ಚ ಪ್ರತಿಷೇಧ : ಶೂದ್ರಸ್ಯ ಸ್ಮರ್ಯತೇ| ಶ್ರವಣ ಪ್ರತಿಷೇಧಸ್ತಾವತೆ "ಅಥಾಸ್ಯ ವೇದಮುಪ್ರಶೃಣ್ವತಸ್ತ್ರಪು ಜತುಭ್ಯಾಂ ಶ್ರೋತ್ರ ಪ್ರತಿಪೂರಣಮ್" (ಗೌತಮ ಧರ್ಮಸೂತ್ರ, ೨. ೩. ೪.) ಇತಿ | "ಪದ್ಯು ಹವಾ ಏತತ್ ಶ್ಮಶಾನಂ ಯತ ಶೂದ್ರಸ್ತಸ್ಮಾತ್ ಶೂದ್ರ ಸಮೀಪೇ ನಾಧ್ಯೇತವ್ಯಮ್ (?) ಇತಿ ಚ | ಅತ ಏವಾಧ್ಯಯನ ಪ್ರತಿಷೇಧ : ಯಸ್ಯ ಹಿ ಸಮೀಪೇ ಪಿ ನಾಧ್ಯೇತವ್ಯಂ ಭವತಿ ಸ ಕಥಮಶ್ರುತಮ್ ಅಧೀಯಾತ ? ಭವತಿ ಚ | "ವೇದೋಚ್ಚಾರಣೇ ಜಹ್ವಾಚ್ಛೇದೋ, ಧಾರಣೇ ಶರೀರಭೇದ :" (ಗೌ. ಧ. ೨. ೩. ೪.): ಇತಿ | ಅತ 'ಏವ ಚ ಅರ್ಥಾತ, ಅರ್ಥಜ್ಞಾನಾನುಷ್ಠಾನಯೋ : ಪ್ರತಿಷೇಧೋ ಭವತಿ | "ನ ಶೂದ್ರಾಯ ಮತಿಂ ದದ್ಯಾತ್" (ಮನುಸ್ಮೃತಿ ೪. ೮೦) "ದ್ವಿಜಾತೀಯನಾಮಧ್ಯಯನಮಿಜ್ಯಾದಾನಮ್" (ಗೌ.ಧ. ೨. ೧. ೧.) ಇತಿ ಚ||

–ಶಂಕರಾಚಾರ್ಯರ 'ಬ್ರಹ್ಮಸೂತ್ರ ಭಾಷ್ಯ, ೧. ೩. ೯. ೩೮*

"ಶೂದ್ರನಿಗೆ ಅಧಿಕಾರವಿಲ್ಲ. ವೇದಶ್ರವಣ ಮತ್ತು ಅಧ್ಯಯನ ಆತ ಮಾಡಕೂಡದೆಂದು ಸ್ಮೃತಿ ಕಟ್ಟಪ್ಪಣೆ ಮಾಡಿದೆ. ಶೂದ್ರನು ವೇದವನ್ನು ಕೇಳಕೂಡದೆಂದೂ ವೇದವನ್ನು ಓದ ಕೂಡದೆಂದೂ ಅರ್ಥವನ್ನು ತಿಳಿದುಕೊಳ್ಳಕೂಡದೆಂದೂ ಅನುಷ್ಠಾನ ಮಾಡಕೂಡದೆಂದು ಸ್ಮೃತಿ ಹೇಳುತ್ತದೆ. ಹಾಗೇನಾದರೂ ಆತ "ವೇದವನ್ನು ಕೇಳಿದರೆ ಕರಗಿಸಿದ ಸೀಸ ಮತ್ತು ಅರಗುಗಳಿಂದ ಅವನ ಕಿವಿಯನ್ನು ತುಂಬಿಬಿಡಬೇಕು. '(ಗೌ.ಧ.

*ಸಾಲಿಗ್ರಾಮ ಶ್ರೀ ಕಂಠಶಾಸ್ತ್ರೀ (ಅನು) : ಶಂಕರ ವಿಜಯ, ಪು. ೩–೪ (೧೯೩೫)..........

*ಶ್ರೀ ಶಂಕರಾಚಾರ್ಯರವರ ಗ್ರಂಥಗಳು :
ಬ್ರಹ್ಮ ಸೂತ್ರ ಭಾಷ್ಯ, ಸಂಪುಟ ೧. ಅನು : ಶ್ರೀ ಸಚ್ಚಿದಾನಂದ ಸರಸ್ವತೀ ಸ್ವಾಮಿಗಳವರು (ಅಧ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ, ೧೯೫೧) ಅಧ್ಯಾಯ ೧, ಪಾದ ೩, ಅಧಿಕಾರಣ ೯ ಸೂತ್ರ ೩೮, ಪುಟ ೫೧೫–೫೧೬

೨-೩-೪.). "ಶೂದ್ರನೆಂಬರೆ ಸಂಚರಿಸುವ ಶ್ಮಶಾನ. ಆದ್ದರಿಂದ ಅವನ ಬಳಿಯಲ್ಲಿ ಅಧ್ಯಯನ ಮಾಡಬಾರದು". ಈ ಕಾರಣದಿಂದ ಅಧ್ಯಯನವನ್ನು ನಿಷೇಧಿಸಿದೆ ಎನ್ನಬೇಕು. 'ಏಕೆಂದರೆ ಯಾವನ ಹತ್ತಿರ ಅಧ್ಯಯನ ಮಾಡಬಾರದಾಗಿರುವುದೋ ಆತ ಶ್ರವಣ ಮಾಡದಿರುವುದನ್ನು ಹೇಗೆ ತಾನೆ ಅಧ್ಯಯನ ಮಾಡಬಲ್ಲ? "ವೇದೋಚ್ಚಾರಣೆಯನ್ನು ಮಾಡಿದರೆ ನಾಲಿಗೆಯನ್ನ ಕತ್ತರಿಸಬೇಕು. ಕಂಠ ಪಾಠಮಾಡಿ ಹೃದಯ ಸೇರಿಬಿಟ್ಟಿದ್ದರೆ ಆ ಶರೀರವನ್ನೇ ಕತ್ತರಿಸಿ ಹಾಕಬೇಕು". (ಗೌ.ಧ. ೨-೨-೪.) ಎಂದೂ ಸ್ಮೃತಿ ಇದೆ. ಆದ್ದರಿಂದಲೇ ಅರ್ಥಜ್ಞಾನ ಮತ್ತು ಅನುಷ್ಠಾನ- ಇವೆರಡನ್ನೂ ಅರ್ಥವಶದಿಂದ ಪ್ರತಿಷೇಧ ಮಾಡಿದಂತಾಗುತ್ತದೆ. "ಶೂದ್ರನಿಗೆ ಜ್ಞಾನವನ್ನು ಕೊಡಬಾರದು" ಎಂದು ಮನು ಹೇಳುತ್ತಾನೆ. ದ್ವಿಜರಿಗೆ ಮಾತ್ರ ಅಧ್ಯಯನ, ಯಾಗ, ದಾನ ಉಂಟೆಂದು ಸ್ಮೃತಿ ನುಡಿಯುತ್ತದೆ".

ಸಮಾಜದ್ರೋಹಿಗಳೂ ಮಹಾಜಾತೀವಾದಿಗಳೂ ಆದ ಗೌತಮ, ಮನು ಮುಂತಾದ ಸ್ಮೃತಿಕಾರರ ಅವಿವೇಕವನ್ನು ತಿದ್ದುವ ಬದಲು ಶಂಕರಾಚಾರ್ಯರು ಅವರ ಕ್ರೂರ ವಾಕ್ಯಗಳನ್ನು ಉದ್ಧರಿಸಿ ಶೂದ್ರರಿಗೆ ಜ್ಞಾನಪಡೆಯಲು ಹಕ್ಕಿಲ್ಲವೆಂದು ವಾದಿಸಿರುವುದು ಅವರ ಅದ್ವೈತ ತತ್ವಕ್ಕೇ ವಿರುದ್ಧವಾಗಿದೆ. ಆದ್ದರಿಂದ ಅವರು ಬಹಳ ಪೊಳ್ಳು ತತ್ವಜ್ಞಾನಿಯಾಗಿ ಕಾಣಿಸುತ್ತಾರೆ. ಅವರದು ಜನವಿರೋಧಿ ತತ್ವಜ್ಞಾನ.

ಇಲ್ಲವಾಗುತ್ತಿದ್ದ ಹಿಂದೂಧರ್ಮವನ್ನು ಉಳಿಸಿದರೆಂದು ಇತಿಹಾಸಕಾರರು ಶಂಕರಾಚಾರ್ಯರನ್ನು ಹೊಗಳುತ್ತಾರೆ. ಆದರೆ ಆಚಾರ್ಯರು ಪ್ರಗತಿ ಹೊಂದಬೇಕಿದ್ದ ಸಮಾಜವನ್ನು ಕೊಂದು ಹಾಕಿದರೆಂದು ಅವರ ಗ್ರಂಥಗಳನ್ನು ಓದುವುದರಿಂದ ಗೊತ್ತಾಗುತ್ತದೆ.

ಶಂಕರಾಚಾರ್ಯರು ಬದುಕಿದ್ದು ಕ್ರಿಸ್ತಶಕ (ಸು. ೭೭೫-೮೦೭)ಎಂಟನೆ ಶತಮಾನದಲ್ಲಿ. ಅಷ್ಟು ಹೊತ್ತಿಗೆ ಸಮಾನತೆಯನ್ನು ಬಿತ್ತಿ ಜಾತಿ ವ್ಯವಸ್ಥೆಯನ್ನು ಸಡಿಲಗೊಳಿಸಿದ್ದ ಬೌದ್ಧರ ಪ್ರಾಬಲ್ಯ ಕಡಿಮೆಯಾಗಿ ಗುಪ್ತರ ಯುಗದಲ್ಲಿ ಪುರೋಹಿತಶಾಹಿ ತಲೆಯೆತ್ತಿ ಮೆರೆದಿತ್ತು. (ಗುಪ್ತರು ಜಾಟ್ ಜಾತಿಗೆ ಸೇರಿದ ಶೂದ್ರರು. ಪುರೋಹಿತಶಾಹಿಯು ಬ್ರಾಹ್ಮಣಧರ್ಮಕ್ಕೆ ಶೂದ್ರರು. ಅವಿದ್ಯಾವಂತ ಮುಗ್ಧ ಶೂದ್ರರು ಬಲಿಯಾಗುವಂತೆ ಬೇರೆ ಜನಾಂಗದವರು ಆಗದಿರುವುದು ಭಾರತದ ಚರಿತ್ರೆಯಲ್ಲಿ ಕಂಡುಬರುವ ಸ್ವಾರಸ್ಯಕರ ಸಂಗತಿ). ಅದರ ತಾರ್ಕಿಕ ಸಮಾಪ್ತಿಯಾಗಿ ಶಂಕರಾಚಾರ್ಯರು ಬಂದರು.

ದೇಶದಲ್ಲಿ ಅವನತಿಯ ಲಕ್ಷಣಗಳು ಸ್ಪಷ್ಟವಾಗಿ ಕಾಣಿಸಿಕೊಂಡಿದ್ದುವು. ಅಂಥ ಸಂದರ್ಭದಲ್ಲಿ ವಾಸ್ತವವನ್ನು ಅರ್ಥಮಾಡಿಕೊಂಡು, ದೇಶದ ಸಂಪತ್ತನ್ನು ನೇರವಾಗಿ ಉತ್ಪಾದಿಸುವ, ಜನಸಂಖ್ಯೆಯ ಸುಮಾರು ಶೇಕಡ ೮೫-೯೦ ರಷ್ಟು ಮಂದಿಗೆ ವಿದ್ಯೆಯನ್ನೂ ಜ್ಞಾನವನ್ನೂ ಕೊಡುವ ಜವಾಬ್ದಾರಿಯನ್ನೂ ಔದಾರ್ಯವನ್ನೂ, ಶಂಕರಾಚಾರ್ಯರು ತೋರಲಿಲ್ಲ. ಬದಲಿಗೆ ಜಗತ್ತನ್ನು ಮಾಯೆ, ಮಿಥ್ಯೆ ಎಂದು ದೂರೀಕರಿಸಿದರು. ಅಂಥ ಕೆಟ್ಟ ಸತ್ವಹೀನ ಸಿದ್ಧಾಂತವನ್ನು ಹರಡಲು ದೇಶದ ನಾಲ್ಕು ಮೂಲೆಗಳಲ್ಲೂ--ಉತ್ತರದಲ್ಲಿ ಬದರೀನಾಥ, ಪಶ್ಚಿಮದಲ್ಲಿ ದ್ವಾರಕ, ಪೂರ್ವದಲ್ಲಿ ಪುರಿ ಮತ್ತು ದಕ್ಷಿಣದಲ್ಲಿ ಶೃಂಗೇರಿ- ಮಠಗಳನ್ನು ಸ್ಥಾಪಿಸಿದರು. (ಈ ಮಠ ಸ್ಥಾಪನೆಯ ಸಂಗತಿಯನ್ನು ಶಂಕರಾಚಾರ್ಯರು ವಾಸ್ತವವಾಗಿ ಬೌದ್ಧರಿಂದ ತೆಗೆದುಕೊಂಡರು. ಬೌದ್ಧಸಂಘ ಸ್ಥಾಪನೆಯಿಂದ ಕ್ರೈಸ್ತರು ಚರ್ಚ್‌ವ್ಯವಸ್ಥೆಯನ್ನು ಕಟ್ಟಲು ಸ್ಫೂರ್ತಿ ಪಡೆದರು. ಅವರಿಂದ ಪ್ರಚೋದಿತರಾಗಿ ಮುಸ್ಲಿಮರು ಮಸೀದಿಗಳನ್ನು ನಿರ್ಮಿಸಿದರು. ಸ್ಮಾರ್ತರಿಗೆ ಪರ್ಯಾಯವಾದ ಮಠ ಕಟ್ಟುವುದರಲ್ಲಿ ಮಾಧ್ವರು ಹಿಂದೆ ಬೀಳಲಿಲ್ಲ. ನಂತರ ವೀರಶೈವರು ತಮ್ಮದೇ ಮಠಗಳನ್ನು ಸ್ಥಾಪಿಸಿದರು. ಈ ಪಟ್ಟಿಗೆ ಇತ್ತೀಚೆಗೆ ಒಕ್ಕಲಿಗರು ಸೇರಿಕೊಂಡಿದ್ದಾರೆ. ಬುದ್ಧ ಸ್ಥಾಪಿಸಿದ ಸಂಘ ವ್ಯವಸ್ಥೆಗೂ ಬುದ್ಧನ ನಂತರ ಹುಟ್ಟಿಕೊಂಡ ಮಠಗಳು ಚರ್ಚುಗಳಿಗೂ, ಮಸೀದಿಗಳಿಗೂ ಮೂಲಭೂತ ವ್ಯತ್ಯಾಸವಿದೆ. ಬುದ್ಧನದು ಜಾತಿಮತಗಳ ಸಂಕುಚಿತತೆಯನ್ನು ಹೋಗಲಾಡಿಸಿ ಸರ್ವಸಮಾನತೆ ಮತ್ತು ಸೌಹಾರ್ದ ಸಹಬಾಳ್ವೆಯನ್ನು ಆಗಮಾಡಿಸುವ ಪ್ರಯತ್ನವಾಗಿತ್ತು. ಆದರೆ ಈ ಎಲ್ಲಾ ಮಠಗಳ ಉದ್ದೇಶ ತಮ್ಮ ತಮ್ಮ ಜಾತಿ ಕೋಮುಗಳನ್ನು ಬೆಳೆಸುವುದು ರಕ್ಷಿಸುವುದೇ ಆಗಿದೆ. ಕುಲಬಾಂಧವರನ್ನು ಉದ್ಧಾರ ಮಾಡುತ್ತೇವೆಂಬ ಸೋಗಿನಲ್ಲಿ ಸ್ವಾರ್ಥಿಗಳು ಹೊಟ್ಟೆಹೊರೆದು ಕೊಳ್ಳುತ್ತಿದ್ದಾರೆ; ಜಾತಿಜನರಿಗೆ ಸಂಕುಚಿತ ಭಾವನೆಗಳನ್ನು ಕೊಟ್ಟು ಅವರನ್ನು ಭಯಂಕರವಾಗಿ ಶೋಷಿಸುತ್ತಿದ್ದಾರೆ. ಇಂಥ ಸಂಕುಚಿತ ಸುಳಿಯಲ್ಲಿ ಸಿಲುಕಿ ಒಬ್ಬರನ್ನೊಬ್ಬರು ನಂಬಿ ಬದುಕಲಾರದಂಥ ಪರಿಸ್ಥಿತಿ ದೇಶದಲ್ಲಿ ಉಂಟಾಗಿದೆ. ಒಂದು ಜಾತಿ ಇನ್ನೊಂದು ಜಾತಿಯನ್ನು ಪ್ರೀತಿಯಿಂದ ವಿಶ್ವಾಸದಿಂದ ಸಹನೆಯಿಂದ ಸಮಾನತೆಯಿಂದ ನೋಡುವುದೂ ಆಗುತ್ತಿಲ್ಲ. ಇದಕ್ಕೆಲ್ಲ ಮದ್ದೆಂದರೆ-ಜಾತಿ ಮತಗಳನ್ನು ಮೂಡಿಸುವ ಮಠಗಳನ್ನು ಚರ್ಚುಗಳನ್ನು ಮಸೀದಿಗಳನ್ನು ನೆಲಸಮ ಮಾಡುವುದು. ಈ ಕೋಮುವಾದೀ ಭಾವನೆಯ ಸ್ಥಾನದಲ್ಲಿ ಮಾನವತಾವಾದ, ವಿಚಾರವಾದ, ವೈಜ್ಞಾನಿಕ ದೃಷ್ಟಿಯನ್ನು ಅನುಷ್ಠಾನದಿಂದ ರೂಢಿಸಬೇಕಾಗಿದೆ. ಇವುಗಳಿಂದ ಮಾತ್ರ ಮಾನವ ಜನಾಂಗವು ಉಳಿದು ಬಾಳಿ ಬೆಳಗಲು ಸಾಧ್ಯ. ಇಲ್ಲವಾದರೆ ಕೊಲೆ, ರಕ್ತಪಾತ, ಯುದ್ಧಗಳಿಂದ ತನ್ನ ಅವಸಾನವನ್ನು ಕಂಡುಕೊಳ್ಳುತ್ತದೆ.) ಗುರುವಿಗೇ ಅದ್ವೈತ ಸಿದ್ಧಿಯಾಗಿರಲಿಲ್ಲವೆಂದು ಹಿಂದೆ ಹೇಳಿದ ಚಂಡಾಲ ಪ್ರಸಂಗ ಮತ್ತು ಬ್ರಹ್ಮಸೂತ್ರ ಭಾಷ್ಯದ ಉದ್ಧರಣೆಯಿಂದ ಗೊತ್ತಾಗಿದೆ. ಇನ್ನು ಸ್ವಾರ್ಥ ಶಿಷ್ಯರಿಗೆ ಅದು ಹೇಗೆ ಅರ್ಥವಾಗಬೇಕು? ಆದ್ದರಿಂದ ಅವರು ಗುರು ಹಾಕಿಕೊಟ್ಟ ದಾರಿಯಲ್ಲಿ ಚಾಚೂ ತಪ್ಪದೆ ನಡೆದರು. ಮೇಲೆ ಉದ್ಧರಿಸಿದ ವಿನಾಶಕಾರಿ ವಿಷಯವನ್ನು ಅಕ್ಷರಶ: ಪಾಲಿಸಿದರು; ಜಾತಿಯ ವಿಷವನ್ನು ಹೆಚ್ಚಿಸಿದರು. ಸಮಾಜ ಜಾತಿಯ ಹೆಸರಿನಲ್ಲಿ ಇನ್ನೂ ಚೂರು ಚೂರಾಗಿ ಒಡೆದು ಹೋಯಿತು ಮೊದಲೇ ಐಕ್ಯತೆ ಇಲ್ಲದ ದೇಶದಲ್ಲಿ ಅನೈಕ್ಯತೆ ತಾಂಡವವಾಡಿತು. ಜಾತಿಯ ಕುಟ್ಟೆಹುಳು ದೇಶದ ಸತ್ವವನ್ನು ತಿಂದುಬಿಟ್ಟಿತು. ತತ್ಪರಿಣಾಮವಾಗಿ ಮುಂದೆ ನಮ್ಮ ದೇಶಕ್ಕೆ ಅರಬ್ಬರು, ತುರ್ಕರು, ಮೊಗಲರು, ಡಚ್ಚರು, ಪೋರ್ಚುಗೀಸರು, ಫ್ರೆಂಚರು, ಇಂಗ್ಲೀಷರು ತಂಡೋಪತಂಡವಾಗಿ ಬಂದಾಗ ಅವರನ್ನು ತಡೆಗಟ್ಟಲು ಓಡಿಸಲು ನಾಡಿಗೆ ಶಕ್ತಿಯಿರಲಿಲ್ಲ. ಬುದ್ಧಿಬಲವಿದೆ ಎಂದುಕೊಂಡ ಬ್ರಾಹ್ಮಣರಿಗೆ ಭುಜಬಲವಿಲ್ಲ; ಭುಜಬಲವಿರುವ ಅಬ್ರಾಹ್ಮಣರಿಗೆ ಬುದ್ಧಿಬಲವಿಲ್ಲದೆ ಭಾರತೀಯ ತತ್ವ ಶಾಸ್ತ್ರದಲ್ಲಿ ದೊಡ್ಡ ದ್ವಂದ್ವ ಮತ್ತು ಕರಾಳ ಕಂದರ ಏರ್ಪಟ್ಟಿದೆ. ದೇಶಭಕ್ತಿ ತಮ್ಮ ಸ್ವತ್ತೆಂದು ಭಾವಿಸಿದ ಬುದ್ಧಿಜೀವಿಗಳು ಪರಕೀಯರನ್ನು ಹೊಡೆದಟ್ಟಲು ಹೇಡಿಗಳಾದರು. ಶರೀರಶಕ್ತಿ ಇದ್ದ ಶೂದ್ರರಿಗೆ ಏನು ಮಾಡಬೇಕೆಂದು ಗೊತ್ತಾಗದೆ ಮೂಕಪ್ರೇಕ್ಷಕರಾದರು; ಕಷ್ಟ ಸಹಿಷ್ಣು

ಗಳಾದರು. ದೇಶಪ್ರೇಮ ಎಂದರೆ ಭೂಪಟವನ್ನು ಪ್ರೀತಿಸುವುದಲ್ಲ ; ಜನಕೋಟಿಯನ್ನು ಪ್ರೀತಿಸುವುದು ; ಅವರ ಸ್ಥಿತಿಗತಿಗಳನ್ನು ಉತ್ತಮ ಪಡಿಸಲು ಹೋರಾಡುವುದು ; ಅವರಿಗೆ ವಿದ್ಯಾಬುದ್ಧಿಯನ್ನು ಕೊಟ್ಟು ಮನುಷ್ಯರಾಗಲು ಪರಿಸರವನ್ನು ರೂಪಿಸುವುದು; ಇದನ್ನು ಮಾಡದವನು ದೇಶಭಕ್ತನಲ್ಲ.

ಆದ್ದರಿಂದ ದೇಶದ ಜನಸಂಖ್ಯೆಯ ಶೇ. ೯೦ ರಷ್ಟು ಮಂದಿಗೆ ವಿದ್ಯೆ ಕೊಡದೆ ಶಂಕರಾಚಾರ್ಯರು ಈ ದೇಶವನ್ನು ಹಾಳುಮಾಡಿದರು. ಎಲ್ಲಾ ಅಬ್ರಾಹ್ಮಣರಿಗೆ ವಿದ್ಯಾಬುದ್ಧಿ ನೀಡಿದ್ದರೆ ಅವರಿಗೆಲ್ಲ ದೇಶ ಪ್ರೇಮ ಬೆಳೆಯುತ್ತಿತ್ತು ; ದೇಶದ ಐಕ್ಯತೆ ಬರುತ್ತಿತ್ತು. ಮೊಗಲರು, ಬ್ರಿಟಿಷರು , ಮುಂತಾದ ವಿದೇಶೀಯರು ಇಲ್ಲಿಗೆ ಬರಲು ಸಾಧ್ಯವಾಗುತ್ತಿರಲಿಲ್ಲ. (ಇಸ್ಲಾಂ ಅನುಯಾಯಿಗಳು ಭಾರತಕ್ಕೆ ಬಂದದ್ದರಿಂದ ಸಮಾನತೆಯ ತತ್ವ ಈ ದೇಶವನ್ನು ಪ್ರವೇಶಿಸಿತು. ಅದುವರೆಗೂ ಸಮಾನತೆಯ ಕಲ್ಪನೆಯೆ ಇರದಿದ್ದ ಸಮಾಜಕ್ಕೆ ಹೊಸ ಚೈತನ್ಯದ ಕಿಡಿ ತಾಕಿತು. ಬ್ರಿಟೀಷರು ಬಂದದ್ದರಿಂದ ವಿದ್ಯೆ ಮತ್ತು ಸರ್ಕಾರಿ ಸೇವೆಗಳಲ್ಲಿದ್ದ ಅಡ್ಡಿಗಳನ್ನು ಕಿತ್ತುಹಾಕಿದರು. ಜಾತಿ ಮತ ಲಿಂಗ ಭೇದವಿಲ್ಲದೆ ಎಲ್ಲರೂ ವಿದ್ಯೆಗೆ ಸರ್ಕಾರಿ ಹುದ್ದೆಗಳಿಗೆ ಅರ್ಹರೆಂದು ಲಾರ್ಡ್ ವಿಲಿಯಂ ಬೆಂಟಿಕ್ ಆಜ್ಞೆ ಹೊರಡಿಸಿ ಆಚರಣೆಗೆ ತಂದನು. ಇಂಗ್ಲೀಷರ ಮತ್ತೊಂದು ದೊಡ್ಡ ಕೊಡುಗೆ ಎಂದರೆ ಹರಿದು ಹಂಚಿ ಹೋಗಿದ್ದ ದೇಶವನ್ನು ಒಟ್ಟುಗೂಡಿಸಿದ್ದು. ನಮ್ಮ ದೇಶದ ಸಂಪತ್ತನ್ನು ಪರಕೀಯರು ಲಪಟಾಯಿಸಿದರೆಂದು ಹೇಳುವುದರಲ್ಲಿ ಸ್ವಲ್ಪ ತಥ್ಯವಿದೆ. ಆದರೆ ನಿಜವಾಗಿ ಈ ದೇಶದ ಸಂಪತ್ತನ್ನು ಸೂರೆಮಾಡಿದವರೆಂದರೆ, ನಮ್ಮ ಜನರ ಸತ್ವವನ್ನು ಬರಿದು ಮಾಡಿದವರೆಂದರೆ ಬ್ರಾಹ್ಮಣರು, ಕ್ಷತ್ರಿಯರು, ವೈಶ್ಯರು. ಈಗಲೂ ಅದನ್ನು ವ್ಯವಸ್ಥಿತವಾಗಿ ಪುರೋಹಿತಷಾಹಿ, ಮತ್ತು ನೌಕರಷಾಹಿ ಮತ್ತು ಎಲ್ಲಾ ಜಾತಿಗಳಿಂದಲೂ ಬಂದಿರುವ ನವಬ್ರಾಹ್ಮಣ ವರ್ಗ ನಡೆಸುತ್ತಿದೆ.) ಬಿಸಿಲು ಗಾಳಿ ಮಳೆಯಲ್ಲಿ ದುಡಿಯಲಾರದ ಮೈಗಳ್ಳ ಬುದ್ಧಿ ಜೀವಿಗಳು ಜೀವನವನ್ನೇ ತೇಯುವ ಶೂದ್ರ ಕತ್ತೆಗಳಮೇಲೆ ಸವಾರಿ ಮಾಡಿದರು ; (ಇಂದಿಗೂ ಮಾಡುತ್ತಿದ್ದಾರೆ.) ಹೀಗೆ ದುಡಿದು ಕ್ಷೀಣಿಸುವ ಬಹುದೊಡ್ಡ ಗುಂಪು ಮತ್ತು ತಿಂದುಂಡು ಮಲಗುವ ಸಣ್ಣ ಗುಂಪುಗಳಾಗಿ ದೇಶ ಎರಡಾಗಿ ಸೊರಗಿತು. ಶ್ರಮಜೀವಿಗಳ ಕಷ್ಟ ದ್ವಿಜರಿಗೆ ತಿಳಿಯುವುದಿಲ್ಲ ; ಬ್ರಾಹ್ಮಣರ ಅವಾಸ್ತವ ತತ್ವ ಚಿಂತನೆ (?) ಶೂದ್ರರಿಗೆ ಮುಟ್ಟುವುದಿಲ್ಲ. ಹೀಗಾಗಿ ದೇಶ ಇನ್ನೂ ನರಳುತ್ತಿದೆ. ಪ್ರತಿಯೊಬ್ಬ ವ್ಯಕ್ತಿಯ ದೇಹ ಮತ್ತು ಮನಸ್ಸುಗಳ ಒಟ್ಟು ದುಡಿಮೆಯಿಂದ ರಾಷ್ಟ್ರವನ್ನು ಹೊಸದಾಗಿ ಕಟ್ಟಬೇಕು. ಆಗ ಹೊಸ ಸಂಸ್ಕೃತಿ ಹುಟ್ಟೀತು.

ದಲಿತರ ರಕ್ತದಿಂದ ಅರಳಿದ ಸುಂದರ ಕೊಡಗು

ಹುಲ್ಲುಕೆರೆ ಮಹಾದೇವ

ಕೊಡಗು ಜಿಲ್ಲೆಯನ್ನು ಸುತ್ತಾಡುತ್ತಾ ನೋಡಿದರೆ ಎಷ್ಟು ಸುಂದರ! ಆ ಸುಂದರ ನಾಡಿನೊಳಗೆ ಹುದುಗಿಕೊಂಡಿರುವ ದಲಿತರ ಬದುಕು–ಪಾಳೆಗಾರಿಕೆಯ ಸಂಸ್ಕೃತಿ ಮತ್ತದರ ಕ್ರೌರ್ಯದ ಭಯಾನಕ ರೂಪವನ್ನು ನೆನಪಿಗೆ ತರುತ್ತದೆ. ಕರ್ನಾಟಕದ ಪ್ರಮುಖ ವಾಣಿಜ್ಯ ಬೆಳೆಗಳನ್ನು ಬೆಳೆಯುವ ಕೊಡಗಿನ ಇಡೀ ಉತ್ಪನ್ನ ದಲಿತರ ರಟ್ಟೆಯ ಮೇಲೆ ನಿಂತಿದೆ. ಸಮಾಜದಲ್ಲಿ ಕಡೆಗಣಿಸಲ್ಪಟ್ಟ ಅಸ್ಪೃಶ್ಯರು ಮತ್ತಿತರ ಹಿಂದುಳಿದ ಜಾತಿಯ ಜನರೇ ಕಾಫಿ, ಏಲಕ್ಕಿ ತೋಟಗಳಲ್ಲಿ ಎಷೆ ರಕ್ತ ಬಸಿಯುವ ಜನ. ದುಡಿಮೆಗೇನೋ ಕೂಲಿ ಸಿಕ್ಕುತ್ತದೆ. ಆದರೆ ಅವರ ಇಡೀ ಜೀವನ ಎಷ್ಟು ಹೀನಾಯ ಸ್ಥಿತಿಯಲ್ಲಿದೆಯೆಂದರೆ ಅವರನ್ನು ಸುಧಾರಿಸಲು ಶತಮಾನಗಳೇ ಆಗಬೇಕಾಗಬಹುದು. ಅನಕ್ಷರತೆ, ಅಜ್ಞಾನ, ಶೋಷಣೆಯನ್ನೇ ಅರ್ಥಮಾಡಿಕೊಳ್ಳಲಾಗದ ಅವರ ಮನಸ್ಸು, ಪರಾವಲಂಬಿ ಆರ್ಥಿಕ ಸ್ಥಿತಿ–ಇಂಥವುಗಳ ಸುಳಿಯೊಳಗೆ ಈ ದುಡಿಯುವ ಜನ ವಿಲವಿಲ ಅನ್ನುತ್ತಿದ್ದಾರೆ.

ಸಾಮಾಜಿಕ ಒಡನಾಟಗಳಲ್ಲಿ ಮುಖ್ಯವಾಗಿ ಅಸ್ಪೃಶ್ಯತೆಯಂಥ ಅಮಾನವೀಯ ಆಚರಣೆಗಳ ಬಗ್ಗೆ ಕರ್ನಾಟಕದ ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಇಲ್ಲಿ ಕಡಿಮೆ. ಆದರೂ ಇಲ್ಲಿಯ ಮೇಲು ಜಾತಿಯವರ, ಶ್ರೀಮಂತರ ಭಾವನೆ, ದಲಿತರ ಬಗ್ಗೆ ನಿಕೃಷ್ಟವಾಗಿಯೇ ಇದೆ. ಪಾಳೆಗಾರಿಕೆ ಜೀವನಕ್ಕೂ ಇಲ್ಲಿಯ ಜೀವನಕ್ಕೂ ವ್ಯತ್ಯಾಸವಿಲ್ಲ. ಉಳಿದೆಲ್ಲ ಒಡನಾಟಗಳಿಗಿಂತ ಒಡೆಯ–ಕೂಲಿಕಾರ ಈ ಸಂಬಂಧವೇ ಜಾಸ್ತಿ. ಒಡೆಯನ ಶೋಷಣೆಯನ್ನು ವಿರೋಧಿಸದ ಮಟ್ಟದಲ್ಲಿ ದಲಿತರಿದ್ದಾರೆ. ವಿರೋಧಿಸುವ ಮನಸ್ಸಿದ್ದರೂ ಬಂದೂಕಿನ ಉತ್ತರವನ್ನು ನೆನಸಿಕೊಂಡು ಸುಮ್ಮಗಿರಬಹುದು. ಈ ಭಯವೇ ಎಲ್ಲ ಬಗೆಯ ಅನ್ಯಾಯಗಳನ್ನು ಮೌನವಾಗಿಯೇ ಒಪ್ಪಿಕೊಳ್ಳುವಂತೆ ಮಾಡಿರಬಹುದು.

ಎಸ್ಟೇಟುಗಳಲ್ಲಿ ದುಡಿದೇ ಬದುಕುವ ಬಹುಪಾಲು ದಲಿತರ ಆರ್ಥಿಕ ಸ್ಥಿತಿ ಪರಾವಲಂಬಿಯಾದದ್ದು. ಇರುವ ಅಲ್ಪಸ್ವಲ್ಪ ಜಮೀನನ್ನು ಕೃಷಿ ಮಾಡದೆ ಎಸ್ಟೇಟುಗಳು, ಮತ್ತಿತರ ಕಡೆಗಳಲ್ಲಿ ಕೂಲಿಗೇ ಹೋಗುತ್ತಾರೆ. ಇದಕ್ಕೆ ಕಾರಣಗಳು ಇವೇ ಎಂದು ಗುರುತಿಸುವುದು ಕಷ್ಟ. ಕೂಲಿ ತಪ್ಪದೆ ಸಿಗುತ್ತದಲ್ಲ ಎಂಬುದಿರಬಹುದು ಅಥವಾ ಭೂಮಾಲೀಕರ ಎದುರಿಸಲಾರದ ಅಸಹಾಯಕತೆಯಿರಬಹುದು. ಅಂತು ಬಹುಪಾಲು ದಲಿತರ ಜೀವನ ಕೂಲಿಯನ್ನೇ ಅವಲಂಬಿಸಿದೆ. ಕಾಲ ಬದಲಾದಂತೆ ತಾವೂ ಸ್ವಾವಲಂಬಿಗಳಾಗಿ ಬದುಕಬೇಕು ಎನ್ನುವ ಆಸೆ ದಲಿತರಲ್ಲಿ ಮೂಡಿದೆ. ಆದರೆ ಜಮೀನು ಸಿಗುವುದು ಕಷ್ಟ. ಖಾಲಿ ಇದ್ದ ಪೈಸಾರಿ (ದರಖಾಸ್ತು) ಯೆಲ್ಲ ಶ್ರೀಮಂತರ ವಶವಾಗಿದೆ. ಶ್ರೀಮಂತ ಅಕ್ರಮ ಅರ್ಜಿಗಳಿಗೆಲ್ಲ ಜಮೀನು ಮಂಜೂರಾಗಿರುವ ಹಲವಾರು ನಿದರ್ಶನಗಳಿವೆ. ಭೂ

ವಿವಾದಗಳನ್ನು ಇತ್ಯರ್ಥಗೊಳಿಸಲು ಸರ್ಕಾರ ಟ್ರಿಬ್ಯೂನಲ್‌ಗಳನ್ನು ರಚಿಸಿತು. ನಿಜವಾದ ಗೇಣಿದಾರನಿಗೆ, ಭೂಹೀನನಿಗೆ ನ್ಯಾಯ ದೊರೆತಿಲ್ಲ. ಸ್ಥಳದ ಮಹಜರು ಇಲ್ಲದೆ ಗ್ರಾಮಲೆಕ್ಕಿಗರು ಶ್ರೀಮಂತರಿಗೆ ಪಹಣಿ ಬರೆದುಕೊಟ್ಟಿದ್ದಾರೆ. ಇಂಥ ಭೂ ವಿವಾದಗಳಿಗೆ ಸಂಬಂಧಿಸಿದಂತೆ ಅಸಿಸ್ಟೆಂಟ್ ಕಮೀಷನರ್‌ರವರು ನ್ಯಾಯವಾದ ನಿಲವುಗಳನ್ನು ತೆಗೆದುಕೊಂಡಂತ್ತೆ ಕಾಣುವುದಿಲ್ಲ. ತಾಲ್ಲೂಕು ಮಟ್ಟಗಳಲ್ಲಿ ಹೋಗಿ ಎ.ಸಿ. ಯವರು ಪರಿಶೀಲಿಸಿಲ್ಲ. ಇತ್ತೀಚೆಗೆ ಕರ್ನಾಟಕ ಸರ್ಕಾರ ದಲಿತರು ಮಾರಿರುವ ಜಮೀನುಗಳನ್ನು ಮತ್ತೆ ಅವರಿಗೇ ಬಿಡಿಸಿಕೊಡುವ ತೀರ್ಮಾನ ತೆಗೆದುಕೊಂಡಿದ್ದು ಸ್ಪಷ್ಟ. ಆದರೆ ಕೊಡಗಿನಲ್ಲಿ ಈ ಯಾವುದೇ ಕ್ರಮಗಳು ಫಲಕಾರಿಯಾಗಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಭೂ ಮಾಲೀಕರ ಜೊತೆಯಲ್ಲಿ ಷಾಮೀಲಾಗಿರವುದು ಎದ್ದು ಕಾಣುತ್ತದೆ. ಏನಿದ್ದರೂ ದಲಿತರಿಗೆ ಜಮೀನು ಸಿಗಬೇಕಾದರೆ ಊರುಡುವೆ, ಅರಣ್ಯಕ್ಕೆ ಬಿಟ್ಟಿರುವ ಜಮೀನು, ದೇವರ ಕಾಡು ಜಮೀನುಗಳನ್ನು ಹಂಚಿದಾಗ ಮಾತ್ರ. ದೇವರ ಹೆಸರಿನಲ್ಲಿರುವ ದೇವರ ಕಾಡು ಜಮೀನನ್ನು ಶ್ರೀಮಂತರು ಆ ಮಠಗಳ ಮುಖ್ಯಸ್ಥರೊಂದಿಗೆ ಒಪ್ಪಂದ ಮಾಡಿಕೊಂಡು ಕಬಳಿಸುವ ಹೊಂಚು ಹಾಕುತ್ತಿದ್ದಾರೆ. ಇದಲ್ಲದೇ ದಲಿತರಿಗೆ ಮಂಜೂರಾದ ಜಮೀನನ್ನು ಅನುಭವಿಸಲೂ ಬಿಡುತ್ತಿಲ್ಲ. ನಿದರ್ಶನಕ್ಕೆ ಹೇಳುವುದಾದರೆ ತಿತಿಮತಿಯ ಸುತ್ತಮುತ್ತ ಪೈಸಾರಿ ಜಮೀನನ್ನು ಕೆಲವರು ಅಕ್ರಮವಾಗಿ ತಮ್ಮ ವಶಮಾಡಿಕೊಂಡಿದ್ದಾರೆ. ತಿತಿಮತಿಯ ಮರೂರಿನಲ್ಲಿ ಗೌರಿಕೆರೆಯ ಸುತ್ತ ದಲಿತರಿಗೆ ಮಂಜೂರಾಗಿದ್ದ ಜಮೀನುಗಳನ್ನು ಭೂ ಮಾಲೀಕರು ಆಕ್ರಮಿಸಿಕೊಂಡು ಕಿರುಕುಳ ಕೊಡುತ್ತಿದ್ದಾರೆ. ನೀರಿಗೆ ಗೌರಿಕೆರೆಯನ್ನೇ ಆಶ್ರಯಿಸಿರುವ ದಲಿತರಿಗೆ ನೀರು ತೆಗೆದುಕೊಳ್ಳಲು ಬಿಡುತ್ತಿಲ್ಲ. ಇತ್ತೀಚೆಗೆ ತಿತಿಮತಿಯಲ್ಲಿ ನಡೆದ ಜಮಾಬಂದಿಯ ಸಂದರ್ಭದಲ್ಲಿ ಈ ಕಿರುಕುಳದ ಬಗ್ಗೆ ರೆವಿನ್ಯೂ ಅಧಿಕಾರಿಗಳಿಗೆ ಮನವಿಮಾಡಿಕೊಂಡಿದ್ದರೂ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿಲ್ಲ. ಪೈಸಾರಿ ಆಕ್ರಮಣ ಮಾಡಿರುವುದನ್ನು ತೆರವು ಮಾಡಿಸುವ ಭರವಸೆ ಸರ್ಕಾರಿ ಅಧಿಕಾರಿಗಳಿಂದ ಬಂದಿದ್ದರೂ ಕಾರ್ಯತಹಃ ಇಲ್ಲ. ಕೊಡಗು ಜಿಲ್ಲೆಯ ತುಂಬ ಇಂಥ ನೂರಾರು ಘಟನೆಗಳು ಉಂಟು. ಇವೆಲ್ಲವನ್ನು ಸರ್ಕಾರ ಕೂಡಲೇ ಪರಿಶೀಲಿಸಿ, ದಲಿತರ ಆರ್ಥಿಕ ಜೀವನಕ್ಕೆ ಮೂಲಾಧಾರವಾಗಿರುವ ಜಮೀನನ್ನು ಹಂಚುವಲ್ಲಿ ಹೆಜ್ಜೆಯಿಡಬೇಕೆಂದುದು ಅನಿವಾರ್ಯವಾಗಿದೆ. ಸಾಕ್ಷರತೆಯ ದೃಷ್ಟಿಯಿಂದ ನೋಡಿದರೆ ಅತ್ಯಂತ ಹೀನ ಸ್ಥಿತಿಯಿದೆ. ಇಡೀ ಜಿಲ್ಲೆಯಲ್ಲಿ ದುರ್ಬೀನು ಹಾಕಿ ಹುಡುಕಿದರೆ ಬೆರಳೆಣಿಕೆಯ ಪದವೀಧರರು ಸಿಗಬಹುದು. ತಮ್ಮ ಜೀವನಕ್ಕಿಂತ ವಿದ್ಯಾಭ್ಯಾಸ ಮುಖ್ಯವಲ್ಲ ಎಂಬ ಭಾವನೆ ಹಲವು ದಲಿತರಲ್ಲಿದ್ದು, ಅದಕ್ಕೆ ತಕ್ಕಂತೆ ವಿದ್ಯಾವಂತರ ಸಂಖ್ಯೆಯೂ ಕಡಿಮೆಯಿದೆ. ಇಷ್ಟಾದರೂ ಕೆಲವು ಅನುಕೂಲಗಳಿರುವುದರಿಂದ ಶಾಲಾ ಕಾಲೇಜುಗಳಲ್ಲಿ ದಲಿತ ಮಕ್ಕಳು ಕಾಣುತ್ತಿದ್ದಾರೆ. ಹೀಗೆ ಮುಂದೆ ಬರುವ ಮಕ್ಕಳಿಗಾದರೂ ಸರಿಯಾದ ವ್ಯವಸ್ಥೆಯಿದೆಯೇ ಎಂಬುದನ್ನು ಪರಿಶೀಲಿಸುವುದಗತ್ಯ. ಕೊಡಗಿನ ಜಿಲ್ಲೆಯಾದ್ಯಂತ ಸುಮಾರು ಇಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿ ನಿಲಯಗಳಿವೆ. ಈ ಹಾಸ್ಟೆಲ್‌ಗಳಲ್ಲಿ ಹೆಚ್ಚಾಗಿ ಓದುವ ಮಕ್ಕಳು ಬಡಮಕ್ಕಳೇ ಆಗಿದ್ದಾರೆ. ಕೆಲವು ಹಾಸ್ಟೆಲ್‌ಗಳು ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೀಮಿತವಾಗಿದ್ದರೆ, ಕೆಲವು ಸಾರ್ವಜನಿಕ ಹಾಸ್ಟೆಲ್‌ಗಳಾಗಿವೆ. ಅವುಗಳ ಸ್ಥಿತಿ, ಅಲ್ಲಿ ನೆಲೆಸಿರುವ ವಿದ್ಯಾರ್ಥಿಗಳ ಜೀವನ-ಆಳುವ ಪ್ರಭುಗಳಿಗೆ ಮರ್ಯಾದೆ ಇದ್ದರೆ ತಲೆತಗ್ಗಿಸುವ ಮಟ್ಟದಲ್ಲಿರುವುದು ಸತ್ಯ.

ಕೊಡಗಿನ ಹಾಸ್ಟೆಲ್‌ಗಳ ಬಗ್ಗೆ, ಅಲ್ಲಿ ಓದುವ ವಿದ್ಯಾರ್ಥಿಗಳ ಬಗ್ಗೆ ಕೆಲವು ವಿಷಯಗಳಲ್ಲಿ ಅಂಕಿಅಂಶಗಳನ್ನು ಪಡೆಯಲು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಜಿಲ್ಲಾ ಸಮಾಜಕಲ್ಯಾಣಾಧಿಕಾರಿಯನ್ನು ಭೇಟಿಯಾದಾಗ ದಲಿತ ಸಂಘರ್ಷ ಸಮಿತಿ ಏನು? ಎತ್ತ ? ಹೇಗೆ ಮುಂತಾದ ಪ್ರಶ್ನೆಗಳನ್ನು ಎಸೆದು, ಇವರೆಲ್ಲೋ ಬ್ಲಾಕ್ ಮೇಲ್ ಮಾಡಲು ಬಂದಿದ್ದಾರೆ ಎಂಬ ಗುಮಾನಿಯ ಮೇಲೆ ವಾಪಸ್ಸು ಕಳುಹಿಸಿದ್ದಾರೆ. ಈ ಅಧಿಕಾರಿ ಎಷ್ಟು ಹೊಣೆಗೇಡಿ ಆಗಿದ್ದಾರೆ ಎಂಬುದಕ್ಕೆ ವಿರಾಜಪೇಟೆಯ ಸರ್ಕಾರಿ ವಿದ್ಯಾರ್ಥಿನಿಲಯ ಎನ್ನುವ 'ಭೂತಬಂಗಲೆ'ಯ ಕಥೆಯನ್ನು ಹೇಳಿದರೆ ಸಾಕಾಗಬಹುದು.

ವಿರಾಜಪೇಟೆಯಲ್ಲಿ ವಿದ್ಯಾರ್ಥಿನಿಲಯ ಪ್ರಾರಂಭವಾಗಿ ಒಂಭತ್ತು ವರ್ಷಗಳಾದವು. ಅಂದಿನಿಂದ ಇದುವರೆಗೂ ಖಾಸಗಿ ಕಟ್ಟಡದಲ್ಲೇ ನಡೆಯುತ್ತಾ ಬಂದಿದೆ. ಇದೊಂದು ಸಾರ್ವಜನಿಕ ವಿದ್ಯಾರ್ಥಿನಿಲಯವಾದರೂ ಹೆಚ್ಚಾಗಿ ದಲಿತ ಮಕ್ಕಳೇ ಇದ್ದಾರೆ. ಸದ್ಯಕ್ಕೆ ೩೭ ಮಂದಿ ಓದುವ ಈ ಕಟ್ಟಡದಲ್ಲಿ ೫ ರೂಮುಗಳಿದ್ದು ಓದಲು ಲಾಯಕ್ಕಾಗಿ ಒಂದು ರೂಮು ಮಾತ್ರ ಇದೆ. ಅದಕ್ಕೂ ಕಷ್ಟವಾಗಿದೆ. ರೂಮೆಂದರೆ ದನದ ಕೊಟ್ಟಿಗೆ ಎಷ್ಟೋ ವಾಸಿ. ಮಳೆ ಬಂದಾಗ! ಜೊರ್ರೋ ಎಂದು ಸೋರುವ ಹೆಂಚಿನ ಕೆಳಗೆ, 8 ವರ್ಷಗಳಿಂದ ಸುಣ್ಣ ಬಣ್ಣ ಕಾಣದೆ ಅಡಿಗೆ ಮನೆಯ ಹೊಗೆ ಕುಡಿದು ಕಪ್ಪಗಾಗಿರುವ ಗೋಡೆಗಳ ನಡುವೆ, ಗಾರೆಕಿತ್ತು ಗುಳಿಬಿದ್ದಿರುವ ನೆಲದ ಮೇಲೆ ವಿದ್ಯಾರ್ಥಿಗಳ ಓದು ವನವಾಸಕ್ಕಿಂತಲೂ ಹೆಚ್ಚಾಗಿ ನಡೆಯುತ್ತಿದೆ! ರಾತ್ರಿಯ ವೇಳೆ ವಿದ್ಯುಚ್ಛಕ್ತಿಯ ಸೌಲಭ್ಯವಿಲ್ಲ. ವಾರಕ್ಕೆ ಒಂದು ಲೀಟರ್ ಸೀಮೆ ಎಣ್ಣೆಯನ್ನು ಒದಗಿಸುವುದರಿಂದ ಆ ಎಣ್ಣೆಯನ್ನೇ ಉರಿಸಿ ಮಕ್ಕಳು ಓದಬೇಕು. ಇದ್ದ ಕಕ್ಕಸ್ಸು ಹಾಗೂ ಬಾತು ರೂಮುಗಳು ಕುಸಿದುಬಿದ್ದಿವೆ. ವಿದ್ಯಾರ್ಥಿಗಳು ಅವರಿವರ ತೋಟಗಳಿಗೆ ಹೋಗಿ ತಮ್ಮ ಸ್ನಾನ, ಇತ್ಯಾದಿಗಳನ್ನು ಮುಗಿಸಬೇಕು. ಬೇರೆಯವರ ಬಾವಿಗಳಿಗೆ ನೀರನ್ನು ತರಲು ಹೋಗುವುದರಿಂದ ವಿದ್ಯಾರ್ಥಿಗಳು ಕೆಲವೊಮ್ಮೆ ಮಾಲೀಕರ ಆಪಾದನೆ, ಬೈಗುಳಗಳನ್ನು ಎದುರಿಸಬೇಕಾಗಿದೆ. ಹುಡುಗರಿಗೆ ಕಾರ್ಪೆಟ್, ಬೆಡ್ ಶೀಟ್‌ಗಳನ್ನು ಕೊಟ್ಟು ಎಂಟು ವರ್ಷಗಳು ಯಶಸ್ವಿಯಾಗಿ ಮುಗಿದಿದ್ದು, ಅವು ಕೊಳಚೆ ಪ್ರದೇಶಗಳಲ್ಲಿನ ಜನ ಡೇರೆ ಹಾಕಿಕೊಳ್ಳಲು ಉಪಯೋಗಿಸುವ ಬಟ್ಟೆಗಿಂತಲೂ ಕೀಳಾಗಿವೆ. ಮಳೆಗಾಲದಲ್ಲಿ ಅಡಿಗೆ ಮನೆಗೂ ಚಪ್ಪಲಿ ಹಾಕಿಕೊಂಡು ತಿರುಗಾಡುವ ಕೊಡಗಿನಲ್ಲಿ ವಿದ್ಯಾರ್ಥಿಗಳು ನೆಲದ ಮೇಲೆ ಮಲಗುತ್ತಾರೆ. ಪ್ರಾಯಶಃ ನರಕದ ಮೊದಲ ಮೆಟ್ಟಲು ಇದೇ ಎನ್ನಬಹುದು. ಈ ಎಲ್ಲದರ ಬಗ್ಗೆ ವಿದ್ಯಾರ್ಥಿಗಳು ಮನನೊಂದು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಹಾಗೂ ಅಸಿಸ್ಟೆಂಟ್ ಕಮೀಷನರ್‌ರವರಲ್ಲಿ ತಮ್ಮ ಅಳಲನ್ನು ತೋಡಿಕೊಂಡಾಗ "ನಿಮ್ಮ ಮನೆಯಲ್ಲಿ ಕಷ್ಟಪಟ್ಟು ಓದುವಂತೆ ಎಲ್ಲ ಕೆಲಸಗಳನ್ನು ಮಾಡಿಕೊಂಡು ಓದಿ" ಎಂದು ಬುದ್ಧಿಮಾತು ಹೇಳಿ ಪುಣ್ಯಕಟ್ಟಿಕೊಂಡಿದ್ದಾರೆ. ಇಷ್ಟಾದರೂ ಬೇಡವೆ ಜವಾಬ್ದಾರಿ ಹೊತ್ತಿರುವುದಕ್ಕೆ ? ಇದೇ ಊರಿನಲ್ಲಿರುವ ವಿದ್ಯಾರ್ಥಿನಿಯರ ಹಾಸ್ಟೆಲ್‌ಗೆ ತಪ್ಪದೆ ಭೇಟಿಕೊಡುವ ಸಮಾಜ ಕಲ್ಯಾಣಾಧಿಕಾರಿ ಹುಡುಗರ ಹಾಸ್ಟೆಲ್‌ನತ್ತ ಮುಖ ಹಾಕಿದರೆ ಪಾಪ ಬರಬಹುದೇನೊ ಎಂಬಂತೆ ತಲೆತಪ್ಪಿಸಿಕೊಂಡು ಓಡಾಡುತ್ತಿದ್ದಾರೆ. ಮತ್ತೆ ಈ ಹಾಸ್ಟೆಲ್‌ಗೆ ವಾರ್ಡನ್ ಅನ್ನುವ ಜವಾಬ್ದಾರಿ ಹೊತ್ತ ವ್ಯಕ್ತಿ

[16ನೇ ಪುಟ ನೋಡಿ]

ನಾನು ಮತ್ತು ಜನಿವಾರ

ಆರ್ಯ ಸಮಾಜದ ಕಟುಕರು ದಲಿತ ಮಕ್ಕಳ ಎಳೆಯ ಮನಸ್ಸುಗಳಿಗೆ ಶ್ಲೋಕ, ಗೀತ ಪಠನ, ಭಜನೆ ಇತ್ಯಾದಿ ಆಚರಣೆಗಳ ಮೂಲಕ ಪಾಷಾಣ ತುಂಬುತ್ತಾ, ಅವರನ್ನು ಕಗ್ಗೊಲೆಯ ಕೋಣೆಗೆ ದೂಡುತ್ತಿದ್ದರು. ಇಂಥವರಿಗೆ ದಲಿತ ಮಕ್ಕಳನ್ನು ತಲೆ ಹಿಡಿಯುವ ಕೆಲಸದಲ್ಲಿ–ಅವರ ಅನ್ನ ಕಬಳಿಸುತ್ತಿದ್ದ ಹಾಸ್ಟೆಲಿನ ಆಡಳಿತ ವರ್ಗವೂ ಆಸಕ್ತಿ ವಹಿಸಿತ್ತು. ಇಂಥ ಕಟುಕರ ಕೈಗೆ ಸಿಕ್ಕಿ ಜನಿವಾರ ಧಾರಣೆ ಮಾಡಿಸಿಕೊಂಡು ಮಾನಸಿಕ ತೊಳಲಾಟಕ್ಕೆ ಸಿಕ್ಕಿಕೊಂಡ ನಿಷ್ಪಾಪ ದಲಿತ ಬಾಲಕನೊಬ್ಬನ ಕಥೆ ಇಲ್ಲಿದೆ. —ಸಂ.

ಬಾನಂದೂರು ಕೆಂಪಯ್ಯ

೧೯೭೩ರ ಭಯಂಕರ ಬರಗಾಲ. ಬಡತನದ ಬರಡು ಅನುಭವಗಳೊಡನೆ ೧೯೭೪ರನೇ ಇಸವಿಗೆ ಕಾಲಿಟ್ಟಿದ್ದೆ. ಆಗ ನನಗೆ ೧೨ ವರ್ಷ. ಹುಟ್ಟಿ ಹನ್ನೆರಡು ವರ್ಷ ಕಳೆದಿದ್ದರೂ ಮನೆ ತುಂಬಾ ನರ್ತನವಾಡುತ್ತಿದ್ದ ಕ್ರೂರ ಬಡತನ. ಅಣ್ಣನ ಜೀತ, ಕೂಲಿ, ಜಠರದಲ್ಲಿ ಕಾಡುತ್ತಿದ್ದ ಹಸಿವು, ಇವುಗಳ ಜೊತೆ ಪ್ರಮುಖವಾಗಿ ಕಾಡುತ್ತಿದ್ದ ಗೌಡರ ದಬ್ಬಾಳಿಕೆ, ಜಮೀನುದಾರರ ಹಿಂಸೆ, ಒಟ್ಟಾರೆ ಕ್ರೂರ ಜಾತಿಯ ತುಳಿತದಿಂದ ಸಂಪೂರ್ಣ ಮುಳುಗಿ, ಉಸಿರುಕಟ್ಟಿ, ಮೋಕರಿಸಿದ್ದರೂ ಬಹಿರ್ಮುಖ ಶೋಷಣೆಯ ಸಲೆ ನಮಗೆ ತಟ್ಟಿರಲಿಲ್ಲ.

ಇಂಥ ಪರಂಪರಾನುಗತವಾಗಿ ರಕ್ತದೊಡನೆ ಸೇರಿಕೊಂಡ ಅಮಾನುಷ ಭಾವನೆಗಳೊಡನೆ ೯ನೇ ತರಗತಿಯಲ್ಲಿ ಓದುತ್ತಿದ್ದೆ. ಓದುವ ನೆಪದಲ್ಲಿ ಉಪಾಧ್ಯಾಯರ ಗದ್ದೆ ಹೊಲದಲ್ಲಿ ಕೆಲಸದಾಳುಗಳಾಗಿ ವ್ಯಾಸಂಗದ ಬಗ್ಗೆ ಮೂಢರಾದಾಗ "ನಿಮಗೇನ್ರಯ್ಯ ಬೆಂಗಳೂರಿನಲ್ಲಿ ಹಾಸ್ಟೆಲ್‌ಗಳಿವೆ....ಸರ್ಕಾರನೇ ಓದಿಸುತ್ತಿದೆ" ಎಂದು ಕರುಬುತ್ತಿದ್ದ ಬ್ರಾಹ್ಮಣ ಉಪಾಧ್ಯಾಯರ ಮಾತು ಮನಸ್ಸನ್ನು ಕೊರೆದಿತ್ತು.

ಅಂತೂ ೯ನೇ ತರಗತಿ ಪಾಸು ಆಗುವುದರೊಳಗೆ ಹಸಿವು ಬಡತನಗಳ ಕಾವು ಹೆಚ್ಚಾಗಿ ಕಣ್ಣು ಮಂಜಾದಾಗ ಎರಡನೇ ಅಣ್ಣ ನನ್ನು ಊರಿನ ಜಮೀನುದಾರ ಗೌಡರಿಗೆ ೧ ವರ್ಷದ ಜೀತಕ್ಕೆ ಕೇವಲ ೩೦೦ ರೂಗಳಿಗೆ ಮಾರಿದ್ದೆವು. ಆ ಹಣದಿಂದ ಬೆಂಗಳೂರಿನ ಶ್ರೀರಾಮಪುರದ ದಲಿತ ವಿದ್ಯಾರ್ಥಿ ನಿಲಯಕ್ಕೆ ಸೇರಿಕೊಂಡೆ.

ಕೆಂಪು ಜೋಳದ ಎರಡು ಸಣ್ಣ ಮುದ್ದೆ, ಕಾಳು ತರಕಾರಿ, ಒಗ್ಗರಣೆ ಕಾಣದ ಬರೀ ಖಾರದ ನೀರಿನ ಉಪ್ಪು ಸಾರು, ಎಣಿಸುವಷ್ಟು ಹಿಡಿ ಅನ್ನ–ಇವು ದಿನದ ಎರಡು ಬಾರಿಯ ಊಟವಾದರೆ, ಬೆಳಿಗ್ಗೆ ಯಾವುದೋ ದೇಶದ ಹುಳಿತು ಹುಳಿ ಬಿದ್ದು ಹೋದ ಹಾಲಿನ ಪೌಡರಿನ ಮೊಸರು ಮಜ್ಜಿಗೆ ಅಥವಾ ಹಾಲು, ಮುಗ್ಗಲು ಹಿಡಿದ ಅಮೇರಿಕದ ಗೋದಿ ನುಚ್ಚು, ಜೋಳದ ಉಪ್ಪಿಟ್ಟು ಉಪಾಹಾರವಾಗಿದ್ದವು. ಇವು ಕೂಡ ಮಕ್ಕಳ ಹಸಿವಿಗೆ ಸರಿಸಾಟಿ ಆಗುತ್ತಿರಲಿಲ್ಲ. ಕಾರಣ ಹಾಸ್ಟೆಲಿನ ಅಧಿಕಾರ ವರ್ಗ, ಅಡಿಗೆ ಮಾಡುವ ಜನ, ಕಸಬಳಿಯುವ ಹೆಂಗಸರು ಮತ್ತು ವಿದ್ಯಾರ್ಥಿ ಅಲ್ಲದವರೆಲ್ಲರೂ ತಿಂದು ಮಿಕ್ಕಿದ್ದು ವಿದ್ಯಾರ್ಥಿಗಳದಾಗಿತ್ತು.

ಇದು ದಲಿತ ಮಕ್ಕಳಿಗೆ ಆಹಾರ ಶೋಷಣೆಯಾದರೆ, ಬಡವಾದ ಮಕ್ಕಳ ದೇಹದಿಂದ ಕಚ್ಚಿ ಕಚ್ಚಿ ರಕ್ತ ಕುಡಿಯುತ್ತಿದ್ದ ಮಾಸಲು ಬಟ್ಟೆ ಕೂರೆಗಳು, ತಲೆ ತುಂಬಿದ್ದ ಕರೀ ಹೇನು ಸೀರುಗಳು, ಜೀಗುಟ್ಟಿ ರಕ್ತ ಹೀರುತ್ತಿದ್ದ ಸೊಳ್ಳೆಗಳು ಈ ಎಲ್ಲದರ ಜೊತೆ ಸಾಮೂಹಿಕವಾಗಿ ಹರಡಿದ್ದ ಕಜ್ಜಿ ಗಾಯಗಳು ಮುಗ್ಧ ಮಕ್ಕಳ ಅಂದ ಚೆಂದವನ್ನೇ ಕೆಡಿಸಿ, ದೈಹಿಕವಾಗಿ ಶೋಷಣೆ ಮಾಡಿದ್ದವು.

ಇವುಗಳ ಜೊತೆಗೆ ಮತ್ತೊಂದು ಬಗೆಯ ಧಾರ್ಮಿಕ ಪರಿವರ್ತನೆಯ ಮಹಾಶೋಷಣೆ ಅಮಾನುಷ ರೀತಿಯಲ್ಲಿ ಪ್ರಚಲಿತದಲ್ಲಿತ್ತು. ಈ ನಾಡಿನ ಎಲ್ಲಾ ಜಾತಿಯ ಶ್ರೀಮಂತರ ಜೀತದಾಳುಗಳಾಗಿ ; ದುಡಿದುಡಿದು ಬೆವರ ಬಸಿದುಕೊಂಡೇ ಬಂದ ನೊಂದ ಗ್ರಾಮಾಂತರ ದಲಿತ ಜನರ ಮಕ್ಕಳಿಗೆ ಸನಾತನ ಧಾರ್ಮಿಕ ಪರಂಪರೆಯ ಗಂಧವನ್ನು ಮುಗ್ಧ ಮೆದುಳಿಗೆ ತೀಡುವುದರಲ್ಲಿ ಹಾಸ್ಟೆಲಿನ ಅಧಿಕಾರ ವರ್ಗ ವಿಶೇಷ ಆಸಕ್ತಿ ವಹಿಸಿತ್ತು. ಆಡಳಿತ ವರ್ಗದವರೆಲ್ಲರೂ ದಲಿತರಾಗಿದ್ದರೂ ಬೆಳವಣಿಗೆಯಲ್ಲಿ ಸನಾತನ ಮರಿಗಳಾಗಿದ್ದರು. ಈ ಬಗೆಯ ಧಾರ್ಮಿಕ, ಬೌದ್ಧಿಕ ಹಿಂಸೆ ಸರಿಯೆ? ತಪ್ಪೆ ? ಎಂದು ಯೋಚಿಸುವಂತಹ ವಿಚಾರಪ್ರಿಯರಿರಲಿಲ್ಲ.

ಪ್ರತಿ ಬೆಳಿಗ್ಗೆ ೫–೬ಕ್ಕೆ ಏಳಬೇಕು. ದ್ರಾವಿಡ ಮಕ್ಕಳ ನಾಲಿಗೆಗೆ ಕೂಡದ ಸ್ವಲ್ಪವೂ ಅರ್ಥವಾಗದ ಸಂಸ್ಕೃತದ ಹಲವಾರು ಶ್ಲೋಕ, ಭಗವದ್ಗೀತ ಪಠಣ ಮತ್ತು ಭಜನೆಯನ್ನು ಹಿಂಸೆಯಿಂದ ಹಾಡಬೇಕಿತ್ತು. ಸ್ನಾನ ಮಾಡದೆ ಪ್ರಾರ್ಥನೆಗೆ ಬರುವವನಿಗೆ ಊಟವಿಲ್ಲ. ಹಾಗೆಯೇ ಪ್ರಾರ್ಥನೆಗೆ ತಪ್ಪಿಸಿಕೊಂಡವನಿಗೂ ಕೂಡ.

ಸಮಾಜದಲ್ಲಿ ನೊಂದ ಕುಟುಂಬದಿಂದ ಬಂದಂತಹ ಮಕ್ಕಳಿಗೆ ಈ ಶೋಷಣಾ ಸಮಾಜದಲ್ಲಿ ಧೈರ್ಯಸಾಹಸದಿಂದ ಹೋರಾಟ ಮಾಡಿಕೊಂಡು ಸವಾಲಾಗಿ ಬದುಕುವಂತ ಜೀವನದ ಜಾಡನ್ನು ತೋರಿಸುವುದರ ಬದಲು ಬರೀ ದೇವರು ಧರ್ಮ ಮಾನಸಿಕ ಮತಾಂತರದಲ್ಲೇ ಅಂಧಕಾರದ ಕೊಪ್ಪಲಿಗೆ ನೂಕುತ್ತಿದ್ದ ಹಾಸ್ಟಲು ಅಧಿಕಾರಿಗಳ ಮೌಢ್ಯ ಭಾವನೆಗಳನ್ನು ಬದಲಾಯಿಸುವಂತಿರಲಿಲ್ಲ.

ಪ್ರತಿವರ್ಷ ಬೆಂಗಳೂರಿನ ಆರ್ಯಸಮಾಜದವರಿಂದ ಉಪಕರ್ಮ ಹಬ್ಬದ ದಿನ ದಲಿತ ವಿದ್ಯಾರ್ಥಿ ನಿಲಯದ ಕೆಲವು ಮಕ್ಕಳಿಗೆ ಜನಿವಾರ ಧಾರಣೆ ಆಗುತ್ತಿತ್ತು. ಇದು ಹೆಚ್ಚು ಮಾಗಡಿ ರಸ್ತೆಯ ಬಾಪೂಜಿ ವಿದ್ಯಾರ್ಥಿನಿಲಯದಿಂದ ಹರಡಿತ್ತು. ಕಾರಣ ಅಲ್ಲಿನ ವಾರ್ಡನ್ ಸ್ವತಃ ಕಾವಿ ಧರಿಸಿದ ಸ್ವಾಮೀಜೀ ಆಗಿದ್ದರು. ಆ ವರ್ಷ ಅಂತಹ ಜನಿವಾರ ಧಾರಣೆಗೆ ಆಯ್ಕೆ ಆದವರಲ್ಲಿ ನಾನೊಬ್ಬ.

'ಯಜ್ಞ ಯಾಗಾದಿ ಹೋಮಗಳನ್ನೊಳಗೊಂಡ ಜನ ಸಮೂಹದಲ್ಲಿ ಸನಾತನ ಪ್ರಮುಖ ಸ್ವಾಮಿಗಳೊಡನೆ ೩ ಎಳೆಯ ಜನಿವಾರ ಧಾರಣೆ. ಒಂದೊಂದು ಎಳೆಗೂ ಒಂದೊಂದು ನಿಯಮ ಪಾಲನೆಯನ್ನು ನಿಷ್ಠೆಯಿಂದ ಪಾಲಿಸಲು ಮನಸ್ಸಿಗೆ ತುಂಬಿದ್ದರು. ಅದರಲ್ಲಿ ಬಹುಮುಖ್ಯ ಪಾಲನೆ ಮಾಂಸ ತಿನ್ನುವುದು ಮಹಾಪಾಪ. ಅದನ್ನು ಬಿಡುವುದು. ಅಂತೂ ಹೋಮದ ಬಿಳಿ ಘಾಟು ಘೂಮದ ಉಧ್ಧಿಯಲ್ಲಿ ಬೆತ್ತಲೆ ದೇಹಕೊಂಡು ಜನಿವಾರ ಹಾಕಿಸಿಕೊಂಡು, ಹಸಿದು ಬೆನ್ನೆಲಬು ಕಚ್ಚಿದ್ದ ಜಠರಕ್ಕೆ ಒಂದೊಂದು ಜೊನ್ನೆ ಪುಳಿಯೊಗರೆ ತಿಂದು ವಾಪಸ್ಸು ಹಾಸ್ಟಲಿಗೆ ಬಂದ ಮೇಲೆ ಸದರಿ ದಲಿತ ಮಕ್ಕಳನ್ನು ಆಪ್ತ ಸ್ನೇಹಿತರನ್ನು ಮುಟ್ಟಿಸಿಕೊಳ್ಳದಂತೆ ಶೋಷಣೆಗೆ ಪ್ರಾರಂಭವಾಯಿತು. ಯಾರ ಜೊತೆ ಸೇರದೆ, ಶ್ಲೋಕ ಧ್ಯಾನ ಇವುಗಳೊಡನೆ ಭಿನ್ನವಾಗಿ ಬದುಕಲಾರಂಭಮಾಡಿದೆ.

ಎಸ್. ಎಸ್. ಎಲ್. ಸಿ. ಫೇಲಾಗಿ ಊರಿಗೆ ವಾಪಸ್ಸು ಬಂದರೂ ಊರಿನಲ್ಲೆಲ್ಲ ನನ್ನ ಮಡಿವಂತಿಕೆ, ನೀತಿ ನಿಯಮ, ಮಾಂಸ ತಿನ್ನದಿರುವುದು ಅಚ್ಚರಿಯನ್ನುಂಟುಮಾಡಿತು. ಊರಿನ ಕೆಲವು ಗೌಡರು "ಹೊಲೆಯ ಬ್ರಾಹ್ಮಣನಾಗುವುದುಂಟೆ? ಜನಿವಾರ ಹಾಕ್ಕೊಂಡು ಬಾಡು ತಿನ್ನೋದನ್ನೂಬಿಟ್ಟಿದ್ದಾನಂತೆ"ಎಂದು ಗೊಳ್ಳೆಂದು ನಗುತ್ತಿದ್ದರು. ಅಂತೂ ಜೀತ ಮಾಡಿ ಓದಿಸಿದ ಅಣ್ಣ, ಮೊಲೆ ಉಣಿಸಿ ಸಾಕಿದ ಕೋಲಿ ಅವ್ವನನ್ನು ಶೋಷಣೆ ಮಾಡಿದ್ದುಂಟು. ಬಾಡು ತಿನ್ನುವುದನ್ನು ಬಿಟ್ಟ ಮೇಲೆ ಬಾಡು ತಿನ್ನುವವರಿಂದ ಶೋಷಣೆಗೆ ಒಳಗಾದೆ. ಬಾಡು ಮಾಡಿದ ದಿನ ತಿನ್ನಲು ಮನಸ್ಸು ಮುಂದಾದರೆ ಜನಿವಾರದ ನೆನಪು ಬಂದು ಭಯ ಪಡುತ್ತಿದ್ದೆ. ಅಂತೂ ಮನುಷ್ಯನಂತೆ ಬದುಕಿ ಎಲ್ಲರ ಜೊತೆ ಲೀಲಾ ಜಾಲವಾಗಿ ಬೆಳೆಯಲು ಸಾಧ್ಯವಾಗಲಿಲ್ಲ. ಈ ಜನಿವಾರವನ್ನು ನಾನೇಕೆ ಹಾಕಿಕೊಂಡೆ ಎಂದು ಮಾನಸಿಕವಾಗಿ ಗೋಳಾಡಿ ಹಿಂದು ಮುಂದಾಗಿ ತ್ರಿಶಂಕುವಾದೆ. ನನ್ನ ಗೊಂದಲಕ್ಕೆ ಹೊಣೆ ಯಾರು ? ಅದಕ್ಕೆ ಪರಿಹಾರವೇನೆಂದು ಒದ್ದಾಡಿದೆ. ಕೊನೆ ಕೊನೆಗೆ ನನ್ನನ್ನು ಯಾರು ಇಷ್ಟಪಡದಂತಹ ಸ್ಥಿತಿಗೆ ಹೋದರೂ ದಾರ್ಮಿಕವಾಗಿ ಬೇರೆಯಾಗಲು ಸಾಧ್ಯ ವಾಗದಂತಿತ್ತು. ಇಂತಹ ಮಾನಸಿಕ ಕ್ರೂರ ಯಾತನೆಯಲ್ಲಿ ಮುಕ್ತಿಗಾಗಿ ಪರದಾಟವಾಯಿತು. ಅಂತೂ ಇದಕ್ಕೆ ಮುಕ್ತಿ ಸಿಕ್ಕಿತು. ಒಂದು ಸಿಡಿಬಿಸಿಲ ಬೇಸಿಗೆ ದಿನದ ೧೦ ಗಂಟೆ. ಮನೆ ಹಿಂದಿನ ಹಿತ್ತಲಿನಲ್ಲಿ ಸ್ನಾನಕ್ಕೆ ನೀರು ಕಾಯಿಸಿದ್ದರು. ಬೇಸಿಗೆ ಬೆವರಿಗೆ ಜನಿವಾರ ಕೊಳೆತು ನಾರುತ್ತಿತ್ತು. ಭಯದಿಂದ ಅದನ್ನು ತೊಳೆದು ಭಕ್ತಿಯಿಂದ ಬೇಲಿಯ ಮೇಲೆ ಬಿಸಿಲಿಗೆ ಹಾಕಿದ್ದೆ. ಸ್ನಾನ ಮಾಡುತ್ತ ನೂರಾರು ಕ್ರೂರ ಯೋಚನೆಗಳಿಂದ ಮರೆತು ಸಂಜೆವರೆಗೆ ಕಾಲ ಕಳೆದಿದ್ದೆ. ೫ ಗಂಟೆಯ ವೇಳೆಗೆ ಮೈಸವರಿಕೊಂಡಾಗ ಜನಿವಾರದ ನೆನಪು ಬಂತು ! ಹಿತ್ತಲು, ಬೇಲಿ, ಮನೆಯನ್ನೆಲ್ಲ ಹುಡುಕಿದೆ ಸಿಗಲಿಲ್ಲ. ಹರಿದು ಚಿಂದಿಯಾಗಿದ್ದ ಸೀರೆಯನ್ನು ಹೊಲಿಯುವಾಗ ಅವ್ವ ಬೇಲಿ ಮೇಲಿನ ಜನಿವಾರವನ್ನು ನೂಲು ಎಂದು ತಿಳಿದು ಹೊಲೆದೇಬಿಟ್ಟಿದ್ದಳು. ಮಿಕ್ಕ ಜನಿವಾರವನ್ನು ಸೂರಡಿಗೆ ಸಿಗಿಸಿದ್ದಳು. ಅವ್ವನೊಡನೆ ಜಗಳವಾಯಿತು. ವಾರಗಟ್ಟಲೆ ಮುನಿಸಿಕೊಂಡಾಯಿತು. ಒಂದು ಕಡೆ ಪಾಪದ ಪ್ರಜ್ಞೆ, ಮತ್ತೊಂದು ಕಡೆ ಭೀತಿ. ಹೀಗಾಗಿ ಅನೇಕ ತಿಂಗಳು ಮಾನಸಿಕ ಸಂತೋಷವೇ ಇರಲಿಲ್ಲ.

ಚಿಕ್ಕ ವಯಸ್ಸಿನಿಂದಲೂ, ಧಾರ್ಮಿಕ, ಮಾನಸಿಕ, ಸಾಮಾಜಿಕ, ಆರ್ಥಿಕ ಹಾಗೂ ಬೌದ್ಧಿಕ ಹಿಂಸೆಗೆ ಒಳಗಾಗಿ ಬೆಳೆದು ಬಂದ ನನಗೆ ಈ ನೆನಪು ಮರೆಯಲಾಗದ್ದು. ಹಾಗೂ ನನ್ನ ಮಾನಸಿಕ ಬದಲಾವಣೆಗೆ ಶ್ರೇಷ್ಠ ಘಟನೆಯಾಯಿತು. ಈ ಎಲ್ಲಾ ನೆನಪುಗಳೊಡನೆ ಲಗರಲ್ಲಿ ಕಾಲಿಡುತ್ತಿರುವ ನನಗೆ ಅವ್ವನ ಅವ್ಯಕ್ತ ಜನಿವಾರದ ಹತ್ಯೆ ಇಡೀ ಸನಾತನ ಧಾರ್ಮಿಕ ಪರಿವರ್ತನೆಯ ಆರ್ಯ ಮೌಲ್ಯಕ್ಕೆ ಬಂಡೆದ್ದು ಸವಾಲಾಗಿ ನಿಂತುದು ಅರಿವಾಯಿತು. ಇಂತಹ ಕ್ರೂರ ದಾರ್ಮಿಕ ಶೋಷಣೆಗಳು ಈ ಮಣ್ಣಿನಲ್ಲಿ ಇನ್ನಾದರೂ ಕಡಿಮೆ ಆಗಲು ಕಲಿತ ವಿಚಾರವಂತ ದಲಿತರೆಲ್ಲ ವಿರೋಧಿಸಬೇಕೆಂಬ ಬಂಡಾಯದ ಭಾವನೆಗಳು ಉದ್ಭವವಾದವು. [ಸೌಜನ್ಯ : ಸಮನ್ವಯ] ●

[14ನೇ ಪುಟದಿಂದ]

ಇದ್ದಾನೆ ಎಂಬುದೇ ಮರೆತು ಹೋಗಿದೆ. ಇವರು ಸೂಪರಿಂಟೆಂಡೆಂಟ್ ಸಾಹೇಬರು ನಿರಾಯಾಸವಾಗಿ ಸಂಬಳ ಪಡೆಯುತ್ತಿದ್ದಾರೆ. ಸರ್ಕಾರದಿಂದ ವಿದ್ಯಾರ್ಥಿಗಳಿಗೆ ಬರುವ ಸೋಪು, ಎಣ್ಣೆ ಪುಸ್ತಕ ಎಲ್ಲವೂ ಈ ಸಾಹೇಬರ ಹೊಟ್ಟೆಯೊಳಗೆ ಆಶ್ರಯ ಪಡೆಯುತ್ತಿವೆ. ತಾನು ಮಾತ್ರ ಸ್ಪೆಷಲ್‌ಆಗಿ ತಿಂಡಿಗಳನ್ನು ಮಾಡಿಸಿಕೊಂಡು ಪೊಗದಸ್ತಾಗಿ ಹೊಡೆಯುವ ಸೂಪರಿಂಟೆಂಡೆಂಟ್‌ರು ವಿದ್ಯಾರ್ಥಿಗಳು ಎಣ್ಣೆಯಿಲ್ಲದ ಉಪ್ಪಿಟ್ಟು, ತರಕಾರಿಯಿಲ್ಲದ ಸಾರು ಅನ್ನ ತಿನ್ನುತ್ತಿದ್ದಾರೆ ಎಂಬುದನ್ನು ಯೋಚನೆ ಮಾಡದಷ್ಟು ಸಂತೃಪ್ತ. ಇದೂ ಸಾಲದೆ ಅಡಿಗೆಯವರು ವಿದ್ಯಾರ್ಥಿಗಳನ್ನು ಹೊಡೆಯುವುಮ, ದುಡಿಸುವುಸು ಎಲ್ಲ ಮಾಡುತ್ತಿದ್ದಾರೆ. ಈ ಎಲ್ಲದರ ಬಗ್ಗೆ ಸಂಬಂಧಪಟ್ಟವರು ಕಿವುಡರಾಗಿದ್ದಾರೆ. ಕುರುಡರಾಗಿದ್ದಾರೆ. ಮುಖ್ಯವಾಗಿ ಅವರಿಗೆ ಹೃದಯವೇ ಇಲ್ಲ. ವಿದ್ಯಾರ್ಥಿಗಳೊಟ್ಟಿಗೆ ಮಾತಾಡಿ, ಅಲ್ಲಿಯ ಸ್ಥಿತಿನೋಡಿ ಆ ಬಂಗಲೆಯಿಂದ ಹೊರಬಂದಾಗ ಇಂಡಿಯಾದಲ್ಲಿ ಮನುಷ್ಯತ್ವವೆಲ್ಲಿದೆ? ಎಂದು ಹುಡುಕುವ ಮನಸ್ಸಾಯಿತು. ●

ನೀಗ್ರೋ ಸಾಹಿತ್ಯ ಹಾಗೂ ದಲಿತ ಸಾಹಿತ್ಯ

ಮೂಲ :
ಪ್ರೊ॥ ಜನಾರ್ದನ ವಾಘಮಾರಿ

ಅನುವಾದ :
ಎಂ. ಮರಿಸ್ವಾಮಿ

ನೀಗ್ರೋ ಸಾಹಿತ್ಯ ಮತ್ತು ದಲಿತ ಸಾಹಿತ್ಯವನ್ನು ತುಲನಾತ್ಮಕವಾಗಿ ಅಭ್ಯಾಸ ಮಾಡಿದಾಗ ಅದು ತುಂಬ ಉದ್ಬೋಧಕವಾಗಿ ಕಾಣುವುದರಲ್ಲಿ ಸಂಶಯವಿಲ್ಲ. ನೀಗ್ರೋಗಳು ಮೂಲತಃ ಅಮೇರಿಕೆಯವರಲ್ಲ. ಯುರೋಪಿನ ಬೇರೆಬೇರೆ ಪ್ರದೇಶಗಳಿಂದ ಜನರು ಅಮೇರಿಕೆಗೆ ಬಂದು ತಮ್ಮ ವಸಾಹತುಗಳನ್ನು ಸ್ಥಾಪಿಸಿದರು. ಸ್ವತಂತ್ರ ಹಾಗು ಸಂಪನ್ನವಾದ ಜೀವನದ ಶೋಧನೆಯಲ್ಲಿ ಅವರು ಅಮೇರಿಕೆಯ ತೀರವನ್ನು ತಲುಪಿದರು. ಸ್ವತಂತ್ರ ಹಾಗು ಸಂಪನ್ನಭರಿತವಾದ ಜೀವನದ ಶೋಧದಲ್ಲಿ ಬಿಳಿಯರ ಹಾಗೆ ನೀಗ್ರೋಗಳು ಅಮೇರಿಕೆಗೆ ಹೋಗಲಿಲ್ಲ. ಅವರನ್ನು ಬಲವಂತದಿಂದ ಅಲ್ಲಿಗೆ ಒಯ್ಯಲಾಯಿತು. ಅಮೇರಿಕೆಯು ಅವರಿಗೆ ಭೀಷಣವಾದ ದಾಸ್ಯ ಮತ್ತು ಪ್ರಚಂಡವಾದ ದಾರಿದ್ರ್ಯವನ್ನು ಕೊಟ್ಟಿತು. ತಮ್ಮ ಭಾಷೆ, ತಮ್ಮ ಸಂಸ್ಕೃತಿ, ತಮ್ಮ ಚರಿತ್ರೆ ಒಟ್ಟಾರೆ ತಮ್ಮ ಆಫ್ರಿಕೆಯ ಸಕಲ ಅನುವಂಶಿಕತೆಯ ವಾರಸುತನವನ್ನೇ ಅವರು ಬಿಡಬೇಕಾಯಿತು. ಆಫ್ರಿಕೆಯ ಶರೀರ ಹಾಗು ಮನಸ್ಸು ಇವೆರಡೇ ಅವರಲ್ಲಿ ಉಳಿದವು. ಕಾಲಾಂತರದಲ್ಲಿ ಅವರ ಶರೀರದಲ್ಲಿ ಶ್ವೇತ ರಕ್ತ ಪ್ರವೇಶಿಸಿತು ಮತ್ತು ಶ್ವೇತ ಸಂಸ್ಕೃತಿಯು ಅವರ ಮನಸ್ಸನ್ನು ತನ್ನ ಹತೋಟಿಗೆ ತೆಗೆದುಕೊಂಡಿತು. ಅವರ ಆಫ್ರಿಕೆಯ ಸಂಬಂಧ ಸೂತ್ರವನ್ನೂ ಕೂಡ ವಿಧಿಯು ಶಾಶ್ವತವಾಗಿ ಕಡಿದು ಹಾಕಿತು. ಆಫ್ರಿಕೆಯ ದಂಡೆಯನ್ನು ಅವರಿಗೆ ಮತ್ತೆ ಎಂದೂ ಮುಟ್ಟಲಾಗಲಿಲ್ಲ. ನಾರ್ವೆಯಂಥ ನೀಗ್ರೋ ನಾಯಕರು ಅವರನ್ನು ಮತ್ತೆ ಆಫ್ರಿಕೆಗೆ ತರುವ ಪ್ರಯತ್ನ ಮಾಡಿದರಾದರೂ ಕೈಗೂಡಲಿಲ್ಲ. ಬಿಳಿಯರೂ ಕೂಡ ಅವರನ್ನು ಆಫ್ರಿಕೆಗೆ ಕಳಿಸುವ ವಿಚಾರ ಮಾಡಿದ್ದರು—ಯಶ ಸಿಗಲಿಲ್ಲ. ಆಫ್ರಿಕೆಯ ಬಗ್ಗೆ ಅವರಿಗೆ ಸಾಕಷ್ಟು ಕುತೂಹಲ ಆಕರ್ಷಣೆ ಬೆಳೆಯುತ್ತಿತ್ತು ಎಂಬುದರಲ್ಲಿ ಸಂಶಯವಿಲ್ಲ. 'ವಾಟ್ ಇಜ್ ಆಫ್ರಿಕಾ ಟು ಮಿ'– ಈ ಪ್ರಶ್ನೆಗೆ ಅವರು ಉತ್ತರ ಹುಡುಕಲು ಪ್ರಯತ್ನಿಸಿದರು. ಆಫ್ರಿಕೆಯು ಅವರ ಜೀವನಕ್ಕೆ ಸಾಕಷ್ಟು ಆಶೆಯನ್ನು ಒದಗಿಸಿತ್ತೆಂಬುದರಲ್ಲಿಯೂ ಸಂಶಯವಿಲ್ಲ. ಆದರೆ ಅವರು ಸರ್ವಾರ್ಥದಲ್ಲಿ ಆಫ್ರಿಕನ್ ಆಗಿ ಉಳಿದಿಲ್ಲ. ಬಿಳಿಯರ ಭಾಷೆ, ಸಂಸ್ಕೃತಿ ಮತ್ತು ವೇಷ ಇವುಗಳನ್ನು ಅವರು ಸ್ವೀಕರಿಸಬೇಕಾಯ್ತು. ಇಷ್ಟಾಗಿಯೂ ಅವರಿಗೆ ಬಿಳಿಯರ ಧರ್ಮ ಮತ್ತು ಸಂಸ್ಕೃತಿಯಲ್ಲಿ ಸರಿಯಾದ ಪಾಲು ಸಿಕ್ಕದೇ ಹೋಯಿತು.

ವಿಷಮತೆಯ ಕಂದಕದಲ್ಲಿ ಬಿದ್ದು ಅವರು ಬೆಂದು ಹೋದರು. ಶ್ವೇತ ಸಮಾಜವು ಅವರ ಮೇಲೆ ಬಹಿಷ್ಕಾರವನ್ನು ಹೇರಿತು. ದಿನನಿತ್ಯವೂ ಅವಶು ಹೊಲಸು ಕೆಲಸಗಳನ್ನು ಮಾಡಬೇಕಾಯ್ತು. ಬಿಳಿಯರ ಬೀದಿಯಲ್ಲಿ ಅವರಿಗೆ ವಾಸಿಸಲು ಸಾಧ್ಯವಾಗಲಿಲ್ಲ. ಒಂದು ಬೇರೆ ಅರ್ಥದಲ್ಲಿ ಅವರು ಬಿಳಿಯರ ಊರ ಪೌಳಿಯಾಚೆಗೇ ಬಾಳಬೇಕಾಯಿತು. ಅಮೇರಿಕೆಯ ಸಂಸ್ಕೃತಿಯು ಅವರಿಗೆ ಸಮಾಜದ ಕೆಳಗಿನ ಸ್ಥಾನವನ್ನು ಕೊಟ್ಟಿತು. ಈ ಕೆಳಗಿನ ಸ್ಥಾನವನ್ನು ನೀಗ್ರೋಗಳು ಬಿಡಬೇಕೆಂದರೂ ಬಿಡಲಾಗಲಿಲ್ಲ. ಬದಲಿಸಬೇಕೆಂದರೂ ಬದಲಿಸಲಾಗಲಿಲ್ಲ. ನೀಗ್ರೋ ಗುಲಾಮಗಿರಿಯ ವರ್ಣನೆಯನ್ನು 'ಎ ಪೆಕ್ಯುಲಿಯರ್ ಇನ್‌ಸ್ಟಿಟುಶನ್' ಎಂಬ ಪದದಿಂದ ಅರ್ಥೈಸಲಾಗುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ ಭಾರತೀಯ ದಲಿತರು ಹೊರದೇಶದಿಂದ ಬಂದವರಲ್ಲ. ಅನುವಂಶಿಕ ದೃಷ್ಟಿಯಿಂದ ಅವರು ಇನ್ನಿತರ ಭಾರತೀಯರಿಗಿಂತ ಭಿನ್ನವಾಗಿಲ್ಲ. ಅನ್ಯರ ಭಾಷೆ, ಧರ್ಮ, ಸಂಸ್ಕೃತಿ, ಚರಿತ್ರೆ ಅವರ ಮೇಲೆ ಹೇರಲಾಗಿಲ್ಲ. ಆದರೆ ಹೀಗಿದ್ದೂ ಕೂಡ ಇವರು ಈ ದೇಶದ ವಾರಸುದಾರರಾಗಲಿಲ್ಲ. ಹಾಗೂ ಈ ದೇಶದ ಸಂಸ್ಕೃತಿಯ ಒಡೆಯರೆಂದು ಪರಿಗಣಿಸಲ್ಪಡಲಿಲ್ಲ. ಅನೇಕ ಶತಮಾನಗಳಿಂದ ಇವರಿಗೆ ಈ ದೇಶದ ಸಂಸ್ಕೃತಿಯ, ಧಾರ್ಮಿಕ ಮತ್ತು ಸಾಮಾಜಿಕ ಜೀವನದ ರಚನೆಯಲ್ಲಿ ಹಾಗೂ ಬೆಳವಣಿಗೆಯಲ್ಲಿ ಸರಿಸಮವಾದ ಪಾಲು ಸಿಗಲಿಲ್ಲ. ನೀಗ್ರೋಗಳಂತೆ ತಮ್ಮ ದೇಶ ಬಿಟ್ಟು ಹೋಗುವ ಪ್ರಶ್ನೆ ಇವರ ಎದುರು ಎಂದೂ ಇರಲಿಲ್ಲ. ಇವರು ಈ ದೇಶದವರು, ಆದರೆ ಈ ದೇಶ ಇವರದಾಗಲಿಲ್ಲ. ಆದ್ದರಿಂದಲೇ ಅಂಬೇಡಕರರು ಹೇಳಿದ್ದರು 'ಗಾಂಧಿಜೀ, ಐ ಹ್ಯಾವ್ ನೊ ಹೋಮ್ ಲ್ಯಾಂಡ್' ಎಂದು. ಈ ದೇಶದಲ್ಲಿ ವ್ಯರ್ಥವಾಗಿ ಹುಟ್ಟಿದೆವೆಂದು ಇವರಿಗೆನಿಸಿತ್ತು. ಬಾಬುರಾವ ಬಾಗುಲ ಹೀಗೆ ಹೇಳುತ್ತಾರೆ—

ಇಲ್ಲಿ ಜನ್ಮ ತಳೆಯುವ ತಪ್ಪು ಮಾಡಿದವರೇ
ಇನನ್ನು ತಿದ್ದಬೇಕು—
ದೇಶ ಬಿಟ್ಟು
ಇಲ್ಲವೇ ತಿದ್ದಬೇಕು ಯುದ್ಧಮಾಡಿ.

ಆದರೆ ಇವರಿಗೆ ಈ ದೇಶ ಬಿಡಲು ಆಗುತ್ತಿರಲಿಲ್ಲ. ಇವರ ಮುಂದೆ ಒಂದು ಪ್ರಶ್ನೆ ಇತ್ತು. 'ವಾಟ್ ಈಜ್ ಇಂಡಿಯಾ ಟು ಮಿ?' ಈ ಪ್ರಶ್ನೆಯ ಅರ್ಥವನ್ನು ಇವರು ಈಗ ತನ್ನ ಸಾಹಿತ್ಯದಲ್ಲಿ ಹುಡುಕುತ್ತಿದ್ದಾರೆ. ನೀಗ್ರೋಗಳಂತೆ ಇವರು ಕೂಡ ವಿಷಣ್ಣತೆಯ ಆಳವಾದ ಕಂದಕದಲ್ಲಿ ಬಿದ್ದು ರಕ್ತದಲ್ಲಿ ನಿರಂತರ ಮುಳುಗಿದ್ದರು. ಇವರೂ ಕೂಡ ತನ್ನ ಮೇಲಿನವರ ಕೀಳು ಹಾಗೂ ಹೊಲಸು ಕೆಲಸಗಳನ್ನು ಮಾಡಬೇಕಾಯಿತು. ಸವರ್ಣೀಯರ ಬೀದಿಗಳಲ್ಲಿ ಇವರಿಗೆ ಇರಲು ಅವಕಾಶ ಸಿಕ್ಕಲಿಲ್ಲ. ಇವರ ವಾಸ ಊರ ಪೌಳಿಯ ಹೊರಗೆ. ಇವರ ಸ್ಪರ್ಶ ಹೇಸಿಕೆ ತರುವಂಥದ್ದು. ಅಂತೆಯೇ ನೆರಳು ಕೂಡ. ಭಾರತೀಯ ಸಂಸ್ಕೃತಿಯು ಇವರಿಗೆ ಸಮಾಜ ಜೀವನದ ತೀರ ಕೆಳಗಿನ 'ಮೆಟ್ಟಿಲ'ನ್ನು ಕೊಟ್ಟಿತು. ಶತಮಾನಗಳವರೆಗೆ ಇವರು ಅದೇ ಮೆಟ್ಟಿಲ ಮೇಲೆ ಕುಳಿತವರು ಮಲಗಿದ್ದರು. ಈಗ ಮಲಗಿದ್ದವರು ಎದ್ದು ಕುಳಿತರಲ್ಲದೆ, ತಲೆ ಎತ್ತಿ ನಿಲ್ಲಲು ಪ್ರಯತ್ನಿಸುತ್ತಿದ್ದಾರೆ. ಮನಸ್ಸಿದ್ದೂ ಕೂಡ ಇವರಿಗೆ ಆ 'ಮೆಟ್ಟಿಲು'

ಬಿಡಲಾಗಲಿಲ್ಲ, ಬದಲಾಯಿಸಲಾಗಲಿಲ್ಲ. ವರ್ಣ ವ್ಯವಸ್ಥೆಯು ನಿರ್ಮಿಸಿದ ಅಸ್ಪೃಶ್ಯತೆಯ ವರ್ಣನೆಯನ್ನೂ 'ಎ ಪೆಕ್ಯುಲಿಯರ್ ಇನ್‌ಸ್ಟಿಟ್ಯೂಶನ್' ಶಬ್ದದಿಂದಲೇ ಮಾಡಬೇಕಾಗುತ್ತದೆ. ಅಸ್ಪೃಶ್ಯತೆಯ ಅಂಧಕಾರದ ಅನೇಕ ಶತಮಾನಗಳ ಕೈದಿಯಾಗಿ ಇವರು ಬದುಕುತ್ತಿದ್ದಾರೆ. ಮನುವು ನಿರ್ಮಿಸಿದ ಜಾತಿ ವ್ಯವಸ್ಥೆಯ ಅರಗಿನ ಮನೆಯಲ್ಲಿ ಇವರು ತಲೆತಲಾಂತರಗಳಿಂದ ಬೇಯುತ್ತಿದ್ದಾರೆ.

ಅಮೇರಿಕೆಯ ನೀಗ್ರೋ ಹಾಗೂ ಭಾರತೀಯ ದಲಿತ ಇಬ್ಬರೂ ತಮ್ಮ ತಮ್ಮ ದೇಶದಲ್ಲಿಯ 'ಬಂದ್' ಸಮಾಜದ ಅಂಗಗಳಾಗಿದ್ದಾರೆ. ಇಬ್ಬರೂ ವಿಶಿಷ್ಟವಾದ 'ವರ್ಣ ವ್ಯವಸ್ಥೆಯ ಬಲಿಯಾಗಬೇಕಾಗಿದೆ.' ಆನುವಂಶಿಕ ಸ್ವರೂಪದ ವರ್ಣವ್ಯವಸ್ಥೆಗೆ ನೀಗ್ರೋಗಳು ಬಲಿಯಾಗಿದ್ದರೆ ಅಸ್ಪೃಶ್ಯರು ಜಾತಿ ಸ್ವರೂಪದ ವ್ಯವಸ್ಥೆಗೆ ಬಲಿಯಾಗಿದ್ದಾರೆ. ಆನುವಂಶಿಕತೆಯು ನಿಸರ್ಗ ನಿರ್ಮಿತವಾಗಿದೆಯಾದರೆ ಜಾತಿ ಮನುಷ್ಯ ನಿರ್ಮಿತವಾದುದು. ನೀಗ್ರೋಗಳಿಗೆ ತಮ್ಮ ಚರ್ಮದ ಬಣ್ಣ ಬದಲಿಸಲಾಗಲಿಲ್ಲವಾದರೆ ಅಸ್ಪೃಶ್ಯರಿಗೆ ತಮ್ಮ ಜಾತಿಯನ್ನು ಬದಲಿಸಲಾಗಲಿಲ್ಲ. ಇಲ್ಲಿನ ಅಸ್ಪೃಶ್ಯರ ಚರ್ಮದ ಬಣ್ಣ ಮತ್ತು ಜಾತಿಗಳು ಇಲ್ಲಿನ ಮನುಷ್ಯ ನಿರ್ಮಿತಗಳು. ಈ ರೀತಿ ನಿರ್ಮಾಣವಾದ ಈ 'ಅಮಂಗಳ' ಭೇದಕ್ಕೆ ಮನುಷ್ಯನೇ ಕಾರಣನು. ಒಮ್ಮೊಮ್ಮೆ ತೀರ ಗೌರವರ್ಣದ ನೀಗ್ರೋಗಳು ತಾವು ನೀಗ್ರೋ ಎಂಬುದನ್ನು ಬಚ್ಚಿಡಲು ಪ್ರಯತ್ನಿಸಿದರು. ಅದರಂತೆ ಕೆಲವು ಅಸ್ಪೃಶ್ಯರು ಕೂಡ ತಮ್ಮ 'ಜಾತಿ' ಯನ್ನು ಕದಿಯಲು ಪ್ರಯತ್ನಿಸಿದರು. ಆದರೆ ಇಬ್ಬರ ಪ್ರಯತ್ನಗಳು ಸಂಪೂರ್ಣವಾಗಿ ಮೋಸಹೋದವು. ಅಮೇರಿಕೆಯಲ್ಲಿಯ ನೀಗ್ರೋಗಳ 'ಸ್ಥಾನ' ಮತ್ತು ಭಾರತದಲ್ಲಿಯ ಅಸ್ಪೃಶ್ಯರ 'ಮೆಟ್ಟಲು' ಇವುಗಳಲ್ಲಿ ಯಾವ ವ್ಯತ್ಯಾಸವೂ ಇಲ್ಲ. ಆದ್ದರಿಂದಲೇ ದೀರ್ಘಕಾಲದವರೆಗೆ ಇಬ್ಬರೂ ಆತ್ಮಹೀನತೆಯು ಮತ್ತು ಆತ್ಮ ತಿರಸ್ಕಾರದ ಸುಳಿಯಲ್ಲಿ ಸಿಕ್ಕರು. ಇಬ್ಬರನ್ನೂ ಕರ್ಮವಾದದ ಕಾರಾಗೃಹದಲ್ಲಿ ಬಂದಿಯಾಗಿ ಇಡಲಾಯಿತು. ಈ ಕಾರಾಗೃಹ ವಾಸವನ್ನು ಉಳಿಸುವುದಕ್ಕಾಗಿ ಬಿಳಿಯರು ಬೈಬಲ್ಲಿನ ಕೆಲವು ಮಿಥ್ಯಗಳ ಹಾಗೂ ಪ್ರತೀಕಗಳ ಆಸರೆ ಪಡೆದರಾದರೆ ಸವರ್ಣೀಯರು ವೇದ ಮತ್ತು ಮನುಸ್ಮೃತಿಯ ಆಸರೆ ಪಡೆದರು.

ಇಂಥ ಅಸಹಾಯಕಾವ್ಯವಸ್ಥೆಯಲ್ಲಿ ಏನು ಮಾಡಬೇಕು? ದೇವರ ಮೇಲೆ ಭಾರ ಹಾಕಿ ಬಾಳಬೇಕು ಹಾಗು ದುಃಖ ಭೋಗವನ್ನು ಅವನಿಗೇ ಹೇಳಿಕೊಳ್ಳಬೇಕು. ಒಬ್ಬ ನೀಗ್ರೋ ಕವಿ ಹೇಳುತ್ತಾನೆ—

ಓ ಆ ಪ್ರಭುವಿನಲ್ಲಿ
ಆ ಪ್ರಭುವಿನಲ್ಲಿ
ನನ್ನ ಆತ್ಮವೇ ಆ
ಪ್ರಭುವಿನಲ್ಲಿ

ಕೊನೆಗೆ ಇದು ತನ್ನ ಕರ್ಮದ ಫಲವೇ ಆಗಿದೆ ಎಂದು ತಿಳಿಯಬೇಕು. ಜೀವನದಲ್ಲಿ ಅಗತ್ಯವು ತಾಳ್ಮೆಯನ್ನು ಮಿರಿದ್ದೇ ಆದರೆ ಮೃತ್ಯುವನ್ನು ಕಳಿಸಿ ಮುಕ್ತನನ್ನಾಗಿ ಮಾಡುವನೆಂದು ಆಶೆ ಪಡಬೇಕು. ಇದೇ ರೀತಿಯಾಗಿ ಇನ್ನೊಬ್ಬ ನೀಗ್ರೋ ಗುಲಾಮನು ಹೇಳುತ್ತಾನೆ—

ಓ ನನ್ನ ಪ್ರಭುವೇ ಅವನು
ಕರೆಯುತ್ತಿದ್ದಾನೆ
ಅವನು ಕರೆಯುತ್ತಿದ್ದಾನೆ ನನ್ನ
ಗುಡುಗು ಮಿಂಚನು ಕಳಿಸಿ
ನನ್ನ ಆತ್ಮದ ವಳಗೆ ಯುದ್ಧ ಕಹಳೆಯ
ಗಾಯ ಕುಂತೇ ಇದೆ.

ಮತ್ತು ತಮ್ಮ ಭಾಗ್ಯಕ್ಕೆ ಬಂದ ಬಾಳಿನ ವಿರುದ್ಧ ಪ್ರತಿಭಟನೆ ಹೇಳಿಕೊಳ್ಳಬೇಕಾದರೂ ಕೂಡ ದೇವರ ಹತ್ತಿರವೆ. ಅವನು ತನ್ನ ಕರ್ಮವನ್ನು ಹೀಗೆ ಮೊರೆಯಿಡುತ್ತಾನೆ—

'ನಮ್ಮದು ಮಾಡಿದಿ ನೀ ಹೀನವಾಣಿ |
ತಿಳಿಯದೇನು ಶ್ರೀಪತಿಯೆ ನಿನಗೆ
ಬಾಳು ಕಳೆಯಿತು ಎಂಜಲನ್ನದಿಂದ |
ನಾಚಿಕೆಯಾಗದೇ ನಿನ್ನ ಮನಸಿಗೆ!

ಆದರೂ ಕೂಡ ಕರ್ಮದ ಮೇಲಿನ ನಂಬಿಕೆಯನ್ನು ಹೇಗೆ ಬಿಡುವುದು? ಆದ್ದರಿಂದ ಚೋಖಾ ಮೇಲಾ ಹೇಳುತ್ತಾನೆ—

ನಮ್ಮ ಸಂಚಿತ ಇರುವುದು ಎಂತೆಂತೋ |
ಅಲ್ಲಿ ನಡೆಯದೊಂದೂ ಉಪಾಯ
ಕರ್ಮದ ಸಂಚಿತ ಪ್ರಾರಬ್ಧದ ಭೋಗ |
ತಪ್ಪದಯ್ಯ ಜನ್ಮಾಂತರದ ಓಡಾಟ ||

ಪ್ರಾರಬ್ಧದ ಭೋಗದಿಂದಾಗಿ ತಾನು ಮಾದಿಗರ ಹೊಟ್ಟೆಯಲ್ಲಿ ಹುಟ್ಟಿದೆನೆಂದು ಅವನಿಗೆ ಆತ್ಮಸಮಾಧಾನ. ಆದರೆ ಸಂಪೂರ್ಣವಾದ ಆತ್ಮ ಸಮಾಧಾನ ಲಭಿಸುವುದಿಲ್ಲ. ಒಬ್ಬ ನೀಗ್ರೋ ಬ್ಲ್ಯೂಜ್‌ಗಾಯಕ ಹೇಳುತ್ತಾನೆ—

ನಾ ಏನು ಮಾಡಲಿ
ಬರಿಯ ಕಪ್ಪು ಮತ್ತು
ನೀಲಿ

ಈ ಪ್ರಶ್ನೆಗೆ ಉತ್ತರ ಅವನಿಗೆ ಸಿಗುವುದಿಲ್ಲ.

ನೀಗ್ರೋಗಳ ದೈಹಿಕ ಹಿಂಸೆಗಂತೂ ಜಗತ್ತಿನಲ್ಲಿ ಸಾಟಿಯಿಲ್ಲ. ಅವರ ವಂಶ ವಿಚ್ಛೇದನಗೊಳಿಸುವ ಪ್ರಯತ್ನವನ್ನೇ ಬಿಳಿಯರು ಮಾಡಿದರು. ಅವರ ಕ್ರಯವಿಕ್ರಯವೂ ಆಯಿತು. ಗುಲಾಮಗಿರಿಯ ಕಾಲದಲ್ಲಿ ನೀಗ್ರೋ ಸ್ತ್ರೀಯ ಮೇಲೆ ತನ್ನ ಅಧಿಕಾರವನ್ನು ಹೇಳಿಕೊಳ್ಳುವ ಧೈರ್ಯವೂ ನೀಗ್ರೋ ಪುರುಷನಿಗಾಗಲಿಲ್ಲ. ಆದ್ದರಿಂದ ಅವರ ಕೌಟುಂಬಿಕ ವ್ಯವಸ್ಥೆಯು ಛಿದ್ರಗೊಂಡಿದ್ದು ಇಂದಿಗೂ ಅವರಿಗೆ ತಮ್ಮ ಕೌಟುಂಬಿಕ ಜೀವನದ ಪುನರ್ವಾಸ ಸರಿಯಾಗಿ ಮಾಡಿಕೊಳ್ಳಲಾಗಿಲ್ಲ. ಗುಲಾಮಗಿರಿಯ ಕಾಲ ಮುಗಿದ ನಂತರ ಕುಕ್ಲಕ್ಸಕ್ಲ್ಯಾನನಂಥ ಬೀರುವಾದಿ ಬಿಳಿಯ ಸಂಘಟನೆಗಳು ಸಾವಿರಾರು ನೀಗ್ರೋಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಮಾನ ಹಾನಿ ಮಾಡಿ ಕೊಲೆಗೈದವು. ಅವರು ಭೂಹೀನರು ಹಾಗು ರಕ್ಷಣೆಯಿಲ್ಲದವರೂ ಆದುದರಿಂದ ದಕ್ಷಿಣಕ್ಕೆ ಕೈ ಮುಗಿದು ಉತ್ತರಕ್ಕೆ ಹೋದರು. ಉತ್ತರದ ನಗರಗಳಲ್ಲಿ ಲಕ್ಷಾಂತರ ಸಂಖ್ಯೆಯು ಅವರ ಭಾಗ್ಯಕ್ಕೆ 'ಘೆಟ್ಟೋ' ದಲ್ಲಿಯ ಕೊಳಕು ಜೀವನ ಲಭಿಸಿತು. ಆದರೂ ಅವರು ಕಷ್ಟಪಟ್ಟು ಶಿಕ್ಷಣ ಪಡೆದರು. ವಿಮೋಚನಾ ಯುದ್ಧ ಮಾಡಿದರು. ದೈವವಾದವನ್ನು ಕೈಬಿಟ್ಟರು. ಅವರು ಪ್ರಕ್ಷುಬ್ಧರಾಗಿ ಇಂದು 'ಬ್ಲ್ಯಾಕ್ ಇಜ್ ಬ್ಯೂಟಿಫುಲ್' ಎಂದು ಆತ್ಮ ವಿಶ್ವಾಸದಿಂದ ಹೇಳಹತ್ತಿದರು.

ಭಾರತದಲ್ಲಿಯ ಅಸ್ಪೃಶ್ಯರ ಕತೆಯೂ ಇದೇ ರೀತಿಯದಾಗಿದೆ. ನೀಗ್ರೋನಷ್ಟು ಇವರಿಗೆ ದೈಹಿಕ ಹಿಂಸೆಯಾಗಿಲ್ಲ ಎಂಬುದು ನಿಜ. ನೀಗ್ರೋಗಳಂತೆ ತುಂಬಿದ ಪೇಟೆಯಲ್ಲಿ ಕ್ರಯ ವಿಕ್ರಯವಾಗಿಲ್ಲ ಎಂಬುದೂ ನಿಜ. ಇವರ ಕೌಟುಂಬಿಕ ಸಂಸ್ಥೆಯು ಉಧ್ವಸ್ತಗೊಂಡಿಲ್ಲ. ಆದರೆ ಇವರಿಗೆ ಮಾನಸಿಕ ಹಿಂಸೆ ಸಾಕಷ್ಟಾಗಿದೆ. ಇವರು ಶಿಕ್ಷಣ ಪಡೆಯಲಾಗಲಿಲ್ಲ. ಇಂದು ಶಿಕ್ಷಿತರಾಗುತ್ತಿದ್ದವರೂ ವಿಮೋಚನಾ ಯುದ್ಧದಲ್ಲಿ

ಭಾಗಿಯಾದರು. ಅವರು ಪ್ರಕ್ಷುಬ್ಧರೂ ವಿದ್ರೋಹಿಗಳೂ ಆದರು. ಹಾಗು ಕಳೆದ ಇಪ್ಪತ್ತೈದು ವರ್ಷಗಳಿಂದ ಹಳ್ಳಿ ಪ್ರದೇಶಗಳಲ್ಲಿ ಹಿಂಸೆಯನ್ನು ಎದುರಿಸುತ್ತಾ ಬಂದಿದ್ದಾರೆ. ೧೯೬೭ರಿಂದ ೧೯೭೦ರ ಅವಧಿಯಲ್ಲಿ ೧,೧೦೦ ಜನ ಅಸ್ಪೃಶ್ಯರ ಕೊಲೆಯಾಗಿದೆ. ಆದರೆ ಇಂದಿನ ದಲಿತ ಯುವಕರು ಕ್ರಾಂತಿಕಾರಿಯಾಗಿದ್ದಾರೆ. ಹೊಸ ಅರಿವಿನಿಂದ ಅವರು ಮುನ್ನಡೆಯುತ್ತಿದ್ದಾರೆ. ತಮ್ಮ ಆತ್ಮಾಭಿಮಾನವನ್ನು ಹುಡುಕುವ ಮತ್ತು ಸಾಹಿತ್ಯದ ಮೂಲಕ ತಮ್ಮನ್ನು ಆವಿಷ್ಕರಿಸಿಕೊಳ್ಳುವ ಹೆಣಗಾಟದಲ್ಲಿದ್ದಾರೆ. ಅಮೇರಿಕೆಯ ನೀಗ್ರೋ ಹಾಗು ಭಾರತೀಯ ದಲಿತರ ಮುನ್ನಡೆ ಈ ರೀತಿಯದಾಗಿದೆ. ಅವರ ಅನುಭವಗಳು ಈ ರೀತಿಯದಾಗಿವೆ. ನೀಗ್ರೋಗಳ ಜೀವನ ಅವರ ಸಾಹಿತ್ಯದಲ್ಲಿ ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಚಿತ್ರಿತವಾಗಿದೆ. ಬೇರೆ ಬೇರೆ ಸಾಹಿತ್ಯಕಾರರು ಚೆನ್ನಾಗಿಯೇ ಕೈಯಾಡಿಸಿದ್ದಾರೆ. ಅವರ ಕವಿತೆ, ಕತೆ, ಕಾದಂಬರಿಗಳು ಸಾಕಷ್ಟು ಪ್ರಗಲ್ಭ ಹಾಗು ಸಮೃದ್ಧವಾಗಿವೆ. ಗದ್ಯ ಲೇಖನವಲ್ಲಿಯೂ ಅವರು ಸಾಕಷ್ಟು ಮುಂದುವರಿದಿದ್ದಾರೆ. ನಾಟಕದ ಕ್ಷೇತ್ರದಲ್ಲಿಯೂ ಅವರು ಕಣ್ಣು ತುಂಬುವ ಮಟ್ಟಗೆ ಪ್ರಗತಿಯನ್ನು ಸಾಧಿಸಿದ್ದಾರೆ. ನೀಗ್ರೋ ಜೀವನಕ್ಕೆ 'ಸಮುಗ್ರ' ಅನುಭವವು ಅವರ ಸಾಹಿತ್ಯದಲ್ಲಿ ಈಗ ಚೆನ್ನಾಗಿಯೇ ಆವಿಷ್ಕೃತವಾಗಿದೆ. ನೀಗ್ರೋ ಸಾಹಿತ್ಯವು ತನ್ನ ಪದ ಚಿಹ್ನೆಯನ್ನು ನಿರ್ಮಿಸಿದೆ. ಅದು ಒಂದು ದೊಡ್ಡ ಪಾಲನ್ನೂ ಪಡೆದಿದೆ. ನೀಗ್ರೋ ಕವಿತೆಯು ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ಹುಟ್ಟಿಕೊಂಡಿತು. ಇನ್ನೂರು ವರ್ಷದ ಮಳೆ ಬಿಸಿಲಿನಲ್ಲಿ, ನೆರೆತೆರೆಗಳಲ್ಲಿ ಬೆಳೆಯಿತು. ನೀಗ್ರೋಗಳ ಜಾನಪದ ಸಾಹಿತ್ಯವಂತೂ ಬಹಳ ಹಳೆಯದು ಹಾಗೂ ಸಮೃದ್ಧವಾದುದೂ ಆಗಿದೆ. ಸಂಗೀತದ ಕ್ಷೇತ್ರದಲ್ಲಿಯಂತೂ ಬಿಳಿಯರಿಗೆ ಅವರನ್ನು ಮೀರಿಸಲಾಗಿಲ್ಲ. ೧೮೫೩ರಲ್ಲಿ ವಿಲ್ಯಮ್ ವೇಲ್ಸ ಪ್ರಾಉನ್‌ನ 'ಕ್ಲೊಟೇಲ್ ಆರ್‌ದ ಪ್ರೆಸಿಡೆಂಟ್ಸ ಡಾಕ್ಟರ್' ಎಂಬ ಕಾದಂಬರಿ ಪ್ರಸಿದ್ಧವಾಯಿತು. ಹತ್ತೊಂಬತ್ತನೇ ಶತಮಾನದ ಕೊನೆಯವರೆಗೆ ನೀಗ್ರೋ ಸಾಹಿತ್ಯ ನಿರ್ಮಾಣದ ವೇಗ ಮಂದವಾಯಿತು. ಮುಂದೆ ಅದು ಅತಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆದು ಬಂತು.

ತಮ್ಮ ಸಾಹಿತ್ಯ ನಿರ್ಮಾಣಕ್ಕಾಗಿ ನೀಗ್ರೋಗಳಿಗೆ ಸ್ವತಃ ಬರೆಯಲಾಗದಿದ್ದ ಕಾಲದಲ್ಲಿ ಬಿಳಿಯರು ಅವರ ಜೀವನ ಚಿತ್ರಣವನ್ನು ತಮ್ಮ ಸಾಹಿತ್ಯದಲ್ಲಿ ತರುವ ಪ್ರಯತ್ನ ಮಾಡಿದರು. ಮತ್ತು ಅನೇಕ ಸಂದರ್ಭಗಳಲ್ಲಿ ಅವರು ನೀಗ್ರೋ ಜೀವನವನ್ನು ತಮ್ಮ ಸಾಹಿತ್ಯದಲ್ಲಿ ವಿಕೃತ ಸ್ವರೂಪದಿಂದ ತಂದರು. ಕೆಲವರು ತಿರಸ್ಕಾರದ ದೃಷ್ಟಿಯಿಂದ ಚಿತ್ರಿಸಿದರೆ ಇನ್ನು ಕೆಲವರು ಭೂತದಯಾವಾದದ ದೃಷ್ಟಿಯಿಂದ ಚಿತ್ರಿಸಿದರು. 'ಅಂಕಲ್ ಟಾಮ್ಸ ಕೆಬಿನ್' ಕಾದಂಬರಿಯು ಇಡೀ ಅಮೇರಿಕೆಯನ್ನು ಕಣ್ಣೀರು ಸುರಿಸುವಂತೆ ಮಾಡಿತು. ಇಪ್ಪತ್ತನೇ ಶತಮಾನದಲ್ಲಿಯಂತೂ ಅನೇಕ ಸಮರ್ಥ ಲೇಖಕರು ನೀಗ್ರೋನಿಗೆ ಕೈಗೆತ್ತಿಕೊಂಡರು. ಯುಜಿನಾ ಓನಿಲ್, ವಿಲಿಯಂ ಫಾಕನರ್, ಮಾರ್ಕಟ್ವೇನ್ ಇವರ ಹೆಸರುಗಳನ್ನು ಪ್ರಮುಖವಾಗಿ ಉಲ್ಲೇಖಿಸಲಾಗುತ್ತದೆ.

ದಲಿತ ಸಾಹಿತ್ಯದ ಪ್ರಗತಿ ಇನ್ನೂ ಸಾಕಷ್ಟು ಆಗಿಲ್ಲ. ಅಸ್ಪೃಶ್ಯರ ಜೀವನದ 'ಸಮಗ್ರ' ಅನುಭವವು ಇನ್ನು ಅವರ ಸಾಹಿತ್ಯದಲ್ಲಿ ಇಳಿದು ಬಂದಿಲ್ಲ. ಸಾಹಿತ್ಯವು ಸಮಾಜದ ಜೀವನ ಚರಿತ್ರೆಯಾಗಿರುತ್ತದೆ. ದಲಿತ ಸಮಾಜದ ಜೀವನ ಚರಿತ್ರೆಯು ಇನ್ನೂ ಅತಿ ಹೆಚ್ಚಿನ ಪ್ರಮಾಣದಲ್ಲಿ ಅಧಿಕವಾಗಿಯೇ ಇದೆ. ಕಳೆದ ೧೫-೨೦ ವರ್ಷಗಳಿಂದ ದಲಿತ ಸಾಹಿತ್ಯ ಪ್ರಗತಿಗೆ ವೇಗ ಬರುತ್ತಿದೆ. ಅವರ ಕತೆ, ಕವಿತೆಗಳು ಹೇಗೆ ಹೇಗೋ ೫೨-೬೦ ವರ್ಷಗಳ ಹಿಂದೆ ಜನ್ಮ ತಳೆದವು. ಅಸ್ಪೃಶ್ಯರ ಜಾನಪದ ಸಾಹಿತ್ಯವು ಇನ್ನೂ ಬಂದೇ ಇಲ್ಲ. ಅವರ ಜಾನಪದ ಸಾಹಿತ್ಯವು ಯಾವ ಪ್ರಮಾಣದಲ್ಲಿ ನಿರ್ಮಾಣವಾಯಿತೆಂಬುದು ಇನ್ನೂವರೆಗೂ ತಿಳಿದಿಲ್ಲ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ದಲಿತ ಜೀವನದ ಕಲಾತ್ಮಕ ಆವಿಷ್ಕಾರವು ಸಾಕಷ್ಟು ಪ್ರಮಾಣದಲ್ಲಿ ಆಗಿಲ್ಲ.

ಅಮೇರಿಕೆಯ ಬಿಳಿಯ ಲೇಖಕರು ನೀಗ್ರೋ ಜೀವನವನ್ನು ತಮ್ಮ ಸಾಹಿತ್ಯದಲ್ಲಿ ಚಿತ್ರಿಸಲು ಪ್ರಯತ್ನಿಸಿದಂತೆ ಇಲ್ಲಿಯ ಉಚ್ಚವರ್ಣದ ಹಿಂದೂ ಲೇಖಕರು ಮಾಡಲಿಲ್ಲ. ಅಪವಾದ ಸ್ವರೂಪವಾಗಿ ಕೆಲವು ಲೇಖಕರು ಸಿಗುವುದೂ ಉಂಟು. ಅಸ್ಪೃಶ್ಯರು ಹಿಂದೂ ಸಮಾಜದಲ್ಲಿ ಉಪೇಕ್ಷಿತರೂ ಬಹಿಷ್ಕೃತರೂ ಆಗಿರುವಂತೆ ಅವರು ಇಂದಿನ ಸಾಹಿತ್ಯದಲ್ಲಿಯೂ ಕೂಡ ಆಗಿದ್ದಾರೆ. ಅಸ್ಪೃಶ್ಯರು ಹಿಂದೂ ಸಮಾಜದಲ್ಲಿಯ 'ಬಹಿಷ್ಕೃತ'

ನಾವು

ನಾವು
ಭಸ್‌ನಾಲಾದ ಗಣಿಯಲ್ಲಿ
ಇಳಿದಿಳಿದು ಒಂದು ದಿನ ಇದ್ದಲಿಯಾದಾಗ,
"ಅವರು ಸತ್ತರು" ಎಂದು ಜನ ಅಂದರು.

ನಾವು ಸತ್ತಿಲ್ಲ
ಬೇಕೆನಿಸಿದರೆ ಬಂದು ನೋಡಿ,
ಅದೇ ಭಸ್‌ನಾಲಾದ ಗಣಿಯಲ್ಲಿ
ನಾವಿನ್ನೂ ದುಡಿಯುತ್ತಲೇ ಇದ್ದೇವೆ.

ಆದರೆ ಗಣಿಯ ದಾಖಲೆ ಪುಸ್ತಕದಲ್ಲಿ
ನಮ್ಮ ಹೆಸರುಗಳು ಬದಲಾಗಿವೆ.

ಕಾನ್‌ಪುರದ ಮಿಲ್ಲೊಂದರಲ್ಲಿ
ನಮಗೆ ಗುಂಡಿಕ್ಕಲಾಯಿತು
ಆಗ ನಾವು ಸಾಯಲಿಲ್ಲ.

ಇನ್ನೂ ನಮ್ಮ ಕೈಗಳು
ಯಂತ್ರಗಳೊಡನೇ ಇವೆ.

ಆದರೆ ಮಿಲ್ಲಿನ ದಾಖಲೆ ಪುಸ್ತಕದಲ್ಲಿ
ನಮ್ಮ ಹೆಸರುಗಳು ಬದಲಾಗಿವೆ.

ಪಂತ ನಗರದಲ್ಲಿ ನಾವು
ಸಾವಿನೊಡನೆ ಮಾತನಾಡಿದೆವು
ಅಂದರೆ ನಾವು ಸತ್ತ ಹಾಗೇನಲ್ಲ
ನಾವು ಅಲ್ಲಿ ದುಡಿಯುತ್ತಲೇ ಇದ್ದೇವೆ.

ಆದರೆ ಅಲ್ಲಿನ ದಾಖಲೆ ಪುಸ್ತಕದಲ್ಲಿ
ನಮ್ಮ ಹೆಸರುಗಳು ಬದಲಾಗಿವೆ.

ಬೆಳ್ಳಿಯ ಧಣಿಗಳು
ನಮ್ಮನ್ನು ಸುಟ್ಟರು
ನಾವು ಸಾಯಲಿಲ್ಲ
ಮತ್ತೆ ಎದ್ದು ನಿಂತೆವು.

ಆದರೆ ಬೆಳ್ಳಿಯ ಜನ
ನಮ್ಮನ್ನು ಬೇರೆ ಹೆಸರಿನಿಂದ
ಕರೆಯುತ್ತಿದ್ದಾರೆ.

— ರಮಜಾನ ದರ್ಗಾ

ಮನುಷ್ಯರಾಗಿದ್ದಾರೆ. ಈ ಮನುಷ್ಯರಿಗೆ ಪುರೋಹಿತ ಸಾಹಿತ್ಯದಲ್ಲಿ ಯಾವ 'ಮೆಟ್ಟಿಲು' ಸಿಗಲಿಲ್ಲ. ದಲಿತ ಜೀವನದ ಆವಿಷ್ಕಾರಕ್ಕಾಗಿ ಭಾರತದಲ್ಲಿ ಇನ್ನೂ ಯುಜಿನ್ ಓನಿಲ್ ಅಥವಾ ಫಾಕನರ್ ಜನ್ಮ ತಳೆಯಬೇಕಾಗಿದೆ. ದಲಿತ ಮನಸ್ಸಿಗೆ ಈ ಮಾತಿನಿಂದ ಅತಿ ಖೇದ ಉಂಟಾಗುತ್ತದೆ. ಆದ್ದರಿಂದ ಹಿಂದೂ ಸಾಮಂತಶಾಹಿಗಳನ್ನು ಸಂಬೋಧಿಸಿ ವಾಮನ ನಿಂಬಾಳಕರ ಹೇಳುತ್ತಾರೆ—

'ಈ ಊರ ಪೌಳಿಯ ಆಚೆಯ ಬಣಗಿದ,
ರೋಷಿದ ಜೀವನ ವಸ್ತು ಆಗಲಿಲ್ಲ ನಿಮ್ಮ
ಕವಿತೆಗೆ."

ಮತ್ತೆ ಅವರು ಕೇಳುತ್ತಾರೆ—

'ಅದು ಹೇಗೆ ಹಳಹಳಿಸಲಿಲ್ಲ ನಿಮ್ಮ ಮನ ?
ಅದು ಹೇಗೆ ಬರೆಯಲಿಲ್ಲ ನೀವವರ ಕಣ್ಣೀರ
ಗೀತೆಯನು ?"

ಅಸ್ಪೃಶ್ಯರ ಜೀವನದ ಕಡೆಗೆ ಕಣ್ಣಿನ ಮೇಲೆ ಮುಸುಕು ಹಾಕಿಯೂ ಕೂಡ ಉಚ್ಚವರ್ಣದ ಸಾಹಿತ್ಯಕಾರರು ನೋಡಲಿಲ್ಲ. ರಾಮರಾಜ್ಯವನ್ನು ಹೊಗಳುವ ಮಹಾಕವಿ ವಾಲ್ಮೀಕಿಯನ್ನು ಸಂಬೋಧಿಸಿ ದಯಾ ಪವಾರ ಹೇಳುತ್ತಾರೆ—

'ಹೇ, ಮಹಾ ಕವಿಯೇ !
ನಿನಗೆ ಮಹಾಕವಿಯೆಂದು ಹೇಗೆ ಹೇಳುವುದು?
ಈ ಅನ್ಯಾಯ ಅತ್ಯಾಚಾರವ ಆಗಸೆ ಬಾಗಿಲಿಗೆ
ಕಟ್ಟುವ
ಒಂದು ಶ್ಲೋಕವನ್ನಾದರೂ ನೀನು ರಚಿಸಿ
ದ್ದಾದರೆ..........
.... ನಿನ್ನ ಹೆಸರು ಹೃದಯದಲ್ಲಿ
ಕೊರೆದಿಡುತ್ತಿದ್ದೆ ....

ಮರಾಠಿ ಸಾಹಿತ್ಯ ಪರಿಷತ್‌ದಂಥ ಸಾಹಿತ್ಯದ ಭವಿಷ್ಯದ ಹೊಣೆ ಹೊರುವ ಸಂಸ್ಥೆಯೂ ಕೂಡ ದಲಿತ ಜೀವನದ ಸಾಹಿತ್ಯ ಸೃಷ್ಟಿಯ ದೃಷ್ಟಿಯಿಂದ ಹೆಚ್ಚಿನ ಗಮನ ಹರಿಯಿಸಿಲ್ಲ. ಮರಾಠಿ ಸಾಹಿತ್ಯ ಸಮ್ಮೇಲನದ ವ್ಯಾಸ ಪೀಠದಿಂದ ಅನೇಕ ಸಲ ಅಸಾಹಿತ್ಯದ ವಿಷಯವಾಗಿ ಕೂಡ ಸಾಕಷ್ಟು ತವಡು ಕುಟ್ಟುವ ಕೆಲಸ ಆಗಿದೆ. ಆದರೂ ಮರಾಠಿ ಸಾಹಿತ್ಯದಲ್ಲಿ ಅಸ್ಪೃಶ್ಯರ ಜೀವನ ಚಿತ್ರಣ ಆದೇಕೆ ಆಗಲಿಲ್ಲ? ಅದು ಹೇಗೆ ಚಿತ್ರಿಸಬಹುದು ಎಂಬ ಬಗ್ಗೆಯೂ ಚರ್ಚೆ ನಡೆದದ್ದು ಎಂದೂ ಕೇಳಿಲ್ಲ. ದಲಿತರ ವಿಮೋಚನೆಗಾಗಿ ಯುದ್ಧ ಸಾರಿದ ಫುಲೆಯವರ ಕಾಲದಲ್ಲಿ, ಶಾಹೂ ಮಹಾರಾಜರ ಕಾಲದಲ್ಲಿ ಅಲ್ಲದೆ ಸ್ವತಃ ಡಾ. ಬಾಬಾಸಾಹೇಬ ಅಂಬೇಡಕರರ ಕಾಲದಲ್ಲಿಯೂ ಕೂಡ ಯಾವ ಸಾಹಿತಿಯೇ ಆಗಲೀ ಸಾಹಿತ್ಯ ಪರಿಷತ್ತೇ ಆಗಲೀ ದಲಿತ ಜೀವನದ ಸುದ್ದಿ ಎತ್ತಲಿಲ್ಲ. ನನಗೆ ತಿಳಿದಂತೆ ೧೯೫೦ರಲ್ಲಿ ಸೇರಿದ ಮರಾಠಿ ಸಾಹಿತ್ಯ ಸಮ್ಮೇಲನದ ಅಧ್ಯಕ್ಷರ ಭಾಷಣದಲ್ಲಿ ಮೊದಲ ಬಾರಿಗೆ ದಲಿತ ಸಾಹಿತ್ಯದ ಬಗ್ಗೆ ಉಲ್ಲೇಖಿಸಲಾಯಿತು. ಆದರೆ ಈ ಸಾಹಿತ್ಯ ಸಮ್ಮೇಲನಕ್ಕೆ ಅಷ್ಟೊಂದು ಕಾಳಜಿ ವಹಿಸಬೇಕೆಂದು ಅನಿಸಲಿಲ್ಲ. ಏಕೆಂದರೆ ದಲಿತ ಸಾಹಿತ್ಯದ ಚರ್ಚೆಯನ್ನು 'ಅಸ್ಮಿತಾ ದರ್ಶನ" ವು ಸರ್ವ ಪ್ರಥಮವಾಗಿ ೧೯೬೭ ರಿಂದಲೇ ಪ್ರಾರಂಭಿಸಿತು. ದಲಿತ ಕತೆ ಕಾದಂಬರಿಗಳ ಮೊದಲ ಶಿಲ್ಪಿಗಳು ಅಣ್ಣಾಭಾವೂ ಸಾಠೆ, ನಾ.ರಾ. ಶೇಂಡೆ ಮತ್ತು ಶಂಕರರಾವ ಖರಾತ ಆಗಿದ್ದಾರೆ. ದಲಿತರ ವ್ಯಥೆ ಹಾಗು ವೇದನೆಗಳಿಗೆ ಬಾಯಿಬಿಡಿಸುವ ಮತ್ತು ಸಾಹಿತ್ಯ ಸೃಷ್ಟಿ ಮಾಡುವ ಕೆಲಸವನ್ನು ಈ ಲೇಖಕರು ಚೆನ್ನಾಗಿಯೇ ಮಾಡಿದ್ದಾರೆ. ದಲಿತರು ಈ ಲೇಖಕರ ಕತೆ ಕಾದಂಬರಿಗಳ ನಾಯಕರಾದರು. ದಲಿತ ಜೀವನದಲ್ಲಿಯ ಅಗತಿಕತೆ, ವಿವಶತೆ, ಪ್ರಕ್ಷೋಭೆ, ರೊಚ್ಚು, ಮತ್ತು ದಾಹಕತೆ ಈ ಎಲ್ಲವುಗಳು ಈ ಲೇಖಕರ ಸಾಹಿತ್ಯದಲ್ಲಿ ಇಳಿದು ಬಂದವು. ಅಣ್ಣಾ ಭಾವೂ ಅವರ 'ಫಕಿರಾ' ಹಾಗು 'ವಾರಣೇಚಾ ವಾಘ' ಈ ಎರಡು ಕಾದಂಬರಿಗಳಂತೂ ಮರಾಠಿ ವಾಚಕರ ಮನೆ ಮಾತಾದವು. 'ಮಾಣುಸಕೀಚೀ ಹಾಕ' ಮತ್ತು 'ಬಲುತೆದಾರ' ಈ ಸಾಹಿತ್ಯ ಕೃತಿಗಳು ಖರಾತರನ್ನು ಖ್ಯಾತಗೊಳಿಸಿದವು. ಕಿಸನ ಫಾಗು ಬನಸೋಡರು ದಲಿತರ ಮೂಕ ವ್ಯಥೆಗೆ ೫೦-೬೦ ವರ್ಷಗಳ ಹಿಂದೆಯೇ ತಮ್ಮ ಕವಿತೆಯ ಮೂಲಕ ಮಾತಾಡಲು ಹಾಡಲು ಹಚ್ಚಿದರು.

ಅಮೇರಿಕದ ನೀಗ್ರೋ ಸಾಹಿತ್ಯವು ನಿಜವಾದ ಪ್ರಗತಿಯನ್ನು ಸಾಧಿಸಿದ್ದು ಮೊದಲನೇ ಮಹಾಯುದ್ಧದ ನಂತರ. ಅದಕ್ಕೂ ಮೊದಲು ಪಾಲ್ ಲಾರೆನ್ಸ ಡನಬಾರ್, ಚಾರ್ಲ್ಸ ಚೆಸ್ಟನಟ್ ಮತ್ತು ಜೇಮ್ಸ ವೆಲ್ಡನ್ ಜಾನ್ಸನ್ ಇವರುಗಳು ಕವಿತೆ ಮತ್ತು ಕಾದಂಬರಿಗಳ ಮೂಲಕ ಕಣ್ಣು ತುಂಬುವಂಥ ಮಿಂಚನ್ನು ಹರಿಯಿಸಿದ್ದರು, ನೀಗ್ರೋಗಳ ಸಮಾಜ ಜೀವನದಲ್ಲಿ ಕಲೆ ಮತ್ತು ಸಮಾಜ ಪ್ರಜ್ಞೆಯ ಸ್ವರವೇ ಹೊರ ಹೊಮ್ಮಿತು. ಇದೇ ಕಾಲದಲ್ಲಿ 'ನವ ನೀಗ್ರೋ' ಗಳು ಹೊರ ಬಂದರು. ತರುಣ ಲೇಖಕರ ಪರವಾಗಿ ಲ್ಯಾಗ್ಸನ್ ಹ್ಯೂಸ್ ಎಂಬ ಕವಿ ಕಾದಂಬರಿಕಾರನು ನೀಗ್ರೋ ಸಾಹಿತ್ಯದ ಘೋಷಣಾ ಪತ್ರವನ್ನು ನಿವೇದಿಸಿದನು.

ಈ ವರೆಗೂ ನೀಗ್ರೋ ಸಾಹಿತ್ಯವು ಗೌರವರ್ಣೀಯವಾಗಿತ್ತು. ಕಪ್ಪು ದೇಹದಿಂದ ಬಿಳಿಯ ಮನಸ್ಸೇ ಆ ಮೂಲಕ ವ್ಯಕ್ತವಾಗುತ್ತಿತ್ತು. ನೀಗ್ರೋ ಲೇಖಕರು ಈಗ ತಮ್ಮ ವಿಶಿಷ್ಟ ಭಾಷೆಯಲ್ಲಿ ತಮ್ಮ ಜೀವನಕ್ಕೆ ಬಣ್ಣ ತುಂಬಲು ಪ್ರಾರಂಭಿಸಿದರು. ನೀಗ್ರೋಗಳ ಕಪ್ಪು ಚರ್ಮದ ಮೇಲೀ ಮನಸ್ಸಿನ ಮೇಲೆ ' white wash ' ಮಾಡುವ ವಿಚಾರ ಅವರು ಬಿಟ್ಟರು. ೧೯೪೦ರಲ್ಲಿ ರಿಚರ್ಡ್‌ರಾಯಿಟನ್‌ನ 'ನೇಟಿವ್ ಸನ್' ಎಂಬ ಕಾದಂಬರಿ ಪ್ರಕಟವಾಯಿತು. ಚಿಕ್ಯಾಗೋದ ಘೆಟ್ಟೋ ಜೀವನವನ್ನು ಆಧರಿಸಿ ಬರೆದ ಈ ಕಾದಂಬರಿ ರಿಚರ್ಡ್‌ರಾಯಿಟನಿನ ಅಮೇರಿಕೆಯ ದಾಸ್ತಾವಸ್ತುಯನ್ನಾಗಿ ಮಾಡಿತು. ಈ ಕಾದಂಬರಿಯ ವಿದ್ರೋಹಿ ನೀಗ್ರೋ ನಾಯಕನು ಅಮೇರಿಕೆಯ ಸಂಸ್ಕೃತಿಗೆ ಅತಿ ದೊಡ್ಡ ಆಘಾತವನ್ನುಂಟು ಮಾಡಿದ. ನೀಗ್ರೋಗಳ ವಿದ್ರೋಹಿ ಸಾಹಿತ್ಯದ ಪ್ರಾರಂಭ ನಿಜವಾದ ಅರ್ಥದಲ್ಲಿ ಈ ಕಾದಂಬರಿಯಿಂದಲೇ ಆಗುತ್ತದೆ. ೧೯೫೨ರಲ್ಲಿ ರಾಲ್ಫ ಎಲಿಸನ್‌ನ ಕಾದಂಬರಿ 'ಇನ್‌ವಿಜಿಬಲ್ ಮನ್' ಪ್ರಕಟವಾಯಿತು. ಈ ಕಾದಂಬರಿಯು ನೀಗ್ರೋ ಜೀವನದಲ್ಲಿಯ ಮೂರೂವರೆ ಶತಮಾನದ ಅಂಧಕಾರವನ್ನು ಬೆಳಕಿಗೆ ತಂದಿದೆ. ಕಲಾತ್ಮಕ ದೃಷ್ಟಿಯಿಂದಲೂ ಈ ಕಾದಂಬರಿ ಅತ್ಯಂತ ಸಮರ್ಥವಾಗಿದೆ. ಭಾಗ್ಯದೊಂದಿಗೆ ಸೆಣಸಾಡುವ ಜೇಮ್ಸ ಬಾಲ್ಡವಿನ್‌ನೂ ಕೂಡ ಇದೇ ಕಾಲಕ್ಕೆ ನೀಗ್ರೋ ಜೀವನದ ಧಗಧಗಿಸುವ ಪ್ರಕ್ಷೋಭೆಯನ್ನು ತನ್ನ ಅತ್ಯಂತ ಸಮರ್ಥವಾದ ಲೆಕ್ಕಣಿಕೆಯಿಂದ ಓದುಗರ ಅರಿವಿಗೆ ತಂದು ಕೊಟ್ಟನು. ವಿಶೇಷತಃ 'ಗೋ ಟೆಲ್ ಇಟ್ ಆನ್ ದಿ ಮೌಂಟೇನ್' ಹಾಗು 'ಅನದರ್ ಕಂಟ್ರಿ' ಈ ಎರಡು ಕಾದಂಬರಿಗಳು ಬಾಲ್ಡವಿನ್‌ನಿಗೆ 'ಲೇಜಂಡ್' ಮಾಡಿದವು. ಲಾರೆನ್ ಹ್ಯಾಸಬರಿ ಎಂಬ ಲೇಖಕಿಯು 'ಎ ರೈಸಿಂಗ್ ಇನ್ ದ ಸನ್' ಎಂಬ ನಾಟಕದ ಮೂಲಕ ನಾಟಕ

ಕ್ಷೇತ್ರದಲ್ಲಿ ತುಂಬ ಖ್ಯಾತಿಯನ್ನು ಗಳಿಸಿದಳು. ಗ್ವೆಂಡಲ್ ಬುಕ್ಸ ಎಂಬ ಕವಯಿತ್ರಿಗೆ ಪುಲಿಟ್ಝರ ಪಾರಿತೋಷಕ ಲಭಿಸಿತು. ಇಂದು ವಿಲಿಯಂ ಡೆಂಬಿ, ಜಾನ್ ವಿಲಿಯಮ್ಸ, ನೆಲಸನ್ ಕೇಲಿ, ಲುರಾಯ್ ಜೋನ್ಸ ಈ ಲೇಖಕರು ಪ್ರಸಿದ್ಧಿಯಲ್ಲಿದ್ದಾರೆ. ೧೯೬೦ರ ನಂತರದ ನೀಗ್ರೋ ಲೇಖಕರು ವಿದ್ರೋಹವಾದಕ್ಕೆ ಬಲಿಯಾಗಿದ್ದಾರೆ.

ದಲಿತ ಸಾಹಿತ್ಯದ ನಿಜವಾದ ಪರಿಚಯ ಮರಾಠಿ ವಾಚಕರಿಗೆ ಆದದ್ದು ಕಳೆದ ದಶಕದಲ್ಲಿ. 'ದಲಿತ ಸಾಹಿತ್ಯ' ಎಂಬ ಶಬ್ದ ಪ್ರಯೋಗವೂ ಕೂಡ ತೀರ ಇತ್ತೀಚಿನದು. ದಲಿತ ಸಾಹಿತ್ಯವು ಪ್ರಮುಖವಾಗಿ ಮುಂದೆ ಬಂದುದು ಸಮಾಜ ಕ್ರಾಂತಿಯ ಹೊಸ ಅರಿವನ್ನು ಹೊತ್ತು. ಅಸ್ಪೃಶ್ಯರ ಜೀವನದ ಕಡೆಗೆ ಓದುಗರ ನಿಜವಾದ ಗಮನ ಸೆಳೆದದ್ದು ಬಾಬುರಾವ ಬಾಗುಲರ 'ಜೇವ್ಹಾ ಮೀ ಜಾತ ಚೋರಲಿ' (ನಾನು ಜಾತಿ ಕದ್ದಾಗ) ಎಂಬ ಕಥಾ ಸಂಗ್ರಹದಿಂದ. ದಲಿತ ಸಾಹಿತ್ಯವು ಒಂದು ಹೊಸ ಮತ್ತು ವಿದ್ರೋಹಿ ಸ್ವರೂಪ ಪಡೆದದ್ದು ಬಾಬುರಾವ ಅವರ ಬರಹದ ಮೂಲಕ ಹಾಗೂ ಆ ಹೊಸ ವಿದ್ರೋಹಿ ಸ್ವರೂಪವು ತೋರಿದ ದಿಕ್ಕಿನ ಕಡೆಗೆ ದಾರಿಯನ್ನು ಕ್ರಮಿಸುತ್ತಿರುವವರು ಅನೇಕರು. ಬಾಬುರಾವ ಬಾಗುಲರ 'ಮರಣ ಸ್ವಸ್ತ ಹೋತ ಆಹೇ' (ಸಾವು ಅಗ್ಗವಾಗುತ್ತಿದೆ) ಎಂಬ ಕಥಾ ಸಂಕಲನದಿಂದ ದಲಿತ ಮನಸ್ಸಿನಲ್ಲಿ ಹುದುಗಿದ್ದ ಎಲ್ಲ ಕಿಡಿಗಳು ಸ್ಫೋಟಗೊಂಡವು. ದಲಿತರ ಗುಡಿಸಲು ಜೀವನವನ್ನೆಲ್ಲ ಅವರು ತಮ್ಮ ಕತೆಗಳ ಮೂಲಕ ಸಮರ್ಥವಾಗಿ ಚಿತ್ರಿಸಿದ್ದಾರೆ. ಅದರಂತೆ ದಲಿತ ಮತ್ತು ಶೋಷಿತ ಕಾರ್ಮಿಕ ಪ್ರಮುಖ ವಕ್ತಾರರೆಂದರೆ ನಾರಾಯಣರಾವ್ ಸುರ್ವೆ. ಶಬ್ದವನ್ನು ಶಸ್ತ್ರಗಳಂತೆ ಬಳಸಬಹುದು ಎಂದು ನಾರಾಯಣರಾವ್ ಸುರ್ವೆಯವರು ತಮ್ಮ ಕವಿತೆಗಳ ಮೂಲಕ ದಲಿತ ಕವಿಗಳಿಗೆ ಕಲಿಸಿದರು. ನಾರಾಯಣರಾವ್ ಸುರ್ವೆಯವರ ಸ್ವರೂಪವೂ ಬಂಡಾಯಗಾರಿಯಾಗಿದೆ. ಆದರೆ ಅದರ ಹಿಂದಿರುವ ತತ್ವ ಜ್ಞಾನವು ಸಾಮಾಜಿಕ ಬಂಧನದ್ದಾಗಿದೆ.

ನೀಗ್ರೋ ಲೇಖಕರಿಗೆ ಈ ರೀತಿಯ ಪಾತ್ರ ವಹಿಸಲು ೪೦-೫೦ ವರ್ಷಗಳ ಕಾಲ ಬೇಕಾಯಿತು. ದೀರ್ಘವಾದ ಮಾರ್ಗಕ್ರಮಣದ ನಂತರ ನೀಗ್ರೋ ಲೇಖಕರು ವಿದ್ರೋಹಾತ್ಮಕ ಕ್ಷಿತಿಜದ ಮೇಲೆ ಬಂದರು. ದಲಿತ ಸಾಹಿತ್ಯದ ಪ್ರಾರಂಭವು ಮೂಲತಃ ಈ ವಿದ್ರೋಹಾತ್ಮಕ ಕ್ಷಿತಿಜದಿಂದಲೇ ಆಗುತ್ತದೆ. ಇದರ ರಹಸ್ಯವೇನು? ಇದರ ರಹಸ್ಯ ಡಾ. ಬಾಬಾ ಸಾಹೇಬರ ವೈಚಾರಿಕತೆಯಲ್ಲಿ, ಅವರ ಮುಂದಾಳತ್ವದಲ್ಲಿ ಹಾಗೂ ಅಸ್ಪೃಶ್ಯತೆಗಾಗಿ ಅವರು ಹೂಡಿದ ವಿಮೋಚನಾ ಯುದ್ಧದಲ್ಲಿ ಕಾಣ ಸಿಗುತ್ತದೆ. ಅದರೊಂದಿಗೆಯೇ ದಲಿತ ಸಾಹಿತ್ಯ ಚಳುವಳಿ ಪ್ರಾರಂಭವಾಗಿದ್ದು ಆ ಯುಗದಲ್ಲಿಯೂ ಅದರ ರಹಸ್ಯ ಹುಡುಕಬೇಕಾಗುತ್ತದೆ. ಅಂಬೇಡಕರರು ಮರಾಠಿ ದಲಿತ ಲೇಖಕರಿಗೆ 'ಹೊಸ' ಮನಸ್ಸನ್ನು ಕೊಟ್ಟರು. ಈ ಕ್ರಾಂತಿಕಾರಿ ಯುಗವು ಅವರಿಗೆ ಹೊಸ ಸ್ಫೂರ್ತಿ ಒದಗಿಸಿತು. ಮತ್ತು ಈ ಹೊಸ ಮನಸ್ಸಿನ ಅರಿವು ಕತೆ, ಕಾವ್ಯಗಳ ಮೂಲಕ ವ್ಯಕ್ತವಾಗಹತ್ತಿತು. ಆ ಅರಿವನ್ನು ಹೆಚ್ಚು ತೀವ್ರ, ಹೆಚ್ಚು ಉತ್ಕಟವಾಗಿ ಹಾಗು ಹೆಚ್ಚು ಪ್ರವಾಹ ಪೂರ್ಣವಾಗಿ ಮಾಡಿದ್ದು 'ಅಸ್ಮಿತಾ ದರ್ಶನ' ಎಂಬ ಪತ್ರಿಕೆ. 'ಅಸ್ಮಿತಾ ದರ್ಶನ'ದ ಹುಟ್ಟು ದಲಿತ ಸಾಹಿತ್ಯ ಚರಿತ್ರೆಯಲ್ಲಿಯ ಮೊದಲನೇ 'ವಾಟರ್ ಶೆಡ್' ಆಗಿದೆ ಎಂದು ನಾನು ಭಾವಿಸುತ್ತೇನೆ. 'ಅಸ್ಮಿತಾ ದರ್ಶನದ ಸಂಪಾದಕ ಪ್ರಾ. ಗಂಗಾಧರ ಪಾನತಾವಣೆ ಹೀಗೆ ಬರೆಯುತ್ತಾರೆ-'ಸಾಹಿತ್ಯ ಸಂಪತ್ತು ಶ್ರೀಮಂತರ ಸರಕಲ್ಲ. ಒತ್ತೆ ಬೀಳುವ ಅನುಭವಕ್ಕೆ ಇಲ್ಲಿ ಶರೀರವಿಲ್ಲ. ಸಾಮಾಜಿಕ ವಾಸ್ತವವಾದದ ಮುಸುಕು ಹಾಕಿರುವ ಶಬ್ದಾಡಂಬರಿಗಳಿಗೆ ಇಲ್ಲಿ ಜೀವನವಿಲ್ಲ. ಈ ವ್ಯವಹಾರದಲ್ಲಿ, ಸ್ಪಷ್ಟ, ಗಂಭೀರ ಜೀವನ ಸತ್ಯಕ್ಕೆ ಮಾತ್ರ ಸಾವಿಲ್ಲ?' ಈ ಮಾತಿನಿಂದ ದಲಿತ ಸಾಹಿತ್ಯದ ಹೆಚ್ಚಿನ ಉದ್ದೇಶ ಸ್ಪಷ್ಟವಾಗುವುದಲ್ಲದೆ ದಿಕ್ಕೂ ಕೂಡ ಹೆಚ್ಚು ಸ್ಪಷ್ಟವಾಗುತ್ತದೆ.

ದಲಿತ ಸಾಹಿತ್ಯದ ಪ್ರಯೋಜನದ ಬಗ್ಗೆಯೂ ಅನೇಕ ವಿಧವಾಗಿ ಶಂಕಿಸಲಾಗುತ್ತಿದೆ. ಸಾಹಿತ್ಯವು ಅಂಥ ಘೋಷಣಾ ಪತ್ರವೇನೂ ಆಗಿರುವುದಿಲ್ಲ. ಒಂದು ವಿಶಿಷ್ಟ ಸಮಾಜ ಜೀವನದ ಒಳಿತು-ಕೆಡುಕು ಅನುಭವ ಪಡೆದ ಲೇಖಕನ ಸಾಹಿತ್ಯ ನಿರ್ಮಾಣದ ಪ್ರಯೋಜನ ಹಾಗೂ ದಿಕ್ಕನ್ನೂ ಕೂಡ ತಿಳಿಸಿ ಹೇಳಬೇಕಾಗುತ್ತದೆ. ಆ ದೃಷ್ಟಿಯಿಂದ ೧೯೭೧ರಲ್ಲಿ ಮಹಾಡದಲ್ಲಿ ಜರುಗಿದ 'ಮಹಾರಾಷ್ಟ್ರ ಬೌದ್ಧ ಸಾಹಿತ್ಯ ಸಮ್ಮೇಲನ'ದ ಅಧ್ಯಕ್ಷ ಪೀಠದಿಂದ ಮಾಡಿದ ಭಾಷಣಕ್ಕೆ ದಲಿತ ಸಾಹಿತ್ಯದ ಘೋಷಣಾ ಪತ್ರ ಎಂದು ಹೇಳಲು ಅಡ್ಡಿಯಿಲ್ಲ.

'ದಲಿತ ಸಾಹಿತ್ಯವೆಂದರೆ ಸೇಡು ತೀರಿಸಿಕೊಳ್ಳುವವರ ಸಾಹಿತ್ಯವಲ್ಲ. ದಲಿತ ಸಾಹಿತ್ಯವು ದ್ವೇಷವನ್ನು ಹೆಚ್ಚಿಸುವ ಸಾಹಿತ್ಯವಲ್ಲ. ದಲಿತ ಸಾಹಿತ್ಯವು ಮನುಷ್ಯನ ಮಹತ್ವನ್ನು ಮತ್ತು ವಿಮೋಚನೆಯನ್ನು ಪ್ರಥಮತಃ ಪುರಸ್ಕರಿಸುತ್ತದೆ. ಅಲ್ಲದೆ ಅದೊಂದು ಐತಿಹಾಸಿಕ ಅನಿವಾರ್ಯತೆಯೂ ಆಗಿದೆ. ಆದ್ದರಿಂದ ಸ್ವಂತಕ್ಕೆ ಬೇರೆ ಹೆಸರನ್ನು ಧರಿಸುತ್ತದೆ. ದಲಿತರು ಬರೆದದ್ದು ಮತ್ತು ಅಮೇರಿಕೆಯ ಯಾರೋ ಒಬ್ಬನು ಬರೆದದ್ದು ಕವಿತೆಯೇ ಆಗಿರುತ್ತದೆ. ಇದು ನಿಜವಾದರೆ ಈ ಹೆಸರು ಧರಿಸಿದ್ದೇಕೆ? ಇದಕ್ಕೆ ಕಾರಣಗಳುಂಟು. ಮೊದಲನೇ ಕಾರಣ ನೀವುಗಳು ಮತ್ತು ಎರಡನೇ ಕಾರಣ ಈವರೆಗಿನ ಭಾರತೀಯ ಸಾಹಿತ್ಯ ಹಾಗೂ ಈ ದೇಶ.

ಈ ದಲಿತ ಲೇಖಕರ ಒಂದು ದಂಡೇ ತಯಾರಾಗಿದೆ. ಆ ದಂಡಿನಲ್ಲಿ ಎದ್ದು ಕಾಣುವವರೆಂದರೆ ಕೇಶವ ಮೇಶ್ರಾಮ, ಬಾಬುರಾವ ಬಾಗುಲ, ಗಂಗಾಧರ ಪಾನತಾವಣೆ, ನಾರಾಯಣ ಸುರ್ವೆ, ದಯಾ ಪವಾರ, ಹರಿಭಾವೂ ಪಗಾರೆ, ವಾಮನ ಇಂಗಳೆ, ಹಿಂ. ಗೋ. ಬನಸೋಡೆ, ನಾಮದೇವ ಢಸಾಳ, ವಾಮನ ನಿಂಬಾಳಕರ, ರಾಜಾ ಢಾಲೆ, ಫ. ಮುಂ. ಶಿಂದೆ, ಸುಖರಾಮ ಹಿವರಾಳೆ, ಶಾಂತಾರಾಮ ಹಿವರಾಳೆ, ಯೋಗಿರಾಜ ವಾಘಮಾರೆ, ಪ್ರ. ಈ. ಸೋನಕಾಂಬಳೆ ಮುಂತಾದ ಲೇಖಕರು.

ನೀಗ್ರೋ ಸಾಹಿತ್ಯ ಹಾಗೂ ದಲಿತ ಸಾಹಿತ್ಯದ ಸಹಧರ್ಮಗಳು ಈ ಕೆಳಗಿನಂತಿವೆ-

೧. ನೀಗ್ರೋ ಹಾಗೂ ದಲಿತ ಲೇಖಕರು ತಮ್ಮ 'ಅಸ್ಮಿತೆ'ಯನ್ನು ಪತ್ತೆ ಹಚ್ಚುತ್ತಿದ್ದಾರೆ.

೨. ಎರಡೂ ಸಾಹಿತ್ಯದಲ್ಲಿಯ ಅನುಭವವು ವಿಷಮತೆಯ ಮೇಲೆ ಆಧಾರಗೊಂಡಿರುವ ಸಮಾಜ ಜೀವನದಿಂದ ಬಂದುದಾಗಿದೆ.

೩. ಇಬ್ಬರ ಸಾಹಿತ್ಯವೂ ಜೀವನ ದಾರಿಯಾಗಿದೆ. ನೀಗ್ರೋ ಹಾಗು ದಲಿತ ಲೇಖಕರು ಸಾಮಾಜಿಕ ಬಂಧನದ ಅರಿವಿನಿಂದ ಬರೆಯುತ್ತಾರೆ.

೪. ಈ ಎರಡೂ ಸಾಹಿತ್ಯ ಭಾಷೆಯು ಸಾಂಸ್ಕೃತಿಕ ಬಂಡಾಯದ ಭಾಷೆಯಾಗಿದೆ.

೫. ಈ ಎರಡೂ ಸಾಹಿತ್ಯದ ಮೂಲಕ ಹೊಸ ಸಾಂಸ್ಕೃತಿಕ ಮೌಲ್ಯದ ಅರಿವು ಪಡೆಯಲಾಗುತ್ತಿದೆ.

['ಮಾಯ ಮರಾಠಿ' ದಲಿತ ಸಾಹಿತ್ಯ ವಿಶೇಷಾಂಕ ಆಗಸ್ಟ ೧೯೭೫]

ಅಸ್ಪೃಶ್ಯನ ಆತ್ಮಕಥೆ

ಹೌದು, ನಾನು ಹೊಲೆಯ, ಮಾದಿಗ. ನನಗೆ ಅಸ್ಪೃಶ್ಯ, ಪಂಚಮ, ದಲಿತ, ಚಮ್ಮಾರ, ಮೋಚಿ ಭಂಗಿ, ಲಾಲ್‌ಬೇಗಿ, ಮಹಾರ್ ಇತ್ಯಾದಿ ಅನೇಕ ಹೆಸರುಗಳುಂಟು. ಭಾರತದಲ್ಲಿ ನಾನಿಲ್ಲದಿರುವ ಯಾವ ಮೂಲೆಯೂ ಇಲ್ಲ. ನನ್ನ ಕಥೆಯನ್ನು ನಾನೇ ತಿಳಿಸಲು ಬಯಸುತ್ತೇನೆ. ನನ್ನದೇ ಕಥೆ; ನನ್ನದೇ ನಾಲಿಗೆ. ನನ್ನ ಕಥೆಯನ್ನು ತಾವು ಯಾರೂ ಕೇಳಿರಲಾರಿರಿ. ಹೇಳುವವರು ತಾನೆ ಯಾರು ? ಯಾರು ತಾನೆ ಬರೆದಿದ್ದಾರೆ ? ಕೇಳುವ ಕುತೂಹಲವೂ ನಿಮಗಿರಲಾರದು. ಕಟ್ಟಡಕ್ಕೆ ತಳ ಪಾಯ ಹೇಗೋ ಹಾಗೆ ದೇಶಕ್ಕೆ ಸಮಾಜಕ್ಕೆ ನಾನು ತಳಪಾಯವಿದ್ದಂತೆ ; ಇಡೀ ಸಮಾಜದ ಭಾರ ಹೊತ್ತು ನಿಂತಿದ್ದೇನೆ ; ಸಮಾಜವೆಂಬ ಏಣಿಯ ಅತ್ಯಂತ ಕೆಳಗಿನ ಮೆಟ್ಟಿಲು ನಾನು. ಬೇಡವಾದುದನ್ನೆಲ್ಲಾ, ಕೊಳಕಾಗಿರುವುದನ್ನೆಲ್ಲಾ, ಅಸಹ್ಯವಾದ ಹೊಲಸನ್ನೆಲ್ಲಾ ಎಲ್ಲರೂ ತುಂಬಿಸುವ ಕಸದ ತೊಟ್ಟಿಯೂ ಹೌದು ನಾನು. ಊಟ ಮಾಡಿ ಎಸೆಯುವ ಎಲೆಯೂ ಹೌದು ನಾನು ; ಸಮಾಜ-ಮೂಕ, ಕಿವುಡ, ಕುರುಡನನ್ನಾಗಿ ಮಾಡಿ ಹೊಸ್ತಿಲಿನ ಬಳಿಯ ಕಾಲೊರೆಸುವ ಬಟ್ಟೆಯಂತೆ ಬಳಸುತ್ತಿದೆ.

ನಾನು ಒಬ್ಬ ಸಿಪಾಯಿಯೂ ಹೌದು ; ರಕ್ಷಿಸುವವನು. ಆದರೆ ಬಂದೂಕು, ಕತ್ತಿ, ಭಲ್ಲೆಗಳಲ್ಲ ನನ್ನ ಅಸ್ತ್ರಗಳು ಅಗತ್ಯ ಬಿದ್ದಲ್ಲಿ ಅವುಗಳನ್ನೂ ಬಳಸಲು ಸಿದ್ಧ. ಪೊರಕೆ, ಮಕ್ಕರಿ, ಮೂಳೆ, ಮಲಮೂತ್ರ ನನ್ನ ಶಸ್ತ್ರಾಸ್ತ್ರಗಳು. ನಾನು ಭಕ್ತನಲ್ಲ ; ಆದರೆ ದೇಶಭಕ್ತ. ಸೈನಿಕ ಬಾಹ್ಯಶತ್ರುಗಳಿಂದ ದೇಶವನ್ನು ರಕ್ಷಿಸಿದರೆ, ಪೋಲೀಸಿನವ ಆಂತರಿಕ ಶತ್ರುಗಳೊಡನೆ ಹೋರಾಡಿದರೆ, ಸಹಮಾನವರೆಲ್ಲರೂ ಆರೋಗ್ಯವಾಗಿರಲೆಂದು, ದೀರ್ಘಕಾಲ ಬದುಕಲೆಂದು, ನಿರೋಗಿಗಳಾಗಿರಲೆಂದು, ನಾನು ಸದಾ ಹೊಲಸಿನೊಡನೆ, ಕೊಳಕಿನೊಡನೆ ಹೋರಾಡುತ್ತಾ ಬಂದಿದ್ದೇನೆ. ಯುದ್ಧದ ಸಂದರ್ಭದಲ್ಲಿ ಮಾತ್ರ ಸೈನಿಕನ ಪ್ರಾಣ ಅಪಾಯಕ್ಕೊಳಗಾಗುತ್ತದೆ ; ಆದರೆ ನನ್ನ ಪ್ರಾಣ, ಬದುಕು, ಪ್ರತಿಷ್ಠೆ ಪ್ರತಿಕ್ಷಣ ಅಪಾಯದ ಅಂಚಿನಲ್ಲಿಯೇ ಇರುತ್ತದೆ ; ಗಂಡಾಂತರದಲ್ಲಿರುತ್ತದೆ. ಸೈನಿಕರನ್ನು ಆದರ ಗೌರವಗಳಿಂದ ಕಂಡರೆ ನನ್ನನ್ನು ಅಸ್ಪೃಶ್ಯತೆಯಿಂದ, ತಿರಸ್ಕಾರದಿಂದ. ಅಸಹ್ಯದಿಂದ ಕಾಣಲಾಗುತ್ತದೆ. ಈ ರೀತಿಯ ಕಾಣುವಿಕೆ ಪ್ರಪಂಚದ ಯಾವ ಭಾಗದಲ್ಲಿಯೂ, ಯಾವ ಸಮಾಜದಲ್ಲಿಯೂ ಇಲ್ಲ ; ಇದು ಭಾರತಕ್ಕೆ ಮಾತ್ರ ಸೀಮಿತ. ಉಚ್ಚ-ನೀಚ, ಮೇಲು-ಕೀಳುಗಳ ಆಧಾರದ ಮೇಲೆ ನಿಂತಿರುವ, ಸಮಾನತೆ, ಮಾನವೀಯತೆ, ಐಕ್ಯತೆ ವಿರೋಧಿಸುವ ಹಿಂದೂ ಧರ್ಮ ಇದಕ್ಕೆ ಮೂಲ ಕಾರಣ. ವ್ಯಕ್ತಿಯ ನಡತೆ ಮತ್ತು ಯೋಗ್ಯತೆಗಳಿಗೆ ಬದಲಾಗಿ ಈ ಧರ್ಮ ಹುಟ್ಟಿಗೆ ಅಧಿಕ ಮಹತ್ವ ಕೊಡುತ್ತದೆ. ಶ್ರೇಷ್ಠರು, ಪವಿತ್ರರು ಎಂದು ಹೆಮ್ಮೆ ಪಡುವ ಈ ಧರ್ಮದ ಅನುಯಾಯಿಗಳು ನೈರ್ಮಲ್ಯಕ್ಕೆ, ಸ್ವಚ್ಛತೆಗೆ ಬೆಲೆ ಕೊಡುವುದಿಲ್ಲ.

ಸಮಾಜ ಜೀವಂತವಾಗಿರಲು, ಸುಖವಾಗಿರಲು, ಸ್ವಚ್ಛವಾಗಿರಲು ಸಾವಿರಾರು ವರ್ಷಗಳಿಂದ ಬದುಕನ್ನು ಮೃತ್ಯುವಿನ ದವಡೆಗೊಯ್ಯುತ್ತಿದ್ದ ಹೊಲಸು-ಕೊಳಕನ್ನು ಬೀದಿ, ಕೇರಿ, ಗಲ್ಲಿ, ಸಂದು-ಗೊಂದಿ ಚರಂಡಿ, ಕಾರ್ಖಾನೆ, ಕಕ್ಕಸ್ಸುಗಳಿಂದ ತಲೆಯ ಮೇಲೆ ಹೊತ್ತು, ಹೊತ್ತು ನನ್ನ ಗುಡಿಸಿಲುಗಳ ಮುಂದೆ ರಾಶಿ ಹಾಕುತ್ತಾ ಸ್ವಂತ ನನ್ನ ಬದುಕನ್ನೇ ಮೃತ್ಯುವಿನೆಡೆಗೊಯ್ಯುತ್ತಾ ಬಂದಿರುವೆ. ನನ್ನ ಈ ತ್ಯಾಗಕ್ಕೆ, ಬಲಿದಾನಕ್ಕೆ, ಸೇವೆಗೆ ಸಮರ್ಪಣೆಗೆ ಪ್ರತಿಯಾಗಿ ದಾರಿದ್ರ್ಯ, ದಾಸ್ಯ, ಅಪಮಾನ, ತಿರಸ್ಕಾರ, ಅಜ್ಞಾನ, ಪಶುಗಳಿಗಿಂತಲೂ ಕೀಳಾದ ಸ್ಥಾನ ದೊರೆತಿದೆ. ಹಸು, ನಾಯಿ, ಬೆಕ್ಕು, ಕುರಿ, ಕೋಳಿ, ಹಂದಿಗಳನ್ನು ಸ್ಪರ್ಶಿಸಿದರೆ ಅಪವಿತ್ರರಾಗದವರು ನನ್ನ ನೆರಳಿನ ಮಾತ್ರದಿಂದಲೆ ಉಚ್ಚ ಜಾತಿಯೆನಿಸಿಕೊಂಡವರು ಅಪವಿತ್ರರಾಗಿ ಬಿಡುವಂತಹ ಸ್ಥಾನ ಸಿಕ್ಕಿದೆ. ಹಿಂದೂಗಳ ಈ ವರ್ತನೆಯನ್ನು ಕ್ರೈಸ್ತರು, ಮುಸಲ್ಮಾನರೂ ಅನುಕರಿಸುತ್ತಾ ಬಂದಿದ್ದಾರೆ.

ಯಾರನ್ನಾದರೂ ನಿಂದಿಸಲು, ದೂಷಿಸಲು, ಹಿಯಾಳಿಸಲು ನನ್ನ ಜಾತಿಯ ಹೆಸರು ಸದಾ ಸಿದ್ಧವಾಗಿರುತ್ತದೆ ; ಧಾರಾಳವಾಗಿ ಬಳಸಲಾಗುತ್ತದೆ. ಹಿಂದೂಗಳ ಪಾಲಿಗೆ ನನ್ನ ಜಾತಿ ಅಪ್ರಾಮಾಣಿಕತೆಯ, ವಂಚನೆಯ, ತುಚ್ಛತೆಯ, ಅಪವಿತ್ರತೆಯ ಕೊಳಕಿನ, ಪ್ರಪಂಚದಲ್ಲಿನ ಎಲ್ಲಾ ಕೆಡಕುಗಳ ಪ್ರತಿಮೂರ್ತಿ ಇದ್ದಂತೆ ! ಒಟ್ಟಿನಲ್ಲಿ ನನ್ನ ಜಾತಿಯ ಹೆಸರು ಲೇವಡಿ ಮಾಡಲು ಹೇಳಿ ಮಾಡಿಸಿದಂತಿದೆ. ಸಾಲದೆಂಬಂತೆ ನನ್ನ ಅಪಾರ ಪರಿಶ್ರಮಕ್ಕೆ, ಸೇವೆಗೆ ನನ್ನ ಮತ್ತು ನನ್ನ ಮಕ್ಕಳ ಅರೆಹೊಟ್ಟೆಗೂ ಆಗದ ಅತ್ಯಲ್ಪವಾದ ಪರಿಹಾರ ಸಿಗುತ್ತಾ ಬಂದಿದೆ. ಫಲವಾಗಿ "ಬಿಕ್ಷಾಂ ದೇಹಿ" ಎಂದು ಸದಾ ಕೈಗಳು ಚಾಚಿಕೊಂಡೇ ಇವೆ.

ನಾನು ಹೀನ-ದೀನ ಸ್ಥಿತಿಯಲ್ಲಿಯೇ ಸದಾ ಉಳಿದಿರುವಂತಾಗಲು ಬೇರೆ ಯಾವ ದೇಶದಲ್ಲಿಯೂ ಇಲ್ಲದ, ಯಾರಿಗೂ ಹೊಳೆಯದ, ಕಲ್ಪನಾತೀತವಾದ ಕ್ರೂರ ಕಾನೂನುಗಳನ್ನೆಲ್ಲಾ ಜಾರಿಗೆ ತರಲಾಗಿದೆ. ಊರಾಚೆ ಹಂದಿ ನಾಯಿಗಳ ಸಂಪರ್ಕದಲ್ಲಿ, ಇಡೀ ಊರಿನ ಹೊಲಸಿನ ರಾಶಿಗಳ ಪಕ್ಕದಲ್ಲಿ, ಸ್ಮಶಾನದ ಬೂದಿ ಹಾಗೂ ಸತ್ತ ಪ್ರಾಣಿಗಳ ದುರ್ಗಂಧಮಯ ವಿಷಗಾಳಿಯಿಂದ ಕೂಡಿದ, ಗಾಳಿ ಬೆಳಕಿಲ್ಲದ ಅಸಹ್ಯ ವಾತಾವರಣದ ನಡುವೆ ಸಾವು ಬದುಕುಗಳ ಮಧ್ಯೆ ನೆಲಸುವಂತಹ ಕಾನೂನು ಜಾರಿಗೆ ತರಲಾಯಿತು. ಇಷ್ಟವಿಲ್ಲದಿದ್ದರೂ ಬದುಕನ್ನು ಒತ್ತಾಯಪೂರ್ವಕವಾಗಿ ಹೇಗೋ ತಳ್ಳಿಕೊಂಡು ಬಂದಿದ್ದೇನೆ. ದಿನೇ ದಿನೇ ಕ್ರಮೇಣ ಸಾಯುತ್ತಾ, ಸಾಯುತ್ತಾ ಬಂದಿದ್ದು, ವಾಸ್ತವಿಕವಾಗಿ ನಾನು ಸತ್ತೇ ಹೋಗಿದ್ದೇನೆ. ಈ ಕಾನೂನುಗಳನ್ನೆಲ್ಲಾ ಸೃಷ್ಟಿಸಿರುವವರು ಬ್ರಾಹ್ಮಣರು. ನಾನು ಎಂದೆಂದಿಗೂ ದರಿದ್ರನಾಗಿ ಗುಲಾಮನಾಗಿಯೇ ಮುಂದುವರಿಯುವಂತಹ ಕಾನೂನುಗಳನ್ನು ಹಿಂದೂ ಧರ್ಮ ಸೃಷ್ಟಿಸಿತು.

ನನ್ನ ಶಾಸಕರು, ಶೋಷಕರು ದೈಹಿಕವಾಗಿ ಗುಲಾಮನಾಗಿ ಮುಂದುವರಿಯುವಷ್ಟಕ್ಕೆ ಮಾತ್ರ ತೃಪ್ತರಾಗದೆ ನಾನು ವಿದ್ರೋಹ

ಮಾಡದಿರಲೆಂದು, ಗರ್ಜಿಸದಿರಲೆಂದು ಉದ್ಧಾರ ಕ್ಕಾಗಿ ಯತ್ನಿಸದೆ ಕೇವಲ ಹೆಣದಂತೆ ಬಿದ್ದಿರಲೆಂದು ಎಂದೆಂದಿಗೂ ಮಾನಸಿಕವಾಗಿಯೂ ಟುಲಾಮನಾಗಿ ಮುಂದುವರಿಯುವ ಪಕ್ಕಾ ವ್ಯವಸ್ಥೆ ಮಾಡಿದರು. ನಾನು ಒಟ್ಟನಲ್ಲಿ ಅವರ ಪಾಲಿಗೆ ಜೀವಚ್ಛವವಾಗಿ ಉಳಿಯಬೇಕು.

ಶತಶತಮಾನಗಳಿಂದ ಕೊಳಕಿನ ಕ್ರಿಮಿಯಾಗಿ ೊಳೆಯುತ್ತಾ ಬಂದಿರುವೆ. ಅದೆಷ್ಟು ದೀರ್ಘಕಾಲ ಂದ ಹೀಗಿರುವೆನೋ ಜ್ಞಾಪಿಸಿಕೊಳ್ಳಲು ಸಾಧ್ಯ ಾಗುತ್ತಿಲ್ಲ. ಸತ್ಯ ಕಟುವಾಗಿರುತ್ತದೆ. ತಾವು ಹಿಸಲಾರಿರಿ. ಸಾವಿರಾರು ವರ್ಷಗಳು ದಾಸ್ಯ ುತ್ತು ದಾರಿದ್ರ್ಯಕ್ಕೆ ಬಲಿಯಾದುದರ ಫಲವಾಗಿ ಅನಿವಾರ್ಯವಾಗಿ ಪ್ರತ್ಯಕ್ಷವಾಗಿ ಯಾವ ರೀತಿಯಲ್ಲಿ ೂ ಕಾರಣನಲ್ಲದ ಅನೇಕ ಕೊರತೆಗಳು, ದೌರ್ಬಲ್ಯಗಳು, ಲೋಪಗಳು ನನ್ನಲ್ಲಿ ಆಳವಾಗಿ ಬೇರುಬಿಟ್ಟುಕೊಂಡಿದ್ದರೂ ನಾನು ಮಾತ್ರ ುಳ್ಳು ಹೇಳುವುದಿಲ್ಲ. ನೆನಪು ಮಸಕು ಮಸ ಾಗಿಬಿಟ್ಟಿದೆ. ಬಹಳ ದೂರ, ಬಹಳ ಹಿಂದೆ ೋಗಲು ಯತ್ನಿಸುತ್ತೇನೆ. ಆದರೆ ಸಾಧ್ಯವಾಗು ್ತಿಲ್ಲ. ಜ್ಞಾಪಕಶಕ್ತಿ ತಗ್ಗಿದೆ. ಆದರೂ ನಾನು ುಳ್ಳು ಹೇಳುವುದಿಲ್ಲ. ತಮಗೆ ಅಪನಂಬಿಕೆ ೂದಲ್ಲಿ ತಮ್ಮ ಧರ್ಮಗ್ರಂಥಗಳಾದ ರಾಮಾ ಯಣ, ಮಹಾಭಾರತ, ಪುರಾಣಗಳು ನ್ಯಾಯ ಶಾಸ್ತ್ರ, ಇತಿಹಾಸಗಳ ಪುಟಗಳನ್ನು ಸ್ವಲ್ಪ ತಿರುವಿ ಹಾಕಿ ! ಅವುಗಳಲ್ಲಿ ನನ್ನ ಬಗ್ಗೆ ಯಥೇಚ್ಛವಾಗಿ ಬರೆಯಲಾಗಿದೆಯೆಂದು ಕೇಳಿದ್ದೇನೆ. ಅದೆಲ್ಲಾ ುತ್ಸರದ, ದ್ವೇಷದ ಕ್ರೌರ್ಯದ ಬರವಣಿಗೆ. ನನ್ನನ್ನು ಹತ್ತಿಕ್ಕಲೆಂದೇ ಬ್ರಾಹ್ಮಣರು ಅಮಾ ುಷವಾದ ಪೈಶಾಚಿಕವಾದ ರೀತಿಯಲ್ಲಿ ಬರೆದಿರುವರು. ಮನು, ಆಪಸ್ತಂಬ, ಗೌತಮ ನಾರದ, ವಶಿಷ್ಠ, ಕೌಟಿಲ್ಯ, ವ್ಯಾಸ ವಾಲ್ಮೀಕಿ ಮುಂತಾದವರೆಲ್ಲರೂ ನನಗೆ ಕ್ರೂರವಾದ ಬದುಕನ್ನು ವಿಧಿಸಿರುವರು. ಅದರಂತೆ ಸ್ಮಶಾನ ನನ್ನ ಮನೆ ; ಹೆಣಗಳಿಗೆ ಸುತ್ತುವ ಬಿರಿಬಣ್ಣದ ಹರಕ ಚಿಂದಿ ಬಟ್ಟೆ ನನ್ನ ಉಡುಪು ! ಾಗೆ ಕೋಳಿಗಳ ರೆಕ್ಕೆಪುಕ್ಕೆ ನನ್ನ ಕಿರೀಟ ! ುಣ್ಣಿನ ಪಾತ್ರೆಗಳು ನನ್ನ ಸಂಪತ್ತು! ಎಂಜಲನ್ನ ುತ್ತು ಸತ್ತ ಪ್ರಾಣಿಗಳ ಕೊಳೆತ ಮಾಂಸ ನನ್ನ ಊಟ ! ಹಂದಿ ನಾಯಿ ್ತಿಗಳ ಒಡನಾಟ ! ಎಂಜಲು ಮತ್ತು ಿಂದಿ ಬಟ್ಟೆ ನನ್ನ ಇನಾಮು ! ಹೀಗೆ ಅಪಮಾನಕರವಾದ, ಅಸಹ್ಯಕರವಾದ ರೀತಿಯಲ್ಲಿ ಬಾಳುವಂತೆ ಆಜ್ಞೆ ಮಾಡಿದರು.

ಸತ್ತ ಪ್ರಾಣಿಗಳನ್ನು ಎಳೆದುಕೊಂಡು ಹೋಗುವ, ತಪ್ಪಿತಸ್ಥರಿಗೆ ಗಲ್ಲಿಗೇರಿಸುವ ಉದ್ಯೋಗ ನಿಗದಿಪಡಿಸಲಾಯಿತು. ಆತ್ಮ ಗೌರವ ಮತ್ತು ಅಷ್ಟೋ ಇಷ್ಟೋ ಇದ್ದ ಆಲೋ ಚನಾ ಶಕ್ತಿಯನ್ನು ಎಂದೆಂದಿಗೂ ಕಳೆದುಕೊಳ್ಳ ಲೆಂದು ನಂತರ ಮಲಮೂತ್ರಗಳನ್ನು ತಲೆಯ ಮೇಲೆ ಹೊರುವಂತೆ ವಿಧಿಸಲಾಯಿತು. ಈ ಕಾನೂನುಗಳು ಕ್ರಮೇಣ ಧರ್ಮದ ದೇವರ ನಿಯಮಗಳ ಅಂಗವಾಗಿ ಪರಿಣಮಿಸಿ ಸಾವಿರಾರು ವರ್ಷಗಳಿಂದ ಕಟ್ಟುನಿಟ್ಟಾಗಿ ನಿರ್ದಯವಾಗಿ ಆಚರಣೆಯಲ್ಲಿರುವಂತೆ ನೋಡಿಕೊಳ್ಳಲಾಯಿತು. ವಾಸ್ತವವಾಗಿ ಹಿಂದೂಗಳೆಲ್ಲರೂ ಪ್ರಾಮಾಣಿ ಕತೆಯಿಂದ, ತುಂಬು ಮನಸ್ಸಿನಿಂದ, ಏಕೈಕ ಮನಸ್ಸಿನಿಂದ ದೀರ್ಘಕಾಲ ಆಚರಿಸುತ್ತಾ ಬಂದಿ ರುವ ತಮ್ಮ ಧರ್ಮದ ಒಂದೇ ಒಂದು ನಿಯಮ ವೆಂದರೆ ಅದು ಅಸ್ಪೃಶ್ಯತೆ! ಈ ಅಸ್ಪೃಶ್ಯತೆಯನ್ನು ಯಾರು ಎಷ್ಟು ಪ್ರಾಮಾಣಿಕವಾಗಿ, ಕಠೋರ ವಾಗಿ ಆಚರಿಸುವರೋ ಅವರು ಶ್ರೇಷ್ಠ ಹಿಂದೂ ಗಳೆಂದೂ, ಮೇಲು ಜಾತಿಯವರೆಂದೂ ಪರಿಗಣಿ ಸಲ್ಪಡುತ್ತಿದ್ದರು. ಹಿಂದೂ ಧರ್ಮದ ಪ್ರಕಾರ ಅಗ್ರಜಾತಿಯವರಾಗಿ ಬಿಡುತ್ತಿದ್ದರು. ಬ್ರಾಹ್ಮಣ ಕ್ಷತ್ರಿಯ, ವೈಶ್ಯರೇ ಅಲ್ಲದೆ ಶೂದ್ರರೂ ಮತ್ತೆ ಕೆಲವರು ಅಸ್ಪೃಶ್ಯಜಾತಿಯವರೂ ಇದರಿಂದಾಗಿ ನನ್ನ ಬಗ್ಗೆ ಹೆಚ್ಚು ತಿರಸ್ಕಾರ, ಅಸಹ್ಯಭಾವನೆ ಯಿಂದ ಕಾಣಲು ಕಾರಣವಾಯಿತು. ಅಷ್ಟೇ ಅಲ್ಲ ಈ ಹೀನ ಜಾತಿಯವರು ಒಮ್ಮೊಮ್ಮೆ ತಮ್ಮ ಲ್ಲಿನ ಹೀನತೆಯಿಂದಾಗಿ ನನ್ನನ್ನು ತಿರಸ್ಕರಿಸುವಲ್ಲಿ ಮೇಲು ಜಾತಿಯವರನ್ನು ಮೀರಿಸುತ್ತಿದ್ದರು ; ಅವರೊಡನೆ ಪೈಪೋಟಿಗೇ ಇಳಿಯುತ್ತಿದ್ದರು. ಎಂದರೆ ತಪ್ಪಾಗದು.

ಬರಬರುತ್ತಾ ನನ್ನನ್ನು ತಿರಸ್ಕರಿಸುವುದು, ಸ್ಪರ್ಶಿಸದಿರುವುದು ಧರ್ಮದ ಬಹು ಮುಖ್ಯ ನಿಯಮವಾಗಿ ಪರಿಣಮಿಸಿತು. ನನ್ನ ಬಗ್ಗೆ ಅಸ್ಪೃಶ್ಯ ಭಾವನೆ ತ್ಯಜಿಸಿದವರೆಲ್ಲರೂ ಅನರ್ಹರೂ ಅಯೋಗ್ಯರೂ, ನೀಚರೂ ಆಗಿ ಪರಿಣಮಿಸಿಬಿಡು ತ್ತಿದ್ದರು. ಈ ಜಗದ್ಗುರುಗಳು, ಪಂಡಿತರು, ಇವರ ಅಂಧ ಅನುಯಾಯಿಗಳು ಇದರಿಂದ ತೃಪ್ತ ರಾಗದೆ ನನಗೆ ಶಿಕ್ಷಣ ಮತ್ತು ಉತ್ತಮ ಬದು ಕಿನ ಬಾಗಿಲುಗಳನ್ನೂ ಮುಚ್ಚಿಬಿಟ್ಟರು. ಅಜ್ಞಾನ ಮೌಢ್ಯ, ದಾರಿದ್ರ್ಯ, ಹೊಲಸನ್ನು ನನ್ನ ಪಾಲಿಗೆ ಭದ್ರಪಡಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ ಅವರು ಕೈಕೊಂಡ ಅತ್ಯಂತ ಉಗ್ರವಾದ, ಕ್ರೂರ ವಾದ ಕ್ರಮವೆಂದರೆ ನನ್ನ ಆತ್ಮಗೌರವ, ನೈತಿಕಶಕ್ತಿ ಉತ್ತಮ ಮಟ್ಟಕ್ಕೇರುವ ಬಯಕೆಗಳು ಹಾಗೂ ಸ್ವಾವಲಂಬನೆ ಯನ್ನು ಅಪಹರಿಸಿ ಅಂಗವಿಹೀನನನ್ನಾಗಿ ಮಾಡಿದ್ದು. ಇವೆಲ್ಲಕ್ಕೂ ಮಿಗಿಲಾಗಿ ನನ್ನಲ್ಲಿ ಆಶೆ, ಉತ್ಸಾಹ, ಹುಮ್ಮಸ್ಸು, ಸ್ಥೈರ್ಯ–ಧೈರ್ಯ, ಸಂಘಟನೆ ಮೂಡಿಸುತ್ತಿದ್ದ, ನನ್ನ ಬಾಳಿಗೊಂದು ಅರ್ಥ ಗುರಿ ದಾರಿ ತೋರಿಸುತ್ತಿದ್ದ ನನ್ನ ಪ್ರಾಚೀನ ಧರ್ಮವನ್ನು ಕಸಿದುಕೊಂಡು ನನ್ನ ಸರ್ವಸ್ವವನ್ನೂ ಅಪಹರಿಸಿಬಿಟ್ಟರು. ನನಗೆ ಧರ್ಮವಿದ್ದಲ್ಲಿ ಅದರ ಪ್ರಭಾವದಿಂದಾಗಿ ಸಂಘಟಿ ತನಾಗಿ ದಂಗೆ ಏಳುವನೆಂದೂ, ದಾಸ್ಯದ ಸಂಕೋ ಲೆಯಿಂದ ಬಿಡುಗಡೆಯಾಗಿ ಅನ್ಯಾಯದ ವಿರುದ್ಧ ಸೇಡು ತೀರಿಸಿಕೊಳ್ಳುವೆನೆಂದೂ ನನ್ನ ಶೋಷ ಕರು, ಶಾಸಕರು ಹೆದರಿ ನನ್ನ ಧರ್ಮದಿಂದ ನನ್ನನ್ನು ವಂಚಿಸಿದರು …………

[ಪ್ರಕಟವಾಗಲಿರುವ ಕೃತಿಯಿಂದ ಕೆಲವು ಸಾಲುಗಳು]

ಮೂಲ : ಭಗವಾನ್‌ದಾಸ್
ಕನ್ನಡಕ್ಕೆ : ಕೆ. ನಾರಾಯಣ ಸ್ವಾಮಿ

ಡಾ|| ಬಿ. ಆರ್. ಅಂಬೇಡ್ಕರ್ – ಎರಡು ಪ್ರಸಂಗಗಳು

ಹಿಂದಿಯಲ್ಲಿ ವಿದ್ಯಾವಾಚಸ್ಪತಿ ಸೋಹನಲಾಲ ಶಾಸ್ತ್ರಿಗಳು "ಬಾಬಾಸಾಹೇಬ್ ಬಿ. ಆರ್. ಅಂಬೇಡ್ಕರರೊಡನೆ ೨೫ ವರ್ಷ" ಎಂಬ ಕೃತಿ ರಚಿಸಿದ್ದು ಅದರಿಂದ ಆರಿಸಿದ ಘಟನೆಗಳನ್ನು ಕೆಳಗೆ ಕೊಡಲಾಗಿದೆ. ೧೯೩೧ರಿಂದ ೧೯೫೬ವರೆಗೆ ಶಾಸ್ತ್ರಿಗಳು ಒಂದೇ ಒಂದು ಕ್ಷಣವೂ ಅಗಲದೆ ಅತ್ಯಂತ ಸಮೀಪದಲ್ಲಿದ್ದವರು. ಶಾಸ್ತ್ರಿಗಳ ಗಮನಕ್ಕೆ ಬಾರದ ವಿಷಯಗಳೇ ಇರಲಿಲ್ಲ.

ಒಂದು

ಅಂಬೇಡ್ಕರರು ತರಬೇಕೆಂದಿದ್ದ ಹಿಂದೂ ಕೋಡ್‌ಬಿಲ್ ಬಗ್ಗೆ ವ್ಯಕ್ತವಾದ ವಿರೋಧ, ಪ್ರತಿಭಟನೆ ಅಷ್ಟಿಷ್ಟಲ್ಲ. ಕಾಂಗ್ರೆಸ್ಸಿಗರು, ಕಾಂಗ್ರೆಸ್ಸೇತರ ಹಿಂದೂಗಳು, ಹಿಂದೂಮಹಾಸಭೆ, ರಾಮರಾಜ್ಯ ಪರಿಷತ್ತು, ಆರ್ಯಸಮಾಜ ಮುಂತಾದುವುಗಳೆಲ್ಲಾ ಒಟ್ಟಾಗಿ ಜಾರಿಗೆ ಬಾರದಂತೆ ವಿರೋಧಿಸಿದರು. ಧಾರಾಳವಾಗಿ ದುಡ್ಡನ್ನೂ ಖರ್ಚುಮಾಡಿದರು. ಆದರೆ ಇದರಲ್ಲಿ ಆರ್ಯ ಸಮಾಜಿಗಳೂ ಸೇರಿರುವುದನ್ನು ಕಂಡು ಅಂಬೇಡ್ಕರರಿಗೆ ಆಶ್ಚರ್ಯವಾಯಿತು. ಆದ್ದರಿಂದ ಆರ್ಯ ಸಮಾಜದ ಹಿರಿಯ ವಿದ್ವಾಂಸರಾಗಿದ್ದ ಪಂಡಿತ ಗಂಗಾಪ್ರಸಾದ್ ಮತ್ತು ಪಂಡಿತ ಧರ್ಮದೇವ ವಿದ್ಯಾಲಂಕಾರ ವಿದ್ಯಾವಾಚಸ್ಪತಿಗಳೊಡನೆ ಖುದ್ದಾಗಿ ವಿಚಾರ ವಿನಿಮಯ ಮಾಡಲು ತಮ್ಮಲ್ಲಿಗೆ ಬರಮಾಡಿಕೊಂಡರು.

ಗಂಗಾಪ್ರಸಾದರಿಗೆ ೭೫ವರ್ಷವಾಗಿತ್ತು. ವಿರೋಧಕ್ಕೆ ಕಾರಣ ಕೇಳಿದರು. ಪ್ರಸಾದರು ಹಿಂದೂಗಳ ಅವಿಭಕ್ತ ಕುಟುಂಬ ಇದರಿಂದ ಚೂರುಚೂರಾಗುತ್ತದೆ ಎಂದರು. ಆಗ ಬಾಬಾರವರು "ನಿಮ್ಮ ಮನುಶಾಸ್ತ್ರಕಾರರೆ ತಂದೆ ಸತ್ತಮೇಲೆ ಮಕ್ಕಳು ಬೇರೆ ಬೇರೆಯಾಗಿ ಗೃಹಾಗ್ನಿ ಮಾಡಬೇಕು. ಪ್ರತ್ಯೇಕವಾಗಿ ಹವನ ಮಾಡುವುದರಿಂದ ಧರ್ಮ ಹೆಚ್ಚುತ್ತದೆ' ಎಂದು ಹೇಳಿರುವರಲ್ಲಾ!" ಎಂದು ವಿವರಿಸಿದರು. ಹಾಗೆಂದು ಎಲ್ಲಿ ಬರೆಯಲಾಗಿದೆ ಎಂದು ಪ್ರಸಾದರು ಪ್ರಶ್ನಿಸಲು, ಮೂಲಕೃತಿ ತರಿಸಿ ಅಲ್ಲಿಯೇ ಅಂಬೇಡ್ಕರರು ಕೆಳಗಿನ ಶ್ಲೋಕ ಪಠಿಸಿದರು.

ಏವಂ ಸಹ ವಸೆಯುರ್ವಾಪೃಥಗ್ವಾ ಧರ್ಮ ಕಾಮ್ಯಾ|

ಪೃಥಗ್ವಿವರ್ಧತೆ ಧರ್ಮಸ್ತಸ್ಮಾದ್ಧರ್ಮ್ಯಾಂ ಪೃಥಗ್ಕಿಕಿಯಾ [ಅಧ್ಯಾಯ 9 ಶ್ಲೋಕ ||| [ತಂದೆ ಸತ್ತ ನಂತರ ಮಕ್ಕಳು ಒಟ್ಟಾಗಿರಬಹುದು. ಇಲ್ಲವೆ ಬೇರೆ ಬೇರೆಯಾಗಬಹುದು. ಮಕ್ಕಳು ಬೇರೆ ಬೇರೆ ಆಗುವುದರಿಂದ ಧರ್ಮ ವೃದ್ಧಿಯಾಗುತ್ತದೆ. ಪ್ರತ್ಯೇಕವಾಗಿ ಧಾರ್ಮಿಕ ಕ್ರಿಯೆಗಳನ್ನು ಆಚರಿಸುವುದರಿಂದ ಧರ್ಮವೃದ್ಧಿಯಾಗುತ್ತದೆ.] ಗಂಗಾಪ್ರಸಾದರು ಪುನಃ ಬಾಯಿ ತೆರೆಯಲಿಲ್ಲ.

ನಂತರ ಪಂಡಿತ ಧರ್ಮದೇವರು "ತಮ್ಮ ಸಲಹೆ ಒಪ್ಪಬಹುದಾದರೂ, ವಿವಾಹವಿಚ್ಛೇದನದ ಕಾನೂನಿನಿಂದ ಗೃಹಸ್ಥಾಶ್ರಮದ ಪ್ರತಿಷ್ಠೆ ಕುಗ್ಗಿ ಹೋಗುತ್ತದೆ. ದಂಪತಿಗಳು ಕ್ಷುಲ್ಲಕ ಕಾರಣಗಳಿಗಾಗಿ ಜಗಳವಾಡಿ ನ್ಯಾಯಾಲಯಗಳನ್ನು ಹತ್ತಬೇಕಾಗುತ್ತದೆ. ಭಾರತೀಯ ಸಂಸ್ಕೃತಿ ಪಾಶ್ಚಾತ್ಯ ಸಂಸ್ಕೃತಿಗಿಂತ ಭಿನ್ನವಾದುದು. ಅಲ್ಲಿ ವಿವಾಹಗಳು ಕಾಂಟ್ರಾಕ್ಟಿನಂತೆ. ಯಾವ ಘಳಿಗೆಯಲ್ಲಾದರೂ ಮುರಿಯಬಹುದು. ಆದರೆ ನಮ್ಮ ವಿವಾಹಗಳು ಆತ್ಮಗಳ ಐಕ್ಯತೆಗೆ ಸಂಬಂಧಿಸಿದವು. ಈ ಆತ್ಮಗಳ ನಂಟು ಜನ್ಮಾಂತರಗಳವರೆಗೆ ಮುಂದುವರಿಯುವಂಥಾದ್ದು" ಎಂದು ತಮ್ಮ ವಿರೋಧಕ್ಕೆ ಕಾರಣ ನೀಡಿದರು.

ಆಗ ಬಾಬಾರವರು "ಒಬ್ಬ ಹಿಂದೂ ಹಲವರನ್ನು ವಿವಾಹವಾಗಿಯೂ ಪತ್ನಿಯನ್ನು ಅರ್ಧಾಂಗಿನಿ ಎನ್ನುತ್ತಾನೆ. ಹೇಗೆ ಸಾಧ್ಯ ? ನಾಲ್ಕುಮಂದಿ ಪತ್ನಿಯರನ್ನು ಪಡೆದಾಗ ಚತುರಾಂಗಿನಿ ಎನ್ನುವನೋ ಅಥವಾ ಆಗಲೂ ಅರ್ಧಾಂಗಿನಿ ಎನ್ನುವನೋ" ಎಂದು ಪ್ರಶ್ನಿಸಿದರು. ಪಂಡಿತರು "ನಮ್ಮ ಪುರುಷೋತ್ತಮ ಶ್ರೀರಾಮಚಂದ್ರ ಏಕಪತ್ನೀವ್ರತನಾಗಿದ್ದ" ಎಂದರು. ಅಂಬೇಡ್ಕರರು "ರಾಮನ ತಂದೆ ದಶರಥನಿಗೆ ಮೂವರು ಪತ್ನಿಯರಿದ್ದರು. ಇಂತಹ ಸಂದರ್ಭದಲ್ಲಿ ಪತ್ನಿಯರನ್ನು ಅರ್ಧಾಂಗಿನಿ ಎಂದು ಹೇಗೆ ಕರೆಯುವುದು ? ಅರ್ಧಾಂಗಿನಿ ಎಂದರೆ ಪತಿಯ ಅರ್ಧಭಾಗ ಎಂದು. ಒಬ್ಬನಿಗೆ ಒಬ್ಬ ಪತ್ನಿ ಇದ್ದಾಗ ಮಾತ್ರ ಹಾಗೆಂದು ಕರೆಯಬಹುದು" ಎಂದು ಉತ್ತರಿಸಿದರು. ಧರ್ಮದೇವರು "ನಮ್ಮ ಶ್ರೀರಾಮಚಂದ್ರ ಸೀತೆಯನ್ನು ಬಿಟ್ಟು ಬೇರೆಯವರತ್ತ ಕಣ್ಣೆತ್ತಿಯೂ ನೋಡುತ್ತಿರಲಿಲ್ಲ" ಎಂದರು.

ಆಗ ಬಾಬಾರವರು "ಕೃಷ್ಣನೂ ನಿಮ್ಮ ದೇವರೇ ಅಲ್ಲವೆ ? ಆತನಿಗೆ ಎಷ್ಟೊಂದು ಮಂದಿ ಮಡದಿಯರಿದ್ದರು ? ಶಾಸ್ತ್ರೋಕ್ತವಾಗಿ ಆದದ್ದು ಎಷ್ಟು ಮಂದಿಯನ್ನು? ಅಕ್ರಮವಾಗಿ ಹಿಡಿದದ್ದು ಎಷ್ಟು ಮಂದಿಯನ್ನು ? ಎಂದಾದರೂ ನೀವು ಈ ಬಗ್ಗೆ ಯೋಚಿಸಿರುವಿರಾ? ಮತ್ತೆ ನೀವು ಯಾವ ರಾಮನನ್ನು "ಮರ್ಯಾದಾ ಪುರುಷೋತ್ತಮ" ಎಂದು ಪೂಜಿಸುವಿರೋ ಆತ ಎಷ್ಟು ಮರ್ಯಾದೆ ಉಳಿಸಿ ಕೊಂಡಿದ್ದಾನೆ ? ಗರ್ಭವತಿ ಪತ್ನಿಯನ್ನು ಮನೆಯಿಂದ ಓಡಿಸಿದ. ಅಗ್ನಿ ಪರೀಕ್ಷೆಯ ನಂತರವೂ ಲೋಕಾಪವಾದಕ್ಕೆ ಹೆದರಿ ಗರ್ಭವತಿಯನ್ನು ಮೋಸದಿಂದ ಅರಣ್ಯಕ್ಕೆ ಅಟ್ಟಿದ್ದು ಇದು ನ್ಯಾಯವೆ ? ಆತ ನಿರ್ದಯಿ, ನಿರ್ಲಜ್ಜನಾಗಿರಲಿಲ್ಲವೆ ? ಸೀತೆ ನನ್ನ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದಲ್ಲಿ ಶ್ರೀರಾಮನಿಗೆ ಆಜೀವ ಕಾರಾಗೃಹ ಶಿಕ್ಷೆ ವಿಧಿಸುತ್ತಿದ್ದೆ. ಇಷ್ಟೇ ಅಲ್ಲ. ನಿಮ್ಮ ರಾಮ ಸುಳ್ಳು ಹೇಳುವುದರಲ್ಲೂ ನಿಸ್ಸೀಮ. ಶೂರ್ಪಣಿಖೆ ಪತಿಗಾಗಿ ಹುಡುಕುತ್ತಾ ರಾಮನ ಬಳಿಗೆ ಬಂದಾಗ 'ನಾನು ವಿವಾಹಿತ, ಪತ್ನಿ ಜೊತೆಯಲ್ಲಿಯೇ ಇದ್ದಾಳೆ ನನ್ನ ತಮ್ಮಲಕ್ಷ್ಮಣನೂ ಜೊತೆಯಲ್ಲಿದ್ದಾನೆ. 'ಅವನಿನ್ನೂ ಅವಿವಾಹಿತ. ವಿವಾಹವಾಗಲು ಕಾತುರದಿಂದಿದ್ದಾನೆ. ಅವನಲ್ಲಿ ಹೋಗಿ ವಿಚಾರಮಾಡು' ಎನ್ನುತ್ತಾನೆ. ನಿಮ್ಮ ಮರ್ಯಾದಾ ಪುರುಷೋತ್ತಮ ಇಲ್ಲಿ ಎಂತಹ ಹಸಿಸುಳ್ಳು ನುಡಿದಿದ್ದಾನೆ! ರಾಮನಿಗೆ ಊರ್ಮಿಳೆ

ಮರೆತು ಹೋಗಿದ್ದಳೆ ? ಲಕ್ಷ್ಮಣನಿಗೆ ವಿವಾಹದ ಇಚ್ಛೆ ಇರಲಿಲ್ಲವೆಂಬುದು ರಾಮನಿಗೆ ತಿಳಿದಿರಲಿಲ್ಲವೆ ? ರಾಮ ಏಕೆ ಸುಳ್ಳು ಹೇಳಬೇಕಾಗಿತ್ತು? ಯಾವ ಹೆಣ್ಣಿನೊಡನೆಯೂ ಹುಡುಗಾಟವಾಡಬಾರದೆಂಬ ಶಿಷ್ಟಾಚಾರ ರಾಮನಿಗೆ ತಿಳಿದಿರಲಿಲ್ಲವೆ? ಸಾಮಾನ್ಯ ಮಾನವರೂ ಹೀಗೆ ವರ್ತಿಸಬಾರದೆಂಬ ನಿಯಮವಿರುವಾಗ ಅವತಾರಪುರುಷನಾದ ರಾಮ ಹೀಗೆ ವರ್ತಿಸಬಹುದೆ?'' ಎಂದು ಸುದೀರ್ಘವಾಗಿ ಮಾತನಾಡಿದರು.

ವಾಲ್ಮೀಕಿ ರಾಮಾಯಣದಲ್ಲಿ ಈ ಪ್ರಸಂಗ ಎಲ್ಲೂ ಬರುವುದೇ ಇಲ್ಲವೆಂದು ಧರ್ಮದೇವರು ವಾದಿಸಿದರು. ಮನೆಗೆ ಹೋಗಿ ರಾಮಾಯಣವನ್ನು ಹತ್ತುಬಾರಿ ತಿರುವಿ ಹಾಕಿ ಕಾಣಿಸುತ್ತೆ ಎಂದರು ಬಾಬಾರವರು. ಮಾರನೆಯ ದಿನ ಧರ್ಮದೇವರು "ತಾವು ತಿಳಿಸಿದ್ದು ನಿಜ. ಕ್ಷಮಾಪಣೆ ಬೇಡುತ್ತೇನೆ" ಎಂದು ದೂರವಾಣಿ ಮೂಲಕ ತಿಳಿಸಿದರು.

ಮಾತಿನ ಮಧ್ಯೆ ಬಾಬಾರವರು "ತಮಗೆ ಅಭ್ಯಂತರವಿಲ್ಲದಿದ್ದಲ್ಲಿ ಚಾ ತರಿಸುತ್ತೇನೆ. ಕುಡಿಯುವಿರಾ ? ಸ್ಪೃಶ್ಯಾಸ್ಪೃಶ್ಯ ಪದ್ಧತಿ ಒಪ್ಪುವಿರಾ? " ಎಂದರು. "ನಾವು ಆರ್ಯಸಮಾಜಿಗಳು. ನಮ್ಮ ದೃಷ್ಟಿಯಲ್ಲಿ ತಾವು ಬ್ರಾಹ್ಮಣರು" ಎಂದರು ಪಂಡಿತರು. ಬಾಬಾರವರು ಉದ್ರಿಕ್ತರಾಗಿ "ನನ್ನನ್ನು ಬ್ರಾಹ್ಮಣ ಎಂದು ಕರೆಯುವುದು ಅಪಮಾನಕರ, ನಾನು ಇಂತಹ ವರ್ಣವ್ಯವಸ್ಥೆ ಒಪ್ಪುವುದಿಲ್ಲ" ಎಂದು ಕಟುವಾಗಿ ನುಡಿದರು.

ಅವರ ವಿಚಾರವಿನಿಮಯ ರಾತ್ರಿ 7 ರಿಂದ ಪ್ರಾರಂಭವಾಗಿ 9-30 ಆದರೂ ಮುಗಿಯುವ ಸೂಚನೆಗಳು ಕಾಣಲಿಲ್ಲ. ಅಂಬೇಡ್ಕರರ ದ್ವಿತೀಯ ಪತ್ನಿ ಈ ಅವಧಿಯಲ್ಲಿ ಮೂರು ಬಾರಿ ಅಡ್ಡಿಪಡಿಸಿದ್ದರು. ತಾಳ್ಮೆಗೆಟ್ಟ ಆಕೆ ನಿಸ್ಸಂಕೋಚವಾಗಿ, ಅಸಭ್ಯವಾಗಿ ಮಾತು ನಿಲ್ಲಿಸಿ ಮನೆಗೆ ಹಿಂದಿರುಗುವಂತೆ ಗದರಿದಳು. ಇಬ್ಬರೂ ಹೊರಡಲು ಸಿದ್ಧರಾದರು. ಅವರಿಬ್ಬರನ್ನೂ ಕಳುಹಿಸಲು ಬಸ್ಸು ನಿಲ್ದಾಣದವರೆಗೆ ಸೋಹನಲಾಲ್ ಶಾಸ್ತ್ರಿಯವರೂ ಹೊರಟರು. ದಾರಿಯಲ್ಲಿ ಪಂಡಿತರಿಬ್ಬರೂ "ನಿಮ್ಮ ಅಂಬೇಡ್ಕರರಾದರೋ ದೇವರಂತಿದ್ದಾರೆ. ಆದರೆ ಹೆಂಡತಿ ಒರಟು, ಅಸಭ್ಯಳು, ಅಶಿಸ್ತಿನವಳು, ಎಲ್ಲಿಂದ ತಂದರೋ ಈಕೆಯನ್ನು ? " ಎಂದು ಪ್ರಶ್ನಿಸಿದರು. "ಬಾಬಾ

ಕನ್ನಡಕ್ಕೆ

ಕೆ. ನಾರಾಯಣ ಸ್ವಾಮಿ

ಸಾಹೇಬರು ಜಾತಿಯಲ್ಲಿ ಅಸ್ಪೃಶ್ಯರು. ಆಕೆ ಜಾತಿಯಲ್ಲಿ ಬ್ರಾಹ್ಮಣಳು, ಇಬ್ಬರ ವ್ಯವಹಾರ, ಶಿಷ್ಟಾಚಾರ ತೂಗಿ ನೋಡಿ" ಎಂದರು ಶಾಸ್ತ್ರಿಗಳು. ಇಬ್ಬರೂ ಮರು ಮಾತನಾಡಲಿಲ್ಲ.

ಎರಡು

ಅಂಬೇಡ್ಕರ್ ಕಾಂಗ್ರೆಸ್ ಮಂತ್ರಿ ಮಂಡಲದಲ್ಲಿದ್ದೂ ಸಮಯ ಸಿಕ್ಕಿದಾಗಲೆಲ್ಲಾ ಪಕ್ಷದ ಸಿದ್ಧಾಂತಗಳನ್ನು, ಕಾಂಗ್ರೆಸ್ಸಿಗರನ್ನು ಕಟುವಾಗಿ ಟೀಕಿಸದೆ ಬಿಡುತ್ತಿರಲಿಲ್ಲ. ಇಂತಹ ಪಕ್ಷ ವಿರೋಧಿಗಳನ್ನು ನೆಹರೂರವರು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡಿದ್ದು ಆಶ್ಚರ್ಯಕರ ! ಆದರೆ ಇದರ ಹಿಂದೆ ಕಾಂಗ್ರೆಸ್ಸಿಗರ ಭಾರಿ ಸ್ವಾರ್ಥ ಇಲ್ಲದೆ ಇರಲಿಲ್ಲ. ಇದರಲ್ಲಿ ಗಾಂಧಿಯವರ ಪಾತ್ರವೂ ಸಾಕಷ್ಟಿದ್ದಿತು.

ಪಟೇಲರಂತೂ ಅಂಬೇಡ್ಕರರನ್ನು ನಖಶಿಖಾಂತ ದ್ವೇಷಿಸುತ್ತಿದ್ದರು. ಅಂಬೇಡ್ಕರರು ಕಾನ್‌ಸ್ಟಿಟ್ಯೂಯಂಟ್ ಅಸೆಂಬ್ಲಿಗೆ ಆರಿಸಿ ಬಾರದ ಹಾಗೆ ವಿಶೇಷ ಕ್ರಮಗಳನ್ನೇ ಕೈಗೊಂಡಿದ್ದರು. ಆದರೂ ಅಂಬೇಡ್ಕರರು ಸದಸ್ಯರಾಗುವುದು ತಪ್ಪಲಿಲ್ಲ. ಇದರಿಂದ ಪಟೇಲರು ಹೆಚ್ಚು ಜಾಗರೂಕತೆಯಿಂದ ಇರಬೇಕಾಗಿದ್ದಿತು. ಇತ್ತ ಗಾಂಧಿಯವರು ಅಂಬೇಡ್ಕರರನ್ನು ಮಂತ್ರಿಮಂಡಲದಲ್ಲಿ ಸೇರಿಸಿಕೊಂಡರೆ ಒಂದೇ ಕಲ್ಲಿಗೆ ಎರಡು ಹಣ್ಣು ಬೀಳಿಸಿದಂತಾಗುತ್ತೆ ಎಂದು ಭಾವಿಸಿದ್ದರು. ಮೊದಲನೆಯದಾಗಿ ರಾಜ್ಯಾಂಗ ನಿರ್ಮಾಣದಲ್ಲಿ ಅರ್ಹರಾದ, ಸೂಕ್ತರಾದ ಬೇರೊಬ್ಬರು ಅಂದು ಇಡೀ ಭಾರತದಲ್ಲಿಯೇ ಇರಲಿಲ್ಲ. ಎರಡನೆಯದಾಗಿ ಅಸ್ಪೃಶ್ಯರನ್ನು ಹಿಂದೂಗಳಿಂದ ಬೇರ್ಪಡಿಸುವಲ್ಲಿ ಮತ್ತೊಬ್ಬ ಜಿನ್ನಾ ಆಗಬಹುದಾದುದನ್ನು ತಪ್ಪಿಸಬೇಕಾಗಿತ್ತು. ಆದ್ದರಿಂದ ಗಾಂಧಿಯವರು ನೆಹ್ರೂ ಅವರಿಗೆ "ಸಂವಿಧಾನ ರಚಿಸುವುದು ಕಠಿಣ, ಕ್ಲಿಷ್ಟಕರ. ಅದನ್ನು ಅರಿತವರು ನಮ್ಮ ಪಕ್ಷದಲ್ಲಿ ಯಾರೂ ಇಲ್ಲವೇ ಇಲ್ಲ. ಸಪ್ರೂ ಹಾಗೂ ಜಯಕರ್ ಅವರಿಂದ ಸಾಧ್ಯವಾದರೂ ನಮ್ಮ ರಾಜಕೀಯ ಸಿದ್ಧಾಂತಗಳನ್ನು ಒಪ್ಪದವರು. ಅಷ್ಟೇ ಅಲ್ಲ ಈ ಹೊರೆಯನ್ನು ಅವರೂ ಹೊರಲಾರರು. ಅವರೇನಿದ್ದರೂ ಸಮಿತಿಯ ಸದಸ್ಯರಾಗಬಹುದು" ಎಂದು ಗುಟ್ಟಾಗಿ ಸೂಚಿಸಿದರು. ನೆಹರೂ ಅವರು ಈ ಸಲಹೆಗೆ ತುಟಿಪಿಟ್ಟೆನ್ನಲಿಲ್ಲ. ಪಟೇಲರು ಸೋಲಲೇಬೇಕಾಯಿತು. ರಾಜಕುಮಾರಿ ಅಮೃತಕೌರ್ ಮೂಲಕ ಅಂಬೇಡ್ಕರ್ ಅವರಿಗೆ ಸುದ್ದಿ ಮುಟ್ಟಿಸಿ ಕಾನೂನು ಮಂತ್ರಿ ಹಾಗೂ ರಾಜ್ಯಾಂಗ ಕರಡು ರಚನೆಯ ಅಧ್ಯಕ್ಷರನ್ನಾಗಿ ಮಂತ್ರಿ ಮಂಡಲದಲ್ಲಿ ಸೇರಿಸಿಕೊಳ್ಳಲಾಯಿತು. ●

ಕೋಟೆ

ಯಾರು ಕಟ್ಟಿದರಯ್ಯಾ ? ಯಾರು ಕಟ್ಟಿದರು?
ಎಡೆದೊರೆ ನಾಡಿನ ಅಂದವಾದ ಈ ಅಂಗಣದಲಿ
ದೂರ ದೂರ ಹರಡಿದ ದುರ್ಗಮವಾದ ಕೋಟೆ
ರಕ್ತಸಿಕ್ತವಾದ ಏಳುಸುತ್ತಿನ ಕೋಟೆ
ಯಾರು ಕಟ್ಟಿದರಯ್ಯಾ ? ಯಾರು ಕಟ್ಟಿದರು ?

ಬೆಟ್ಟಗಳ ಕುಟ್ಟಿ, ಹೆಬ್ಬಂಡೆ ಕಟೆದು
ಆನೆ ಗಾತ್ರದ ಕಲ್ಲೆತ್ತಿ ಅಡ್ಡಾಗಿ ನಿಲ್ಲಿಸಿದರು
ರಟ್ಟೆಯ ಸತುವು ಸವೆಸಿ ಬಿರುಕನು ಮೆತ್ತಿ
ಕಂದಕಗಳ ತೋಡಿ, ಕಣ್ಣೀರು ತುಂಬಿದರು
ಯಾಳು ? ಯಾರಿಗಾಗಿ ಈ ಕೋಟೆ, ಕೊತ್ತಳ
ಉದ್ದನೆಯ ಬುರುಜು, ಅಂಟಿದ ಅಂಬುಗಂಡಿ
ಆನೆ ನೂಕಿದರೂ ಮುರಿಯದ ಮುಳ್ಳಿನ ಅಗುಸೆ ಬಾಗಿಲು
ಯಾರಿಗಾಗಿ ಪ್ರತಿನಿತ್ಯ ಕತ್ತಿ ಕಾವಲು ಪಹರೆ
ಶಹನಶಾಹರ ಶಿರಪೇಚು, ರಾಜವೈಭೋಗದ ಹುಚ್ಚು
ಕಾಪಾಡಲು ಈ ಕೋಟೆ, ಈ ಕೊತ್ತಳ, ಈ ಪಡಂಗ
ಅಟ್ಟಹಾಸದ ಈ ರಣರಂಗ, ಚದುರಂಗ-
ದಾಳ ಉರುಳಿದವೆಷ್ಟೋ, ದಾರಿತಪ್ಪಿದರೆಷ್ಟೋ
ರಾಯರ ಸಾಂಪರಾಯಕೆ ಸಾರಮಾರಿಯಾದವರೆಷ್ಟೋ

ಸನ್ನದ್ದ ಸೂಚೀಯಾನ ಹೆಣದ ಬಟ್ಟೆ ನಿರ್ಮಿಸಿದವೆಷ್ಟೋ
ರಾಜರ ಅಸೂಯೆ ಯಾಗದಲಿ ಸತ್ತ ರಾವುತರೆಷ್ಟೋ
ವಿಲಾಸದಲಿ ಹೂತ ರಾಯರ ಬದುಕು ಭಾರವೆತ್ತಲು
ಸನ್ನೆಗೋಲಾಗಿ ಮುರಿದು ಬಿದ್ದ ಬಡಜೀವಿಗಳೆಷ್ಟೋ
ಅಂಗನೆಯರ ಅಂಗಸೌಷ್ಟವ ವ್ಯಂಜನಮಾಡಿ ನಂಜಿಕೊಂಡರೆಷ್ಟೋ
ಪಟ್ಟವೇರಿದೊಬ್ಬನಿಗಾಗಿ ಚಟ್ಟವೇರಿದವರೆಷ್ಟೋ

ತಳದ ಜನರ ತಳಮಳದ ದನಿಗೆ ಬಾಣಹೂಡಿದ-
ಶಬ್ದವೇಧಿ ನರಹಂತಕರ ನಿರಂತರ ಸಂತೆ ಸುವರ್ಣಯುಗವಂತೆ
ಸುವರ್ಣಾಕ್ಷರದಲಿ ಬರೆದ ಇತಿಹಾಸವಂತೆ
ಇದೊಂದು ಕಂತೆ: ಸುಳ್ಳು ಬೊಂಕುಗಳ ತೇಪೆಹಾಕಿ ಹೊಲಿದಂಥ ಬೊಂತೆ.
ಶತಮಾನಗಳ ಮಾನ ಕಳೆದ ಸವರ್ಣೀಯ ಅರಸರಿಗೆ ಅದು ಸುವರ್ಣಯುಗ
ಕಪ್ಪು ಜನರಿಗೆ ಮಾತ್ರ ಕರಿಯುಗ.

೨

ಇದು ಗತ ಇತಿಹಾಸವೆನಲೆ ?
ಕೋಟೆ ನಿರ್ಮಾಣ ಮುಗಿಯಿತೆನಲೆ ?
ಇಲ್ಲ ಇಲ್ಲ ಮುಗಿಯಲೇ ಇಲ್ಲ
ಕಟ್ಟುತ್ತಿರುವರು ಮತ್ತೆ ಯಾರೋ
ಹಾಳು ಬಿದ್ದ ಈ ಬುನಾದಿ ತೋಡಿ
ಎಬ್ಬಿಸುತ್ತಿರುವರು ಮತ್ತೆ ಯಾರೋ
ಆಕಾಶದೆತ್ತರಕೆ ಗೋಡೆಗಳ
ತೋಡುತ್ತಿರುವರು ಮತ್ತೆ ಯಾರೋ
ಪಾತಾಳದಾಳದ ಕಂದಕಗಳ
ಯಾವ ಶತ್ರುವಿನ ಭಯಕ್ಕೆ ಅಲ್ಲ
ಯಾವ ದಾಳಿಯ ಹೆದರಿಕೆ ಇಲ್ಲ
ಒಳಗಿದ್ದವರು ಹೊರಹೋಗದಂತೆ
ಸೂರ್ಯನ ಮುಖ ಕಾಣದಂತೆ
ನಮ್ಮವರು ನಮಗಾಗಿಯೇ
ನಿರ್ಮಿಸಿದ ಅದೃಶ್ಯ ಗೋಡೆಗಳು
ಏಳು ಸುತ್ತಿನ ಕೋಟೆಗಳು

ಅತಿಕ್ರಮಿಸಿದರೆ ಅವಮಾನ
ಕೊಲೆ, ಸುಲಿಗೆ, ಅಪಹರಣ.

ಮನೆಗೆ, ಮನಕೆ, ಮಾತಿಗೆ, ಕೃತಿಗೆ
ಪ್ರವೃತ್ತಿಗೆ ಧುರಂಧರರ ದಾಳಿಗಳು
ಹಗಲು ರಾತ್ರಿ ಗ್ರಹಣಗಳು

ಅಲ್ಲಿ ಕೋಟೆ, ಇಲ್ಲಿ ಕೊತ್ತಳ
ಅಲ್ಲಿ ಕಂದಕ, ಇಲ್ಲಿ ಬಂದೂಕ
ಅಲ್ಲಿನೆರಳು, ಇಲ್ಲಿ ನೆರಳು
ನೆರಳು ನೆರಳು ಎಲ್ಲಾ ನೆರಳು
ಅಲ್ಲಿ ನರಳು, ಇಲ್ಲಿ ನರಳು
ಎಲ್ಲೆಲ್ಲೂ ನರರ ನರಳು

ಹೇಳಯ್ಯಾ ಇತಿಹಾಸಕಾರನೆ–
ಇದು ಗತ ಇತಿಹಾಸವೆನಲೆ ?
ಕೋಟೆ ನಿರ್ಮಾಣ ಮುಗಿಯಿತೆನಲೆ ?

–ಜಂಬಣ್ಣ ಅಮರಚಿಂತ

ಹಿಂದೂಧರ್ಮದಲ್ಲಿ ಉಳಿಗಾಲವಿಲ್ಲದೆ ಕ್ರಿಶ್ಚಿಯನ್ನರಾದ ಅಸ್ಪೃಶ್ಯರು ಅಲ್ಲೂ ಕ್ರಿಶ್ಚಿಯನ್ ಅಸ್ಪೃಶ್ಯರಾಗಿದ್ದಾರೆ, ಬೌದ್ಧರಾದ ಅಸ್ಪೃಶ್ಯರು ನವಬೌದ್ಧರಾಗಿದ್ದಾರೆ ; ತಮ್ಮ ಮೂಲವನ್ನು ನೆನಪಿನಲ್ಲಿಟ್ಟುಕೊಂಡಿದ್ದಾರೆ. ಆದರೆ ಮುಸ್ಲಿಮರಾದ ಹೆಚ್ಚಿನ ಅಸ್ಪೃಶ್ಯರು ಮುಸ್ಲಿಂ ಧರ್ಮದಲ್ಲಿ ಎಷ್ಟೇ ತಾರತಮ್ಯ ಇದ್ದರೂ ಮುಸ್ಲಿಂರಾಗೆ ರಕ್ತವಾಗಿರುವುದರಿಂದ ತಮ್ಮ ವಂಶದ ತಿಳುವಳಿಕೆ ಇಲ್ಲದೆ ಮೊರದಬಾದ್, ದಾವಣಗೆರೆ ಮುಂತಾದಕಡೆ ಅಸ್ಪೃಶ್ಯ ಮುಸ್ಲಿಂ ಗಲಭೆಯೂ ನಡೆಯುತ್ತಿವೆ.

ಮುಸ್ಲಿಂ ಹರಿಜನರು

ನಿಸಾರ್ ಅಹಮದ್

ಹಿಂದೂಸ್ತಾನದಲ್ಲಿ ಹಿಂದೂಗಳು ಭಾರತೀಯ ಮುಸ್ಲಿಂ ಸಮುದಾಯವನ್ನು ಅಸ್ಪೃಶ್ಯತೆಯ ವಂಶ-ಎಂಬುದನ್ನು ಈಗಲೂ ಮರೆತಿಲ್ಲ. ಈ ಸಮುದಾಯದಲ್ಲಿ ಕೆಲವು ಮೇಲ್ ವರ್ಗದ ಜನ ಸ್ಪೃಶ್ಯ ವಂಶದವರೂ ಇದ್ದಾರೆ. ಈ ಮೇಲ್ ವರ್ಗದ ವಂಶದ ಜನರು ಇಂದು ಸಾಹಿತ್ಯ, ಸಂಗೀತ, ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಉನ್ನತ ಸ್ಥಾನವನ್ನು ಹೊಂದಿದ್ದಾರೆ. ಉದಾಹರಣೆಗೆ ಪ್ರಸಿದ್ಧ ಉರ್ದು ಹಾಗು ಪರ್ಷಿಯನ್ ಸಾಹಿತಿ ಡಾ॥ ಇಕ್ಬಾಲ್. ಇವರು ಕಾಶ್ಮೀರಿ ಬ್ರಾಹ್ಮಣ ವಂಶದಿಂದ ಬಂದ ಮುಸ್ಲಿಮರು. ಅದೇ ರೀತಿಯಲ್ಲಿ ಶ್ರೀಮಹ್ಮದ್ ಅಲಿ ಜಿನ್ನಾರವರು ಮಹಾತ್ಮ ಗಾಂಧೀಜಿಯವರ "ಬನಿಯಾ" ವಂಶದಿಂದ ಬಂದ ಮುಸ್ಲಿಮರು.

ಭಾರತೀಯ ಮುಸ್ಲಿಂ ಸಮುದಾಯದಲ್ಲಿ ತನ್ನಷ್ಟಕ್ಕೆ ತಾನೇ "ಪಕ್ಕಾ ಮುಸ್ಲಿಂ" ಎಂದು ಘೋಷಿಸಿಕೊಂಡಿರುವವರಿಗೂ ಹಾಗು ಇತರೇ ಕೀಳು ಜಾತಿಗಳಿಂದ ಮುಸ್ಲಿಮರಾಗಿರುವ ಜನರಿಗೂ ಆರ್ಥಿಕ, ಸಾಮಾಜಿಕ, ಹಾಗು ರಾಜಕೀಯವಾಗಿ ಊಹಿಸಲಸಾಧ್ಯವಾದ ಅಂತರವಿದೆ. ಈ ಎರಡೂ ವರ್ಗಗಳಲ್ಲಿ ಕೇವಲ ಶುಕ್ರವಾರಗಳು ರಂಜಾನ್ ಮತ್ತು ಬಕ್ರೀದ್ ಹಬ್ಬಗಳ ಪ್ರಾರ್ಥನೆಗಳಲ್ಲಿ ಮಾತ್ರ ಒಂದು ಅಥವಾ ಎರಡು ಗಂಟೆಗಳ ಆಧ್ಯಾತ್ಮಿಕ ಸಮಾನತೆ ಇರುತ್ತದೆ. ಪ್ರಾರ್ಥನೆಗಳ ನಂತರ ಪುನಃ ಬಡವ ಮತ್ತು ಶ್ರೀಮಂತ, ಮೇಲು ಮತ್ತು ಕೀಳು ಹಾಗು ದ್ವೇಷಗಳಿರುತ್ತವೆ. ಇದೇ ರೀತಿಯಲ್ಲಿ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಮ್ಮೇಳನ ಮಕ್ಕಾದಲ್ಲಿ ಹಜ್‌ಯಾತ್ರೆಯ ಹೆಸರಿನಲ್ಲಿ ಕೇವಲ ಕೆಲವೇ ದಿನಗಳವರೆಗೆ ಈ ಸಮಾನತೆ ಇರುತ್ತದೆ. ಈ ಯಾತ್ರೆ ಮುಗಿಸಿಕೊಂಡು ಹಿಂತಿರುಗುವ ಸಮಯದಲ್ಲಿ ಅಲ್ಲೇ ಜನಾಂಗ ದ್ವೇಷ, ರಾಷ್ಟ್ರೀಯ ದ್ವೇಷದ ಭಾವನೆಗಳು ಇರುತ್ತವೆ. ಇರಾನ್‌ನ ಮುಸ್ಲಿಮರು ಇರಾಕ್ ಮುಸ್ಲಿಂರನ್ನು, ಜೋರ್ಡಾನಿನ ಮುಸ್ಲಿಮರು ಸಿರಿಯಾದ ಮುಸ್ಲಿಮರನ್ನು, ಭಾರತದ ಮುಸ್ಲಿಂರನ್ನು ಪಾಕಿಸ್ತಾನದ ಮುಸ್ಲಿಮರು ದ್ವೇಷಿಸುತ್ತಾರೆ. ಸೌದಿ ಅರೇಬಿಯದ ಮುಸ್ಲಿಮರಂತೂ ಭಾರತೀಯ ಮುಸ್ಲಿಮರನ್ನು ಅತಿ ಕೀಳು ಮಟ್ಟದಿಂದ ನೋಡುತ್ತಾರೆ.

ಪಕ್ಕಾ ಮೇಲ್ಜಾತಿ ಹಿಂದುಗಳು ಮುಸ್ಲಿಮರ ಮುಂದೆ ಆಹಾರವನ್ನು ಮುಟ್ಟುವುದಿಲ್ಲ. ಹಾಗೆಯೇ ಈ ಹಿಂದೂಗಳ ಅಡಿಗೆ ಕೋಣೆಯನ್ನು ಒಬ್ಬ ಮುಸ್ಲಿಂ ಏನಾದರೂ ಪ್ರವೇಶಿಸಿದರೆ ಅದು ಅಪವಿತ್ರ ಸ್ಥಳವಾಗುತ್ತದೆ ಎಂಬ ಭಾವನೆ ಈಗಲೂ ಇದೆ. ಈ ಮೇಲ್ವರ್ಗದ ಹಿಂದೂ ಜನರು ಹರಿಜನರೊಡನೆ ಯಾವ ರೀತಿ ವರ್ತಿಸುತ್ತಾರೆಯೋ, ಮುಸ್ಲಿಮರೊಡನೆ ಅದೇ ರೀತಿ ವರ್ತಿಸುತ್ತಾರೆ. ಶ್ರೀ ಮಹ್ಮದಾಲಿ ಜಿನ್ನಾ ಅವರ ಅನುಭವವನ್ನು ಈ ರೀತಿ ಹೇಳಿದ್ದಾರೆ. "Every Time a Hindu Shakes Hand with me, he has to wash his hands (ಒಬ್ಬ ಹಿಂದು ನನ್ನ ಕೈಯನ್ನು ಕುಲುಕಿದಾಗ ಅವನು ಪ್ರತಿಯೊಂದು ಬಾರಿಯೂ ತನ್ನ ಕೈಯನ್ನು ಸ್ವಚ್ಛಗೊಳಿಸಬೇಕಾಗುವುದು.) ಇದೇರೀತಿ ಹರಿಜನ ನಾಯಕ ಬಾಬು ಜಗಜೀವನ ರಾಂರವರು ಕಾಶಿಯ ಸಂಸ್ಕೃತ ವಿಶ್ವ ವಿದ್ಯಾನಿಲಯದಲ್ಲಿ ಡಾ॥ ಸಂಪೂರ್ಣಾನಂದ ಅವರ ಪ್ರತಿಮೆಯನ್ನು ಅನಾವರಣ ಮಾಡಿದಾಗ ಸಿಟ್ಟಿಗೆದ್ದ ಬ್ರಾಹ್ಮಣರು ಬಾಬೂಜಿಯವರೆಡೆ ಚಪ್ಪಲಿ ಎಸೆದು ಅವರ ಪ್ರತಿಕೃತಿಯನ್ನು ಸುಟ್ಟ ನಂತರ ಡಾ॥ ಸಂಪೂರ್ಣಾನಂದರ ಪ್ರತಿಮೆಯನ್ನು ಗೋವಿನ ಸಗಣಿಯಿಂದ ತೊಳೆದರು.

ಭಾರತದಲ್ಲಿರುವ ಶೂದ್ರರ ವೃತ್ತಿಗಳು ಆಯಾ ಹೆಸರಿನ ಜಾತಿಗಳಾಗಿ ವಿಂಗಡಿಸಲ್ಪಟ್ಟಿರುತ್ತವೆ. ಇದೇ ರೋಗ ಮುಸ್ಲಿಂ ಜನಾಂಗಕ್ಕೂ ಅನ್ವಯಿಸುತ್ತದೆ. ಈ ಉಪಜಾತಿಗಳು ಈ ರೀತಿ ವಿಂಗಡಿಸಲ್ಪಟ್ಟಿವೆ [೧] ನದಾಫ್ ಅಥವಾ ಪಿಂಜಾರರು (ಹಾಸಿಗೆ ಹೊಲೆಯುವವರು), [೨] ಲೋಹಾರ್ [ಕಮ್ಮಾರ], [೩] ನಾಲ್ ಬಂದ್ [ಲಾಳಕಟ್ಟುವವನು], [೪] ಜಾಡಮಾಲಿ, ತೋಟಿ, ಹಲಾಲ್‌ಖೋರ್ [ಊರಿನ ನೈರ್ಮಲ್ಯ ಮಾಡುವವರು] [೫] ಮೋಚಿ [ಚಮ್ಮಾರ], [೬] ಧೋಬಿ [ಅಗಸ], [೭] ಜುಲಾಯಿ [ನೇಕಾರರು], [೮] ರಾಜ್ [ತರಗಾರ], [೯]ಬಂಜಾರ್ [ಹಾವಾಡಿಗ], [೧೦] ಮಚ್ಛಲ್‌ಹಾರ್ [ಮೀನುಗಾರ], ಬನಿಯಾ ಮುಸ್ಲಿಂ, ಬಡಗಿ, ಕುಂಬಾರರು ಇತ್ಯಾದಿ. ಈ ಉಪಜಾತಿಗಳಿಗೆ ಸೇರಿದ ಮುಸ್ಲಿಮರ ಮತ್ತು ಪಕ್ಕಾ ಮುಸ್ಲಿಮರ ನಡುವೆ ಮದುವೆ, ಆಚಾರ ವಿಚಾರ, ಮನೋರಂಜನೆಗಳಲ್ಲಿ ವ್ಯತ್ಯಾಸಗಳಿವೆ. ಆದರೆ ಬೌದ್ಧ ಕ್ರೈಸ್ತ, ವೀರಶೈವ ಧರ್ಮಗಳಿಗೆ ಮತಾಂತರ ಹೊಂದಿದ ಹರಿಜನರು ಹರಿಜನರಾಗಿಯೇಇದ್ದಾರೆ.

ಭಾರತದ ಮುಸ್ಲಿಮರಿಗೆ ತಮ್ಮ ವಂಶದ ಹುಟ್ಟುವಿಕೆ ಬಗ್ಗೆ ತಿಳುವಳಿಕೆ ಇಲ್ಲ. ಹಾಗೆಯೇ ಹರಿಜನರಿಗೆ ಭಾರತದ ಬಹುತೇಕ ಮುಸ್ಲಿಮರು ತಮ್ಮ ಪೂರ್ವಿಕ ಸಹೋದರರು ಎಂಬುದು ತಿಳಿದಿಲ್ಲ. ಇದು ಮೊರಾದಾಬಾದ್, ದಾವಣಗೆರೆ ಮುಂತಾದ ಕಡೆ ಇವರೆಡೂ ಪಂಗಡಗಳ ಮಧ್ಯೆ, ನಡೆದ ಗಲಭೆಗೆ ಕಾರಣ ಇರಬಹುದು.

ಅಸ್ಪೃಶ್ಯತೆಯ ಅನುಭವ, ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಗಳನ್ನು ಕಂಡು ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ತಮ್ಮ ಅಸಮಾಧಾನವನ್ನು ಮಹಾತ್ಮ ಗಾಂಧೀಜೀಯವರ ಬಳಿ ತೋರ್ಪಡಿಸಿ ಹೇಳಿದ ಮಾತಗಳು ಮಾರ್ಮಿಕ. ಅದೇನೆಂದರೆ: "Gandhiji I have no home Land ....How can I call This Land my own home land and this religion my own. where in we are treated worse than cats and dogs where in we can not get water to drink ? No Self-respecting untouchable will be proud of this land........"

ಕಮ್ಯುನಿಸಂ ಭಾರತದಲ್ಲಿ ಹುಟ್ಟಲಿಲ್ಲ, ಮೊಳಕೆಯೊಡೆಯಲಿಲ್ಲ, ಚಿಗುರಲಿಲ್ಲ, ಮರವಾಗಲಿಲ್ಲ, ಒಣ ತರ್ಕವಾಯಿತು. ಭಾರತದ ಮನುಷ್ಯರ ಚೇತನದ ಕೈಕಾಲು ಕತ್ತರಿಸಿರುವ ಮತ ಧರ್ಮ ಜಾತಿ ಬಗ್ಗೆ ಮಾತಾಡದ ಮಾರ್ಕ್ಸಿಸ್ಟರಿಗೆ ಮಾರ್ಕ್ಸ್‌ನಕೆಳಗಿನ ಮಾತುಗಳು ಈಗಲಾದರೂ ಇಷ್ಟು ಹಾಳಾದ ಮೇಲಾದರೂ ಕಣ್ಣು ತೆರೆಸಬಲ್ಲವೆ ? ಇಲ್ಲಿಂದಲಾರು ಕಮ್ಯುನಿಸಂ ಹುಟ್ಟಬಹುದೆ ?

ಕೊಳೆತ ಭಾರತ ಕುರಿತು ಮಾರ್ಕ್ಸ್ ಮಾತುಗಳು

ಯುಗಾರಂಭದಲ್ಲಿ ಭಾರತದ ದುರವಸ್ಥೆಗೆ ಅನುವು ಮಾಡಿಕೊಟ್ಟಂಥ ಬ್ರಾಹ್ಮಣರ ಪೌರಾಣಿಕ ಕಾಲಗಣನೆಯ ಕ್ರಮವು ಕ್ರಿಶ್ಚಿಯನ್ನರು ಸೃಷ್ಟಿಸಿದ ಜಗತ್ತಿಗಿಂತ ಹೆಚ್ಚು ಅನಾಗರೀಕವಾದುದು .... ಹಿಂದೂಸ್ತಾನದಲ್ಲಿ ಸುವರ್ಣ ಯುಗವೊಂದಿತ್ತು ಎಂದು ನಂಬುವವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

* * *

ಭೋಗಲಾಲಸೆಯ ಮತ್ತು ಗೋಳಿನ ಲೋಕಗಳ ಈ ವಿಚಿತ್ರ ಸಮ್ಮಿಲನವನ್ನು ನಾವು ಹಿಂದೂಸ್ತಾನದ ಪುರಾತನ ಧರ್ಮಗಳಲ್ಲಿ ಕಾಣಬಹುದು.

* * *

ಈ (ಹಿಂದೂ) ಧರ್ಮವು ಏಕಕಾಲಕ್ಕೇ ವಿಷಯ ಲಂಪಟತ್ವದಿಂದ ತುಂಬಿ ತುಳುಕುತ್ತಿರುವ ಮತ್ತು ದೇಹದಂಡನೆಯ ತಪಶ್ಚರ್ಯದ ಧರ್ಮವಾಗಿದೆ....ಸನ್ಯಾಸಿಯ ಮತ್ತು ಸೂಳೆಗಾರಿಕೆಯ ಧರ್ಮವೂ ಆಗಿದೆ.

* * *

....ಹಿಂದೂಸ್ತಾನದಲ್ಲಿ ಕೊಲೆಯನ್ನೇ ಒಂದು ಧಾರ್ಮಿಕ ಕ್ರಮವನ್ನಾಗಿ ಮಾಡಲಾಗಿತ್ತು. ಎಂಬುದನ್ನು ನಾವು ಮರೆಯಬಾರದು. ಈ ಪುಟ್ಟ ಸಮುದಾಯಗಳು ಜಾತಿ ಭೇದಗಳ, ಗುಲಾಮಗಿರಿಯ ಮಾಲಿನ್ಯತೆಯಿಂದ ತುಂಬಿದ್ದವು. ಮಾನವನನ್ನು ಪರಿಸ್ಥಿತಿಯ ಪ್ರಭುವನ್ನಾಗಿ ಮೇಲೇರಿಸುವ ಬದಲು ಅವನನ್ನು ಬಾಹ್ಯ ಪರಿಸ್ಥಿತಿಗಳಿಗೆ ಅಧೀನನನ್ನಾಗಿ ಮಾಡಿದ್ದವು. ಅವು ಸ್ವಯಂವಿಕಾಸದ ಸಾಮಾಜಿಕ ಸ್ಥಿತಿಯನ್ನು ಎಂದೆಂದಿಗೂ ಬದಲಾಗದ ನೈಸರ್ಗಿಕ ವಿಧಿನಿಯಮದಂತೆ, ಪರಿವರ್ತಿಸಿದ್ದವು........ನಿಸರ್ಗದ ಪ್ರಭುವಾದ ಮಾನವನು ಮಂಡಿಯೂರಿ ಕುಳಿತು ಹನುಮಾನ್ ಎಂದು ಕರೆಸಿಕೊಳ್ಳುವ ಮಂಗನನ್ನು ಮತ್ತು ಸಬ್ಬಲಾ ಎಂದು ಕರೆಸಿಕೊಳ್ಳುವ ಹಸುವನ್ನು ಪೂಜಿಸುವಂತೆ ಮಾಡಿದ್ದವು.

* * *

ಮಹಮ್ಮದೀಯರ ಹಾಗೂ ಹಿಂದೂಗಳ ನಡುವೆ ಅಷ್ಟೇ ಅಲ್ಲ, ಕುಲ ಕುಲದ ನಡುವೆ, ಜಾತಿ ಜಾತಿಯ ನಡುವೆ ವಿಭಜಿತವಾದ (ಹಿಂದೂಸ್ತಾನ) ದೇಶ ; ಎಲ್ಲ ಸದಸ್ಯರ ನಡುವೆಯೂ ಸಾಮಾನ್ಯವಾದ ವಿಕರ್ಷಣೆ ಹಾಗೂ ಸ್ವಭಾವಜನ್ಯ ಪ್ರತ್ಯೇಕತೆ ಇವುಗಳಿಂದುಂಟಾಗುವ ಒಂದು ರೀತಿಯ ಸಮತೋಲನದ ಮೇಲೆ ಆಧಾರವಾದ ಸಮಾಜ.

* * *

ಭಾರತ ಎನ್ನುವುದು ವಿವಿಧ ಕುಲಗಳ, ಬುಡಕಟ್ಟುಗಳ ಜಾತಿ ಮತಗಳ ಹಾಗೂ ರಾಜಪ್ರಭುತ್ವಗಳ ಪರಸ್ಪರ ಹಗೆತನ ಕೂಡಿಕೊಂಡಿರುವ ಒಂದು ಭೌಗೋಳಿಕ ಏಕತೆಯಾಗಿದೆ. ಬ್ರಿಟಿಷರು ತಮ್ಮ ಸರ್ವೋಚ್ಚತೆಯನ್ನು ಮುಂದುವರೆಸಿಕೊಂಡು ಹೋಗಲು ಯಾವಾಗಲೂ ಈ ಹಗೆತನವೇ ಪ್ರಮುಖ ಸೂತ್ರವಾಗಿ ನೆರವಾಗಿತ್ತು.

[ಸಂಗ್ರಹ :''Indian The First Independence war of 1857-59'' by Marx & Engels ಕೃತಿಯಿಂದ]

WITH BEST
WISHES FROM

A
WELL WISHER

ಜೂನ್ ೫ ರಂದು ಬರಲಿದೆ!

ಮೀಸಲಾತಿ

'ಪಂಚಮ' ಅಪೂರ್ವ ವಿಶೇಷ ಸಂಚಿಕೆ

ಪುಟ ೪೦ಕ್ಕೂ ಹೆಚ್ಚು ! ಬೆಲೆ ೨ ರೂಪಾಯಿ ಮಾತ್ರ !!

(ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಬೆಂಗಳೂರಿನಲ್ಲಿ ಏಪ್ರಿಲ್ 18 ಮತ್ತು 19 ರಂದು ನಡೆಸಿದ ಐತಿಹಾಸಿಕ ರಾಷ್ಟ್ರೀಯ ಚಿಂತನೆಯ ಪೂರ್ವಪಾಠ ನಿಮ್ಮದಾಗುವುದು)

ಈಗಲೇ ನಿಮ್ಮ ಪ್ರತಿ ಕಾಯ್ದಿರಿಸಿರಿ

ಮೀಸಲಾತಿ ಸಂಚಿಕೆಯ ಲೇಖಕರು

ಭಗವಾನ್‌ದಾಸ್, ಕುಲದೀಪನಾಯರ್, ಎ. ಬಿ. ಷಾ, ದೇಜಗೌ
ಪಿ. ಲಂಕೇಶ್, ಯು. ಆರ್. ಅನಂತಮೂರ್ತಿ, ಇಂದೂಧರ ಹೊನ್ನಾಪುರ
ರಫಿಕ್ ಅಹಮದ್, ಪ್ರಾಣೇಶರಾವ್, ಗೋವಿಂದರಾವ್ ದೇಶಪಾಂಡೆ
ಯಶವಂತರಾವ್ ಘೋರ್ಪಡೆ, ಧರ್ಮಲಿಂಗಂ, ಜಿ. ಎಚ್. ನಾಯಕ್
ಸಿದ್ಧಲಿಂಗಯ್ಯ, ಜಿ. ರಾಮಕೃಷ್ಣ, ರಘುರಾಮ ಶೆಟ್ಟಿ, ಮುಮ್ತಾಜ್ ಅಲಿಖಾನ್
ಪೋಲಂಕಿ ರಾಮಮೂರ್ತಿ, ಗೇಲ್ ಓಮೆಟ್ ಇತ್ಯಾದಿ

ಇಂದೇ ಚಂದಾದಾರರಾಗಿರಿ:
ವಾರ್ಷಿಕ ಚಂದಾ ರೂ. ೧೦
ಆಜೀವ ಚಂದಾ ರೂ. ೧೫೦

ಈ ಕ್ಷಣವೇ ಬರೆಯಿರಿ :

ಸಂಪಾದಕ, ಪಂಚಮ,
2ನೇ ಕ್ರಾಸ್, ಮಾಸ್ತಿಗುಡಿ,
ಅಶೋಕಪುರಂ, ಮೈಸೂರು-8

ಈ ಪತ್ರಿಕೆಯು ರಾಮದೇವ ರಾಕೆ ಅವರ ಸಂಪಾದಕತ್ವದಲ್ಲಿ, ಅನುಪಮ ಪ್ರಿಂಟರ್ಸ್, ಮೈಸೂರು 2 ಇಲ್ಲಿ ಮುದ್ರಿಸಲ್ಪಟ್ಟು, ಎಚ್. ಗೋವಿಂದಯ್ಯ ಅವರಿಂದ ಪ್ರಕಟಿಸಲ್ಪಟ್ಟಿತು. ವಿಳಾಸ : ಮಾಸ್ತಿಗುಡಿ, 2ನೇ ಕ್ರಾಸ್, ಅಶೋಕಪುರಂ, ಮೈಸೂರು-8